ಮಾನವಿಕ ಕರ್ನಾಟಕ

ಸಂಪುಟ ೩೩

ಸಂಚಿಕೆ ೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೪

ಮಾನವಿಕ ಕರ್ಣಾಟಕ

ಸಂಪುಟ ೩೩, ಸಂಚಿಕೆ ೪

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು

೨೦೦೪

MANAVIKA KARNATAKA : A Kannada Quarterly of the University of Mysore, Volume 33, Number 4, Edited by Prof. Ambalike Hiriyanna and Dr. R. Ramakrishna. Published by the Director, Prasaranga, University of Mysore, Manasagangotri, Mysore 570 006

© ಹಕ್ಕುಗಳನ್ನು ಕಾದಿರಿಸಿದೆ

ಪ್ರಧಾನ ಸಂಪಾದಕರು

ಪ್ರೊ. ಎಸ್. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ

ಡಾ. ಆರ್. ರಾಮಕೃಷ್ಣ

ಮುದ್ರಕರು

ನಿರ್ದೇಶಕರು

ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ' ದ ೩೩ನೆಯ ಸಂಪುಟದ ನಾಲ್ಕನೆಯ ಸಂಚಿಕೆ ಇದೀಗ ಓದುಗರ ಕೈ ಸೇರುತ್ತಿದೆ. ಮಾನವಿಕ ವಿಭಾಗದ ಕೆಲವಾರು ಕ್ಷೇತ್ರಗಳಿಗೆ ಸಂಬಂಧಪಟ್ಟ ೧೨ ಲೇಖನಗಳು ಈ ಹೊತ್ತಿಗೆಯಲ್ಲಿ ಅಡಕವಾಗಿವೆ. ಸಂಶೋಧನಾತ್ಮಕ ದೃಷ್ಟಿಯಿಂದ ಲೇಖನಗಳು ಜಿಜ್ಞಾಸು ಓದುಗರ ಕುತೂಹಲವನ್ನು ತಣಿಸುವಲ್ಲಿ ಸಾಕಷ್ಟು ನೆರವಾಗುತ್ತವೆ.

ವಿಶ್ವವಿದ್ಯಾನಿಲಯದಲ್ಲಿ ಮಾತ್ರವಲ್ಲದೆ ಹೊರಗಡೆಯ ಬಗೆಬಗೆಯ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ವಿದ್ವಾಂಸರಿಗೆ ಮತ್ತು ಸಂಶೋಧಕರಿಗೆ 'ಮಾನವಿಕ ಕರ್ನಾಟಕ' ಒಂದು ಮಹತ್ವದ ವೇದಿಕೆಯನ್ನು ಕಲ್ಪಿಸುವಲ್ಲಿ ಸಮರ್ಥವಾಗಿದೆ. ಈ ಸದಾವಕಾಶವನ್ನು ಸಮರ್ಥವಾಗಿ ಓದುಗ ಬಂಧುಗಳು ಬಳಸಿಕೊಳ್ಳುತ್ತಾರೆಂದು ನಿರೀಕ್ಷಿಸಲಾಗಿದೆ.

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಜೆ. ಶಶಿಧರ ಪ್ರಸಾದ್ ಅವರು ಹಾಗೂ ಕುಲಸಚಿವರಾದ ಶ್ರೀ ಎನ್. ಡಿ. ತಿವಾರಿಯವರು ಈ ಪತ್ರಿಕೆಗಳನ್ನು ಹೊರತರುವಲ್ಲಿ ವಿಶೇಷ ಆಸ್ಥೆ ವಹಿಸಿದ್ದಾರೆ. ಅವರಿಗೂ, ಈ ಹೊತ್ತಗೆಯನ್ನು ಸಂಪಾದಿಸಿಕೊಟ್ಟಿರುವ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ಆರ್. ರಾಮಕೃಷ್ಣ ಅವರಿಗೂ, ಲೇಖನಗಳನ್ನು ಬರೆದುಕೊಟ್ಟು, ಸಂಶೋಧನ ಕ್ಷೇತ್ರದಲ್ಲಿ ತಮ್ಮನ್ನು ವಿಶೇಷವಾಗಿ ತೊಡಗಿಸಿಕೊಂಡಿರುವ ಲೇಖಕ ಬಂಧುಗಳಿಗೂ, ಈ ಹೊತ್ತಗೆಯ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿಕೊಟ್ಟಿರುವ 'ಶ್ರೀನಿವಾಸ ಡಿ.ಟಿ.ಪಿ.ಸೆಂಟರ್'ನ ಶ್ರೀ ಡಿ. ವಿ. ಶ್ರೀವತ್ಸ ಅವರಿಗೂ, ಅಚ್ಚುಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ, ಎಂದಿನಂತೆ ಈ ಕೆಲಸ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಎಸ್. ಲಕ್ಷ್ಮೀ ನಾರಾಯಣ ಅರೋರಾ
ಪ್ರಧಾನ ಸಂಪಾದಕರು

ಸಂಪಾದಕೀಯ

ಎಂದಿನಂತೆ ಸಾಮಾಜಿಕ ವಿಜ್ಞಾನಗಳಿಗೆ ಸಂಬಂಧಿಸಿದ ಅಭ್ಯಾಸಪೂರ್ಣ ಬರಹಗಳೊಡನೆ ಉಪಯುಕ್ತವೂ ಸಕಾಲಿಕವೂ ಎನಿಸಿದ ಪ್ರಚಲಿತ ಸಾಮಾಜಿಕ, ಆರ್ಥಿಕ ಹಾಗೂ ಮಾನಸಿಕ ಸಮಸ್ಯೆಗಳನ್ನು ಕುರಿತ ಲೇಖನಗಳನ್ನು ತನ್ನ ಒಡಲೊಳಗೆ ಹುದುಗಿಸಿಕೊಂಡಿರುವ ಸಂಪುಟ ೩೩ ಸಂಚಿಕೆ ೪ನ್ನು ನಿಮ್ಮ ಕೈಗಿಡಲು ಸಂತೋಷವೆನಿಸುತ್ತದೆ.

ಬಿ. ಸಿ. ನೀಲಕಂಠ ಅವರ 'ಪ್ರಚಲಿತ ಅರ್ಥವ್ಯವಸ್ಥೆಯಲ್ಲಿ ಗ್ರಾಹಕತ್ವ' ಲೇಖನ ಭಾರತದ ಅರ್ಥವ್ಯವಸ್ಥೆಯ ಬಗೆಗೆ ತಿಳಿಯಬಯಸುವವರಿಗೆ, ಆ ಅರ್ಥವ್ಯವಸ್ಥೆಯಲ್ಲಿ ಭಾರತೀಯ ಗ್ರಾಹಕನ ಪಾತ್ರದ ಬಗೆಗೆ ಮಾಹಿತಿ ಮಾಡಿಕೊಳ್ಳಬಯಸುವವರಿಗೆ ಬೇಕಾದ ತಿಳಿವಳಿಕೆಯನ್ನು ದೊರಕಿಸಿಕೊಡುವ ಒಂದು ಯಶಸ್ವೀ ಪ್ರಯತ್ನವಾಗಿದೆ. ಈ ಲೇಖನ ಭಾರತದಲ್ಲಿ ಗ್ರಾಹಕರ ಪರಿಸ್ಥಿತಿ ತಿಳಿವಳಿಕೆಯ ಕೊರತೆಯಿಂದ ಎಂಥ ಶೋಚನೀಯ ಸ್ಥಿತಿಗೆ ತಲುಪಿದೆ ಎಂಬುದನ್ನು ಅಂಕಿ ಅಂಶಗಳೊಡನೆ ಸಾಧಾರವಾಗಿ ನಿರೂಪಿಸುತ್ತದೆ. ಈ ದೇಶದಲ್ಲಿ ಗ್ರಾಹಕ ರಕ್ಷಣೆ ಮೂರು ಹಂತದ ವೇದಿಕೆಗಳಲ್ಲಿ ನಡೆಯುತ್ತಿದ್ದರೂ ಜನಸಾಮಾನ್ಯರು ಅದರ ಸದ್ಬಳಕೆಯನ್ನು ಮಾಡಿಕೊಳ್ಳದಿರುವುದರ ಬಗೆಗೆ ಲೇಖಕರು ವಿಷಾದಿಸಿದ್ದಾರೆ. ಒಟ್ಟಿನಲ್ಲಿ ಗ್ರಾಹಕ ತನ್ನ ಹಕ್ಕುಬಾಧ್ಯತೆಗಳನ್ನು ಅರಿತುಕೊಂಡು ಪ್ರಜ್ಞಾವಂತನಾಗಬೇಕಾದರೆ ಎಲ್ಲ ವರ್ಗದ ಜನರಿಗೆ ಸಮಗ್ರ ಶಿಕ್ಷಣ ದೊರೆಯುವಂತಾಗಬೇಕು ಎಂದು ಆಗ್ರಹಪೂರ್ವಕವಾಗಿ ಪ್ರತಿಪಾದಿಸಲಾಗಿದೆ.

ಸುಸ್ಥಿರ ಅಭಿವೃದ್ಧಿಯ ಪಥದಲ್ಲಿ ಸಾಗಲು ಪರಿಸರ ಪೂರಕ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಅಗತ್ಯವನ್ನು ಮನಗಾಣಿಸುವ ಬರಹ ಜೆ. ಆರ್. ಪರಮೇಶ ಅವರ 'ಸುಸ್ಥಿರ ಅಭಿವೃದ್ಧಿಗೆ ಮಳೆಕೊಯ್ಲು'. ಮುಖ್ಯವಾಗಿ ಮಳೆ ನೀರನ್ನು ಸಂಗ್ರಹಿಸುವ, ಅದನ್ನು ವ್ಯವಸ್ಥಿತವಾಗಿ ಬಳಸುವ ಅಗತ್ಯವನ್ನು ಚರ್ಚಿಸುವ ಅತ್ಯಂತ ಪ್ರಸ್ತುತವಾದ ಲೇಖನ ಇದು. ಬೇಸಿಗೆ ದಿನಗಳನ್ನು ನಿರಾತಂಕವಾಗಿ ಎದುರಿಸಲು ಮನೆ ಹಾಗೂ ಸುತ್ತಲಿನ ಪರಿಸರದಲ್ಲಿ ನೀರನ್ನು ಶೇಖರಿಸಲು ಮತ್ತು ಇಂಗಿಸಲು ಆ ಮೂಲಕ ನೀರಿನ ಅಂತರ್ಜಲ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳ ಬಗೆಗೆ ಅಗತ್ಯ ಮಾಹಿತಿ ಒದಗಿಸುವ ಒಂದು ಉಪಯುಕ್ತ ಹಾಗೂ ಸಕಾಲಿಕ ಬರಹ ಕೂಡ. ಜಲ ಕಲ್ಯಾಣದಿಂದ ಜನ ಕಲ್ಯಾಣದತ್ತ ಸಾಗುವ ಪರಿಯನ್ನು ಲೇಖಕರು ಅತ್ಯಂತ ಹೃದ್ಯವಾಗಿ ಇಲ್ಲಿ ನಿರೂಪಿಸಿದ್ದಾರೆ.

ಬದಲಾದ ಆರ್ಥಿಕ ನೀತಿಯಿಂದಾಗಿ ಬುಡಕಟ್ಟು ಜನರ ಬದುಕು ಸ್ಥಿತ್ಯಂತರದ ಹಾದಿಯಲ್ಲಿರುವುದು ಎಲ್ಲರಿಗೂ ವೇದ್ಯವಾಗಿರುವ ಸಂಗತಿ. ಕಾಡಿನ ಮಧ್ಯೆ ಅದರ ಆಸರೆಯಿಂದ

ಬದುಕುತ್ತಿದ್ದ ಇವರ ಅಸ್ತಿತ್ವಕ್ಕೆ ಒದಗಿ ಬಂದಿರುವ ಸಂಚಕಾರ, ನಾಗರಿಕ ಸಂಪರ್ಕದ ಅನಿವಾರ್ಯತೆಯಲ್ಲಿ ಬದುಕು ನಡೆಸಬೇಕಾಗಿರುವ ಸಂದಿಗ್ಧವನ್ನು ತಿಳಿಸಿಕೊಡುವ 'ಅಳಿಯುತ್ತಿರುವ ಬುಡಕಟ್ಟು ಸಂಸ್ಕೃತಿ' ಬರಹ ಬುಡಕಟ್ಟು ಜನರ ಶೋಚನೀಯ ಸ್ಥಿತಿಯನ್ನು ಕಟ್ಟಿಕೊಡುತ್ತದೆ. ಸ್ಥಳಾಂತರದಿಂದಾಗಿ ಅವರ ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿ, ಪ್ರತ್ಯೇಕತೆಯ ಸಮಸ್ಯೆ, ಅನಕ್ಷರತೆ, ನಿರಾಶ್ರಿತ ಬದುಕು ಅವರನ್ನು ಕಂಗೆಡಿಸಿದೆ. ಅಲ್ಲದೆ ಕಾಡುಗಳ ನಾಶದೊಂದಿಗೆ ಕಾಂಕ್ರಿಟ್ ಕಟ್ಟಡಗಳು ಬೆಳೆಯುತ್ತಿರುವುದರಿಂದ ಅವರ ಜೀವನ ವಿಧಾನವೇ ಪಲ್ಲಟಗೊಳ್ಳುತ್ತಿದೆ. ಪರಂಪರಾಗತ ಜೀವನಕ್ರಮವನ್ನು ಕೈಬಿಡದೆ ಹೊಸತರ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗದ ಸಂದಿಗ್ಧದಲ್ಲಿ ಅವರು ಬದುಕಬೇಕಾದ ಅನಿವಾರ್ಯತೆಯನ್ನು ಪ್ರಕೃತ ಲೇಖನ ವಿವೇಚಿಸುತ್ತದೆ.

ಹಲವಾರು ಶಾಖೆಗಳಾಗಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವ ಆನ್ವಯಿಕ ಭಾಷಾವಿಜ್ಞಾನದ ವಿವಿಧ ಮುಖಗಳನ್ನು ಆರ್. ರಾಮಕೃಷ್ಣ ಅವರು 'ಆನ್ವಯಿಕ ಭಾಷಾವಿಜ್ಞಾನದ ಇತ್ತೀಚಿನ ಪರಿಕಲ್ಪನೆಗಳು' ಲೇಖನದಲ್ಲಿ ಪರಿಚಯಿಸಿದ್ದಾರೆ. ಇಲ್ಲಿ ಪರಿಚಯಿಸಲಾಗಿರುವ ಮುಖ್ಯ ಶಾಖೆಗಳಲ್ಲಿ ೧ ಮನೋ ಭಾಷಾವಿಜ್ಞಾನ ೨ ಸಾಮಾಜಿಕ ಭಾಷಾವಿಜ್ಞಾನ ೩ ಜೈವಿಕ ಭಾಷಾವಿಜ್ಞಾನ ೪ ನರವ್ಯೂಹ ಭಾಷಾವಿಜ್ಞಾನ ೫ ವೈದ್ಯಶಾಸ್ತ್ರಾತ್ಮಕ ಭಾಷಾವಿಜ್ಞಾನ ೬ ಭಾಷಾ ಬೋಧನೆ ೭ ಭಾಷಾಂತರ ೮ ಶೈಲಿ ವಿಜ್ಞಾನ ೯ ಜನಪದ ಭಾಷಾವಿಜ್ಞಾನ ೧೦ ಗಣಕ ಭಾಷಾವಿಜ್ಞಾನಗಳು ಸೇರಿವೆ. ಸೂಕ್ತ ಉದಾಹರಣೆ ಹಾಗೂ ಅಗತ್ಯ ವಿವರಗಳೊಡನೆ ಈ ಒಂದೊಂದನ್ನೂ ಪರಿಚಯಿಸಿರುವುದು ಆಸಕ್ತರ ದೃಷ್ಟಿಯಿಂದ ಉಪಯುಕ್ತ ಎನ್ನಿಸಿದೆ. ಈ ಒಂದೊಂದೂ ಶಾಖೆಯ ಸ್ಥೂಲಪರಿಚಯದೊಡನೆ ಈ ಕ್ಷೇತ್ರಗಳನ್ನು ಸಾರ್ಥಕ ರೀತಿಯಲ್ಲಿ ಬಳಸಿಕೊಳ್ಳುವ ಬಗ್ಗೆಯೂ ತಿಳಿಸಿಕೊಟ್ಟಿರುವುದು ಗಮನಾರ್ಹ.

ಪರ್ವೀನ್ ಅವರ 'ಮುಸ್ಲಿಂ ಜನಪದ ನಂಬಿಕೆಗಳು' ಮುಸ್ಲಿಂ ಸಮುದಾಯದಲ್ಲಿ ಪ್ರಚಲಿತವಿರುವ ನಂಬಿಕೆಗಳನ್ನು ಪರಿಚಯಿಸುವ ಬರಹ. ಧಾರ್ಮಿಕ, ಗೃಹ, ಪ್ರಾಣಿಗಳಿಗೆ ಸಂಬಂಧಿಸಿದವು, ಪಕ್ಷಿಗಳಿಗೆ ಸಂಬಂಧಿಸಿದವು, ಹೆಣ್ಣಿಗೆ ಸಂಬಂಧಿಸಿದವು, ಕನಸಿಗೆ ಸಂಬಂಧಿಸಿದವು, ದಿನಗಳಿಗೆ ಸಂಬಂಧಿಸಿದವು, ವಸ್ತುಗಳಿಗೆ ಸಂಬಂಧಿಸಿದವು ಮತ್ತು ಸಂಕೀರ್ಣ ನಂಬಿಕೆಗಳು ಎಂದು ಗುಂಪಾಗಿಸಿ ಆಯ್ದ ಕೆಲವು ನಂಬಿಕೆಗಳನ್ನು ಪಟ್ಟಿ ಮಾಡಿ ಕೊಡಲಾಗಿದೆ. ಈ ನಂಬಿಕೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ನೋಡಿದಾಗ ಇತರ ಸಮುದಾಯಗಳ ನಂಬಿಕೆಗಳ ನೇರ ಪ್ರಭಾವವನ್ನು ಇಲ್ಲಿ ಗುರುತಿಸಬಹುದಾಗಿದೆ.

'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' ಲೇಖನ ವಿ. ಪ್ರಸನ್ನಕುಮಾರ್ ಅವರಿಂದ ರಚಿತವಾದುದು. ಪ್ರಕೃತ ಲೇಖನದಲ್ಲಿ ರಾಜರ್ಷಿ ಕೃಷ್ಣರಾಜ ಒಡೆಯರ್ ಅವರ ಜೀವನ ಸಾಧನೆಗಳ ಹಿರಿಮೆಗರಿಮೆಗಳನ್ನು ಸಂಕ್ಷೇಪವಾಗಿ ತಿಳಿಸಿಕೊಡುವ ಪ್ರಯತ್ನವಿದೆ.

ಅಸ್ಪೃಶ್ಯರು, ಹಿಂದುಳಿದ ಸಮುದಾಯಗಳು ಮತ್ತು ಅಲ್ಪಸಂಖ್ಯಾತರ ಏಳಿಗೆಗಾಗಿ ಮಹಾರಾಜರು ನಡೆಸಿದ ಪ್ರಾಮಾಣಿಕ ಪ್ರಯತ್ನಗಳು ಇಲ್ಲಿ ದಾಖಲುಗೊಂಡಿವೆ. ಒಟ್ಟಿನಲ್ಲಿ ಮಹಾರಾಜರ ಸಾಮಾಜಿಕ ಕಳಕಳಿ, ದಕ್ಷ ಹಾಗೂ ನಿರ್ಭೀತ ಪಾರದರ್ಶಕ ಆಡಳಿತದ ಸಮಗ್ರ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಎಲ್. ಮಂಜುಳಾಕ್ಷಿ ಅವರ 'ಮನೆಯ ಭಾಷೆ ಮತ್ತು ಶೈಕ್ಷಣಿಕ ಭಾಷೆ' ಒಂದು ಅಭ್ಯಾಸಪೂರ್ಣ ಬರಹ. ಮಗುವಿನ ಭಾಷಾ ಕಲಿಕೆಗೆ ಮನೆಯ ವಾತಾವರಣ ಹಾಗೂ ಶಾಲಾ ಪರಿಸರ - ಎರಡೂ ಪರಿಸರದ ಪಾತ್ರ ತುಂಬ ಮುಖ್ಯ ಎಂಬುದನ್ನು ಯುಕ್ತ ನಿದರ್ಶನಗಳೊಡನೆ ನಿರೂಪಿಸಲಾಗಿದೆ. ಒಂದು ಇನ್ನೊಂದನ್ನು ಅವಲಂಬಿಸಿರುವುದರಿಂದಲೂ ಎರಡೂ ಕಡೆ ಅನುಕೂಲಕರವಾದ ವಾತಾವರಣ ನಿರ್ಮಾಣಗೊಂಡು ಭಾಷಾ ಕಲಿಕೆ ಸಾಧ್ಯವಾಗುತ್ತದೆ ಎಂದು ಲೇಖಕರು ಇಲ್ಲಿ ಪ್ರತಿಪಾದಿಸಿರುವುದು ಗಮನಾರ್ಹ.

ವಿ. ವಿಜಯಮ್ಮ ಅವರ 'ಗಾನಪ್ಪನಹಟ್ಟಿ ಗೊಲ್ಲರ ಮರಣ ಸಂಪ್ರದಾಯ' ಗೊಲ್ಲ ಸಮಾಜದಲ್ಲಿ ಪ್ರಚಲಿತವಿರುವ ಸಾವಿನ ಸಂಬಂಧವಾದ ರೂಢಿ, ಪದ್ಧತಿ, ವಿಧಿ-ನಿಷೇಧ, ಸಂಸ್ಕಾರ-ಸಂಪ್ರದಾಯಗಳನ್ನು ಸವಿವರವಾಗಿ ಪರಿಚಯಿಸುವ ಲೇಖನ. ಗೊಲ್ಲ ಸಂಸ್ಕೃತಿಯ ಗಂಭೀರ ಅಧ್ಯಯನಕ್ಕೆ ಪೂರಕ ಸಾಮಗ್ರಿಯಾಗಿರುವುದರಿಂದ ಉಪಯುಕ್ತ ಪ್ರಯತ್ನ ಎನಿಸಿದೆ.

ಭಾಷೆ ಸಂಸ್ಕೃತಿಯ ಪ್ರತಿಬಿಂಬವಾಗಿರುವುದರಿಂದ ಭಾಷಾಂತರ ಕಾರ್ಯದಲ್ಲಿ ಸಂಸ್ಕೃತಿ ಮಹತ್ವದ ಪಾತ್ರವಹಿಸುತ್ತದೆ. 'ಭಾಷಾಂತರದಲ್ಲಿ ಭಾಷೆ ಮತ್ತು ಸಾಂಸ್ಕೃತಿಕ ಅಂಶಗಳ ಪಾತ್ರ' ಎಂಬ ಸಿ. ಎಸ್. ಪೂರ್ಣಿಮಾ ಅವರ ಬರಹ ಅತ್ಯಂತ ಸಮರ್ಥ ಹಾಗೂ ಅರ್ಥಪೂರ್ಣ ರೀತಿಯಲ್ಲಿ ಅದನ್ನು ಸಾಧಾರವಾಗಿ ಪ್ರತಿಪಾದಿಸುತ್ತದೆ. ಸಂಸ್ಕೃತಿಯ ಸಮಸ್ಯೆ ಭಾಷಾಂತರದಲ್ಲಿ ಅನಿವಾರ್ಯವಾಗುವುದು ಸೃಜನ ಸಾಹಿತ್ಯದಲ್ಲಿ. ಭಾಷಾಂತರದಲ್ಲಿ ಸಾಂಸ್ಕೃತಿಕ ಪದಗಳ ಅನುವಾದ ಕಠಿಣ. ಒಂದು ಸಂಸ್ಕೃತಿಯಲ್ಲಿನ ಭಾವನೆಗಳ ಸೂಕ್ಷ್ಮಗಳನ್ನು ಮತ್ತೊಂದು ಸಂಸ್ಕೃತಿಯಲ್ಲಿ ತರುವುದು ಬಲು ಕಷ್ಟ - ಈ ಎಲ್ಲ ಸಂಗತಿಗಳನ್ನು ಮನವರಿಕೆ ಮಾಡಿಕೊಟ್ಟಿರುವ ಲೇಖಕರು ಕೆಲವೆಡೆ ಆ ಸಮಸ್ಯೆಗಳಿಗೆ ಯುಕ್ತ ಪರಿಹಾರಗಳನ್ನೂ ಮಾದರಿಗಳನ್ನೂ ಸೂಚಿಸಿದ್ದಾರೆ.

ವಿಜಯಲಕ್ಷ್ಮಿ ಅವರ 'ಕನ್ನಡ ಜನಪದ ತ್ರಿಪದಿಗಳಲ್ಲಿ 'ತವರು': ಒಂದು ವಿಶ್ಲೇಷಣೆ' ಎಂಬ ಲೇಖನ ಹೆಣ್ಣು ತನ್ನ ತಂದೆ-ತಾಯಿ, ಒಡಹುಟ್ಟು, ಅತ್ತಿಗೆ-ನಾದಿನಿ, ಗೆಳತಿಯರು -ಹೀಗೆ ವಿವಿಧ ಮುಖಗಳಿಂದ ಹೊಂದಿರಬಹುದಾದ ಬಹುಮುಖೀ ಬಾಂಧವ್ಯವನ್ನು ಇಲ್ಲಿ ವಿವೇಚನೆಗೆ ಎತ್ತಿಕೊಳ್ಳುತ್ತದೆ. ಪ್ರಕೃತ ಅಧ್ಯಯನದ ಅನುಕೂಲಕ್ಕಾಗಿ ಈ ಬಾಂಧವ್ಯವನ್ನು ೧. ತವರು ಮತ್ತು ತಾಯಿ, ತಂದೆ ೨. ತವರು ಮತ್ತು ಒಡಹುಟ್ಟು ೩. ತವರು ಮತ್ತು ಅತ್ತಿಗೆ

ನಾದಿನಿಯರು ೪. ತವರು ಮತ್ತು ಗೆಳತಿಯರು, ನೆರೆಹೊರೆ -ಹೀಗೆ ವಿಂಗಡಿಸಿಕೊಂಡು ಅಭ್ಯಸಿಸಲಾಗಿದೆ. ತವರು ಮತ್ತು ಹೆಣ್ಣಿನ ಸ್ಥಾನಮಾನವನ್ನು ಸಾಮಾಜಿಕ-ಸಾಂಸ್ಕೃತಿಕ ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಕೆ. ಎಂ. ಮಹದೇವಸ್ವಾಮಿಯವರ 'ಹೊಯ್ಸಳರ ರಾಜ್ಯಾಡಳಿತದಲ್ಲಿ ಪಟ್ಟಣಸ್ವಾಮಿಯ ಸ್ಥಾನ ಮತ್ತು ಕಾರ್ಯಗಳು' ಲೇಖನ ಹೊಯ್ಸಳರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ಬೆಳಕು ಚೆಲ್ಲುವ ಆಸಕ್ತಿದಾಯಕ ಬರಹವಾಗಿದೆ. ಹೊಯ್ಸಳರ ಕಾಲದ ಶಾಸನಗಳನ್ನಾಧರಿಸಿ ಮಧ್ಯಕಾಲೀನ ಕರ್ನಾಟಕದಲ್ಲಿ ಪಟ್ಟಣದ ಪಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ಪಟ್ಟಣಸ್ವಾಮಿಯ ಕಾರ್ಯವೈಖರಿಯನ್ನು ವಿವರಿಸಲಾಗಿದೆ. ಆಡಳಿತ ಮತ್ತು ಆರ್ಥಿಕತೆಯಲ್ಲಿ ಆತ ಮಹತ್ವದ ಪಾತ್ರವಹಿಸುತ್ತಿದ್ದನೆಂದು ಲಭ್ಯ ಆಧಾರಗಳನ್ನಾಧರಿಸಿ ದೃಢೀಕರಿಸುವ ಯತ್ನಮಾಡಲಾಗಿದೆ.

ಪಿ. ನಟರಾಜ್ ಅವರ 'ನರಸಿಂಹಯ್ಯನ ಪ್ರತಿಭೀತಿಗಳು' ಲೇಖನ ಮನೋವಿಶ್ಲೇಷಣಾತ್ಮಕ ಅಧ್ಯಯನದಲ್ಲಿ ಆಸಕ್ತಿ ಇರುವ ಅಭ್ಯಾಸಿಗಳಿಗೆ ಒಂದು ಉಪಯುಕ್ತ ಬರಹವೆನಿಸಿದೆ. ವ್ಯಕ್ತಿಯೊಬ್ಬರು ಯೌವನಾವಸ್ಥೆಯಲ್ಲಿ ಅನುಭವಿಸಿದ ಮಾನಸಿಕ ಪ್ರತಿ ಭೀತಿಯಿಂದ ಬಿಡುಗಡೆ ಹೊಂದಲು ತವಕ ಪಡುವ ವೃತ್ತಾಂತ ಕುತೂಹಲಕರವಾಗಿದೆ. ಅಂಥ ಪ್ರತಿಭೀತಿಗಳನ್ನು ದೂರ ಮಾಡಿಕೊಳ್ಳಲು ರೋಗಿ ಅನುಸರಿಸಬೇಕಾದ ಮುಂಜಾಗರೂಕ ಕ್ರಮಗಳನ್ನು ಇಲ್ಲಿ ನಿರೂಪಿಸಿಲ್ಲವಾದರೂ ಕ್ರಮಬದ್ಧ ನಿಶ್ಚೋದನಾ ಚಿಕಿತ್ಸೆಯಿಂದ ರೋಗವನ್ನು ದೂರ ಮಾಡಿರುವುದಾಗಿ ಲೇಖಕರು ತಿಳಿಸಿರುತ್ತಾರೆ. ಒಟ್ಟಿನಲ್ಲಿ ಇದೊಂದು ಅಭ್ಯಾಸಯೋಗ್ಯವಾದ ಮನೋವಿಶ್ಲೇಷಣಾತ್ಮಕ ಬರಹವಾಗಿದೆ.

ಹೀಗೆ ವಿವಿಧ ವಿಷಯಗಳ ಮೇಲಿನ ಈ ಹನ್ನೆರಡು ಬರಹಗಳು ಮಾನವಿಕ ಹಾಗೂ ಸಾಮಾಜಿಕ ವಿಜ್ಞಾನಗಳಲ್ಲಿ ಆಸಕ್ತಿ ಇರುವ ಸಂಶೋಧಕರಿಗೆ, ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತ ಎನ್ನಿಸಿದರೆ ಈ ಸಂಚಿಕೆಯ ಪ್ರಕಟಣೆಗೆ ಬೆಲೆ ಬರುತ್ತದೆ.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಪರಿವಿಡಿ

ಈ ಸಂಚಿಕೆಯ ಬರಹಗಳು

ಪ್ರಚಲಿತ ಅರ್ಥವ್ಯವಸ್ಥೆಯಲ್ಲಿ ಗ್ರಾಹಕತ್ವ

ಡಾ. ಬಿ. ಪಿ. ನೀಲಕಂಠ

ಜನನದಿಂದ ಮರಣದ ತನಕ ಮಾನವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಗ್ರಾಹಕರೇ ಆಗಿರುತ್ತಾರೆ. ಎಂದರೆ, ನಾವು ನೀವೆಲ್ಲರೂ ಗ್ರಾಹಕರೇ ಸರಿ. ಒಂದು ರಾಷ್ಟ್ರದ ಜನಸಂಖ್ಯೆ ಅಲ್ಲಿನ ದೊಡ್ಡ ಆರ್ಥಿಕ ಗುಂಪು. ಒಟ್ಟಿನಲ್ಲಿ ನಮ್ಮ ಆರ್ಥಿಕ ಪ್ರಪಂಚದಲ್ಲಿ ಏನನ್ನಾದರೂ ಅನುಭೋಗಿಸುವ ವ್ಯಕ್ತಿ ಗ್ರಾಹಕನಾಗುತ್ತಾನೆ. ವಿವರವಾಗಿ ಹೇಳುವುದಾದರೆ ಸರಕು ಮತ್ತು ಸೇವೆಗಳನ್ನು ಖರೀದಿಸುವ ಮತ್ತು ಬಳಸುವ, ಸಾರ್ವಜನಿಕ ಸೇವೆಯನ್ನು ಉಪಯೋಗಿಸುವ ಹಾಗೆಯೇ ಸ್ವಾಭಾವಿಕ ಸಂಪನ್ಮೂಲಗಳನ್ನು ಬಳಸುವ ವ್ಯಕ್ತಿಯೇ ಗ್ರಾಹಕನಾಗುತ್ತಾನೆ. ಈ ಗ್ರಾಹಕನ ರಕ್ಷಣೆ, ಇವನ ಹಕ್ಕು ಬಾಧ್ಯತೆಗಳು, ಗ್ರಾಹಕ ಸಂಘಗಳು ಅಲ್ಲದೆ ಈ ನಮ್ಮ ಪ್ರಚಲಿತ ತಾಂತ್ರಿಕ ವೈಜ್ಞಾನಿಕ ಅರ್ಥವ್ಯವಸ್ಥೆಯಲ್ಲಿ ಗ್ರಾಹಕನ ಪಾತ್ರ ಮತ್ತು ವೈಶಿಷ್ಟ್ಯತೆಯನ್ನು ಅಧ್ಯಯನ ಮಾಡುವ ವಿಚಾರವನ್ನೇ ನಾವು 'ಗ್ರಾಹಕತ್ವ' (consumerism) ಎಂದು ಕರೆಯುತ್ತೇವೆ.

ಅರ್ಥಶಾಸ್ತ್ರದ ಪಿತಾಮಹನಾದ ಆಡಂಸ್ಮಿತ್ ಮೊದಲ್ಗೊಂಡು ಎಲ್ಲ ಅರ್ಥಶಾಸ್ತ್ರಜ್ಞರು ಗ್ರಾಹಕನ ಕಲ್ಯಾಣ ಮತ್ತು ರಕ್ಷಣೆಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ವಿಶ್ಲೇಷಿಸುತ್ತಲೇ ಬಂದಿದ್ದಾರೆ. ಪ್ರೊಫೆಸರ್ ಮಾರ್ಷಲ್ ತನ್ನ 'ಅರ್ಥಶಾಸ್ತ್ರದ ತತ್ವಗಳು' ಎನ್ನುವ ಮಹಾನ್ ಗ್ರಂಥದಲ್ಲಿ ಬಹಳ ಅರ್ಥವತ್ತಾಗಿ ಭೌತಿಕ ಗ್ರಾಹಕ ಕಲ್ಯಾಣದ ನೇರ ವಿವರಣೆ ನೀಡಿರುವುದು ಅರ್ಥವ್ಯವಸ್ಥೆಯಲ್ಲಿ ಗ್ರಾಹಕನ ಪಾತ್ರದ ಮಹತ್ವವನ್ನು ಎತ್ತಿ ಹಿಡಿದಿದೆ. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ ಜನರ ಜೀವನ ಶೈಲಿಯಲ್ಲಿ ಅತ್ಯಂತ ಮಹತ್ತರವಾದ ಬದಲಾವಣೆಯನ್ನು ತಂದಿತಲ್ಲದೆ ಉತ್ಪಾದನೆ, ವಿಜ್ಞಾನ, ತಾಂತ್ರಿಕತೆ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ನಿರೀಕ್ಷಿಸಲಾಗದ ಹೊಸತನಕ್ಕೆ ಕಾರಣವಾಯಿತು. ವೈವಿಧ್ಯಮಯ ಸರಕುಗಳ ಉತ್ಪಾದನೆ ಮತ್ತು ಮಾರಾಟದ ವ್ಯವಸ್ಥೆಯಲ್ಲಿನ ಕ್ರಾಂತಿಕಾರಕ ಬೆಳವಣಿಗೆ ಉತ್ಪಾದಕರು ಮತ್ತು ಗ್ರಾಹಕರ ನಡುವೆ ಒಂದು ರೀತಿಯ ಅಂತರವನ್ನ ಸೃಷ್ಟಿಮಾಡಿತು. ಸಾಟಿ ವಿನಿಮಯ ಪದ್ಧತಿ ಮಾಯವಾಗುವುದರೊಂದಿಗೆ ಹಣದ ವಿನಿಮಯ ಪದ್ಧತಿ ಬಲವಾಗತೊಡಗಿತು. ಈ ಕಾರಣದಿಂದ ಸರಕು ಮತ್ತು ಸೇವೆಗಳ ಕೊಳ್ಳುವಿಕೆ ಮತ್ತು ಮಾರಾಟ ಮಾಡುವಿಕೆ, ನಾಣ್ಯ ಮತ್ತು ಕಾಗದದ ಹಣದ ಬಳಕೆ ಆರಂಭವಾದಂತೆ ಸರಕುಗಳ ಆಯ್ಕೆ, ಅವಶ್ಯಕ ವಸ್ತುಗಳ ಪೂರೈಕೆ, ಬೆಲೆ ತಾರತಮ್ಯ, ಪ್ರಚಾರ ಕಲೆ, ಕಲಬೆರಕೆ, ಬೆಲೆ ಏರಿಕೆ,

ಕೊರತೆ ಮುಂತಾದ ಪ್ರಕ್ರಿಯೆಗಳು, ಸಮಸ್ಯೆಗಳು ಕಾಣಿಸಿಕೊಳ್ಳಲಾರಂಭಿಸಿ ಮಾರುಕಟ್ಟೆಯ ವ್ಯವಸ್ಥೆ ಗ್ರಾಹಕ ಪರಿಸರವನ್ನೇ ಬದಲಾಯಿಸಿ ವೈವಿಧ್ಯಮಯ ವಸ್ತುಗಳು, ಪೈಪೋಟಿ, ಮಾರಾಟದ ವಿವಿಧ ಪ್ರಭಾವ ಹೀಗೆ ಅನೇಕ ಒತ್ತಡಗಳು ಗ್ರಾಹಕನನ್ನು ದಿಕ್ಕುಗಾಣದಂತೆ ಮಾಡಿದವು. ಇದು ಗ್ರಾಹಕನ ಅಸ್ತಿತ್ವಕ್ಕೆ ಬಿದ್ದ ಕೊಡಲಿ ಪೆಟ್ಟು. ಇತ್ತೀಚಿನ ಮೂರು ಪರಿಣಾಮಕಾರಿ ಆರ್ಥಿಕ ನೀತಿಗಳಾದ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಗ್ರಾಹಕನನ್ನು ಹಂತ ಹಂತವಾಗಿ ಪರೀಕ್ಷಿಸುತ್ತಿದ್ದು, ಇವನ ಬದುಕು ಒಂದು ರೀತಿಯ ವಿಷಮ ಚಕ್ರದ ಒಳಸುತ್ತಿಕೊಂಡಿರುವ ಬದುಕಾಗಿದೆ. ಹೀಗಾಗಿ ಗ್ರಾಹಕ ತಾನು ತನ್ನನ್ನು ಗುರುತಿಸಿಕೊಳ್ಳಬೇಕಾದರೆ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ, ತನ್ನ ದೂರು ಮತ್ತು ಸಂಕಷ್ಟಗಳನ್ನು ಪರಿಹರಿಸಿಕೊಳ್ಳಬೇಕಾದರೆ ಪ್ರಜ್ಞಾವಂತನಾಗಬೇಕಾಗಿದೆ. ತನ್ನ ಹಕ್ಕು-ಬಾಧ್ಯತೆಗಳ ಅರಿವು ಮೂಡಿಸಿಕೊಳ್ಳುವುದು ಅಗತ್ಯವಾಗಿದೆ.

ಗ್ರಾಹಕನ ಹಕ್ಕುಗಳು ಮತ್ತು ಸಂರಕ್ಷಣೆಯ ಬಗ್ಗೆ ಚಿಂತಿಸುವಾಗ ಅಮೆರಿಕಾ ದೇಶದ ಮಹಾನ್ ವ್ಯಕ್ತಿಗಳಾದ ಜಾನ್ ಎಫ್ ಕೆನಡಿ ಹಾಗೂ ರಾಲ್ಫ್ ನಾಡರ್ ಇವರನ್ನು ಮರೆಯುವಂತಿಲ್ಲ. ಜಾನ್ ಎಫ್ ಕೆನಡಿ ಗ್ರಾಹಕನ ಹಕ್ಕುಗಳ ಬಗ್ಗೆ ಸುದೀರ್ಘವಾಗಿ ಚಿಂತಿಸಿ, ಸುರಕ್ಷತೆಯ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು ಮತ್ತು ತಿಳುವಳಿಕೆ ಪಡೆಯುವ ಹಕ್ಕುಗಳ ಬಗ್ಗೆ ಹೇಳಿಕೆ ಕೊಟ್ಟ ಮೊದಲ ಗ್ರಾಹಕರ ನಾಯಕ. ಇನ್ನು ರಾಲ್ಫ್ ನಾಡರ್ ಅವರು ಅಮೆರಿಕಾದಲ್ಲಿ ಗ್ರಾಹಕರ ಒಕ್ಕೂಟಕ್ಕಾಗಿ ನಡೆಸಿದ ಹೋರಾಟ ಅಷ್ಟಿಷ್ಟಲ್ಲ. ಮುಖ್ಯವಾಗಿ ಇವರು ವಾಹನಗಳ ತಯಾರಕರೊಂದಿಗೆ ವಾದ ನಡೆಸಿ, ವಾಹನಗಳ ದಕ್ಷತೆ ಮತ್ತು ಬೆಲೆಯ ಬಗ್ಗೆ ಪ್ರಶ್ನಿಸಿ, ಗ್ರಾಹಕ ಹೋರಾಟಕ್ಕೆ ಬುನಾದಿ ಹಾಕಿದರು. ಪರಿಸರ ಮಲಿನಗೊಳ್ಳುತ್ತಿರಲು ಕಾರಣ ಮತ್ತು ಅನಿವಾರ್ಯವಾಗಿ ಮಲಿನ ಗಾಳಿ ಮತ್ತು ಶಬ್ದವನ್ನು ಅನುಭವಿಸಬೇಕಾಗಿ ಬಂದ ಪರಿಸ್ಥಿತಿಯನ್ನು ಜನರಿಗೆ ವಿವರಿಸುತ್ತ ಸರ್ಕಾರದ ಗಮನ ಸೆಳೆದ ಮೊದಲ ಉಗ್ರ ಗ್ರಾಹಕ ನಾಯಕ ಈತ.

ಒಟ್ಟಿನಲ್ಲಿ ಇತ್ತೀಚೆಗೆ ಎಲ್ಲಾ ರಾಷ್ಟ್ರಗಳಲ್ಲಿಯೂ ಗ್ರಾಹಕರಲ್ಲಿ ತಿಳಿವಳಿಕೆ ಮೂಡುತ್ತಿದ್ದು, ಅಲ್ಲಲ್ಲಿ ಗ್ರಾಹಕ ಚಳುವಳಿಯ ಮಾತು ಆಗಾಗ್ಗೆ ಕೇಳಿಬರುತ್ತಿದೆ. ಭಾರತದಲ್ಲಿ ಸಹ ಅನೇಕ ಸಾರ್ವಜನಿಕ ಹಕ್ಕುಬಾಧ್ಯತೆಗಳ ಸಂಘಗಳು ಮತ್ತು ಮಲೇಷಿಯಾದ ಅಂತರ ರಾಷ್ಟ್ರೀಯ ಗ್ರಾಹಕ ಸಂಸ್ಥೆಯಿಂದ ಪ್ರಭಾವಿತವಾದ ಸಂಸ್ಥೆಗಳು ಗಮನಾರ್ಹವಾಗಿ ಕಾಣಿಸಿಕೊಳ್ಳುತ್ತಿವೆ. ಇದು ನಿಜವಾಗಿಯೂ ಶುಭ ಸೂಚಕ. ಈ ಸಂಘ ಸಂಸ್ಥೆಗಳು ಗ್ರಾಹಕನ ಹಕ್ಕು ಮತ್ತು ಹಿತರಕ್ಷಣೆಗಾಗಿ ಸತತ ಹೋರಾಟ ನಡೆಸಿಕೊಂಡು ಬಂದರೆ ಗ್ರಾಹಕನ ಗೋಳು ತಪ್ಪೀತು.

ಕೇವಲ ಗ್ರಾಹಕ ಸಂರಕ್ಷಣಾ ಮಂಡಳಿಗಳು ಸ್ಥಾಪನೆಯಾದ ಮಾತ್ರಕ್ಕೆ ಗ್ರಾಹಕನ ಗೋಳು ತಪ್ಪೀತೇ? ಇಲ್ಲ. ಪ್ರತಿಯೊಬ್ಬ ಗ್ರಾಹಕನೂ ಮುಖ್ಯವಾಗಿ ತನ್ನ ಹಕ್ಕುಗಳ ಬಗ್ಗೆ ಮನವರಿಕೆ ಮಾಡಿಕೊಳ್ಳದ ಹೊರತು ಸಂರಕ್ಷಣಾ ಮಂಡಳಿಗಳ ಹೋರಾಟ

ಪರಿಣಾಮಕಾರಿಯಾಗದು. ಈ ಕೆಳಕಂಡ ಏಳು ಹಕ್ಕುಗಳು ಗ್ರಾಹಕನ ಮೂಲಭೂತ ಹಕ್ಕುಗಳಾಗಿದ್ದು, ಇವುಗಳನ್ನು ಅನುಭವಿಸುವ ಪ್ರಜ್ಞೆ ಗ್ರಾಹಕನಲ್ಲಿ ಮೂಡಿದರೆ ಆ ಮೂಲಕ ಗ್ರಾಹಕ ಸಂಘಗಳು ಬಲವಾಗಲು ಸಾಧ್ಯ.

ಸುರಕ್ಷತೆಯ ಹಕ್ಕು

"ಆರೋಗ್ಯವೇ ಭಾಗ್ಯ" ಎನ್ನುವಂತೆ ಗ್ರಾಹಕ ಮೊದಲು ತನ್ನ ಆರೋಗ್ಯದ ಬಗ್ಗೆ ನಿಗಾ ವಹಿಸಬೇಕು. ಗಾಳಿ, ಆಹಾರ, ನೀರು, ಔಷಧಗಳು ಮಾನವನ ಜೀವಿತಕ್ಕೆ ಅತ್ಯಾವಶ್ಯಕ. ಇವುಗಳ ಪೂರೈಕೆ - ಗುಣಮಟ್ಟಗಳಲ್ಲಿ ಅಡಚಣೆ - ವ್ಯತ್ಯಾಸಗಳಾದಾಗ ಗ್ರಾಹಕನ ಬದುಕಿಗೆ ಧಕ್ಕೆ ಒದಗಿದಂತಾಗುವುದು. ಕಲಬೆರಕೆ ಆಹಾರ, ಔಷಧಿ, ಮಲಿನ ಪರಿಸರ ಮಾನವನ ಹಿತರಕ್ಷಣೆಗೆ ವಿರುದ್ಧವಾಗುತ್ತದೆ. ಉತ್ಪಾದಕ ಉತ್ಪಾದಿಸುವ ಯಾವುದೇ ವಸ್ತು ಗ್ರಾಹಕನ ಹಿತರಕ್ಷಣೆಗೆ ಅಡ್ಡಿಯಾಗಬಾರದು. ಅವನ ಆರೋಗ್ಯ ಸರಕು ಸಾಧನಗಳ ಉಪಭೋಗ ಮಾಡಿದಾಗ ಕೆಡಬಾರದು. ಹಂಚಿಕೆಯಲ್ಲಿ ವ್ಯತ್ಯಾಸವಾಗದಂತೆ, ಉತ್ಪಾದನೆಗೆ ಅಡಚಣೆ ಉಂಟಾಗದಂತೆ, ಪರಿಸರ ಮಲಿನವಾಗದಂತೆ ನಿಗಾವಹಿಸಿ ಗ್ರಾಹಕನ ಸಂರಕ್ಷಣೆ ಮಾಡುವುದು ಈ ಗ್ರಾಹಕ ಸಂರಕ್ಷಣಾ ಮಂಡಲಿಗಳ ಆದ್ಯ ಕರ್ತವ್ಯವಾಗಬೇಕು.

ಮಾಹಿತಿ ಪಡೆಯುವ ಹಕ್ಕು

ಸರಕು ಮತ್ತು ಸೇವೆಗಳ ಬಗ್ಗೆ ಗ್ರಾಹಕನಿಗೆ ಸರಿಯಾದ ತಿಳುವಳಿಕೆ ತುಂಬಾ ಅವಶ್ಯಕ. ಯಾವುದೇ ಸರಕು ಸೇವೆಯನ್ನು ಕೊಳ್ಳುವ ಮೊದಲು ಅದರ ಸಂಪೂರ್ಣ ಮಾಹಿತಿ ಅವನಿಗೆ ದೊರಕುವುದಾದರೆ ಗ್ರಾಹಕ ವ್ಯವಸ್ಥಿತವಾಗಿ ತನ್ನ ಕೊಳ್ಳುವ ಶಕ್ತಿ ಮತ್ತು ಆರೋಗ್ಯದ ದೃಷ್ಟಿಯಿಂದ ಸರಕು ಸೇವೆಗಳ ವ್ಯವಹಾರ ಮಾಡಬಲ್ಲ.

ಸರಕು ಸೇವೆಗಳ ಸಾಧನಗಳು ಯಾವ ಅಂಶಗಳನ್ನು ಯಾವ ಪ್ರಮಾಣದಲ್ಲಿ ಹೊಂದಿದೆ, ಯಾವ ದಿನದಂದು ಆ ಸಾಧನದ ಉತ್ಪಾದನೆಯಾಗಿದೆ ಮತ್ತು ಯಾವ ದಿನದಂದು ಅದು ಮೌಲ್ಯ ಕಳೆದುಕೊಳ್ಳುತ್ತದೆ, ಹೀಗೆ ಸಂಪೂರ್ಣವಾಗಿ ಅದರ ಬಗ್ಗೆ ಗ್ರಾಹಕನಿಗೆ ಪೂರ್ವ ಮಾಹಿತಿ ಸಿಕ್ಕುವುದಾದರೆ ಖಂಡಿತವಾಗಿಯೂ ಗ್ರಾಹಕ ತನ್ನ ಈ ಮೇಲಿನ ಹಕ್ಕನ್ನು ಅನುಭವಿಸಿದಂತೆ. ಈ ದಿಸೆಯಲ್ಲಿ ಪ್ರಚಾರ, ಸಾಧನಗಳ ಮೇಲೆ ನಮೂದಿಸಿದ ಲೇಬಲ್‌ಗಳು, ಪೋಸ್ಟರ್‌ಗಳು, ರೇಡಿಯೊ ಹಾಗೂ ಟಿ. ವಿ. ಜಾಹೀರಾತುಗಳು ಗ್ರಾಹಕರಿಗೆ ಸರಿಯಾದ ಮಾಹಿತಿ ನೀಡುವ ಮೂಲಗಳಾಗಬೇಕು.

ಆಯ್ಕೆಯ ಹಕ್ಕು

ದಿನೇ ದಿನೇ ಮಾರುಕಟ್ಟೆಯ ವ್ಯವಹಾರಗಳು ಬದಲಿಸುತ್ತಿವೆ. ವಸ್ತುಗಳ ಪ್ರಭೇದ ಮತ್ತು ವೈವಿಧ್ಯ ಹೆಚ್ಚುತ್ತಿದೆ. ಗ್ರಾಹಕ ಈ ಬದಲಿಸುತ್ತಿರುವ ಮಾರುಕಟ್ಟೆಯಲ್ಲಿ ಆರಿಸುವ ಹಕ್ಕನ್ನು ಹೊಂದದಿದ್ದರೆ ಸಮಸ್ಯೆಗಳ ಗುಂಪನ್ನೇ ಎದುರಿಸಬೇಕಾಗುತ್ತಿತ್ತು. ಮಾರಾಟಗಾರರು

ಕೊಡುವ ವಸ್ತುವನ್ನೇ ಕಡ್ಡಾಯವಾಗಿ ಕೊಂಡುಕೊಳ್ಳಬೇಕು ಎಂದಿದ್ದರೆ ಬಹುಶಃ ಈಗಾಗಲೇ ಗ್ರಾಹಕ-ಮಾರಾಟಗಾರರ ನಡುವೆ ದೊಡ್ಡ ಕ್ರಾಂತಿಯೇ ನಡೆಯುತ್ತಿತ್ತು. ಮಾರುಕಟ್ಟೆಗೆ ಕಾಲಿಟ್ಟ ಗ್ರಾಹಕ ಗೊಂದಲಕ್ಕೊಳಗಾಗುವುದು ಸಹಜ. ಏನೇ ಆದರೂ ಅವನು ತನ್ನ ಕೊಳ್ಳುವ ಶಕ್ತಿಯನ್ನು ಮರೆಯಲಾರ. ಇಲ್ಲಿ ಕೊಳ್ಳುವ ಶಕ್ತಿ ಎಂದರೆ ಸರಳ ಅರ್ಥದಲ್ಲಿ ಹಣ ವೆಚ್ಚ ಮಾಡುವ ಶಕ್ತಿ ಎಂದಾಗುತ್ತದೆ. ತನ್ನ ಈ ಶಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾರ ಅಭ್ಯಂತರವಿಲ್ಲದೆ ತನಗೆ ಬೇಕಾದ ಸರಕು ಮತ್ತು ಸೇವೆಗಳನ್ನು ಆರಿಸುವ ಹಕ್ಕು ಚಲಾಯಿಸುವುದು ಗ್ರಾಹಕನಿಗೆ ಸದಾಕಾಲಕ್ಕೂ ಇದ್ದದ್ದೆ.

ತಿಳಿವಳಿಕೆ ಪಡೆಯುವ ಹಕ್ಕು

ಆರ್ಥಿಕ ವ್ಯವಸ್ಥೆಯಲ್ಲಿ ಗ್ರಾಹಕನ ಹಿತದೃಷ್ಟಿಯಿಂದ ಉತ್ಪಾದನೆ-ಹಂಚಿಕೆಗೆ ಸಂಬಂಧಿಸಿದ ಯಾವುದೇ ಯೋಜನೆ ನಿರ್ಧಾರದ ಬಗ್ಗೆ ಆಗುವ ಸೂಕ್ತ ಚಿಂತನೆಯನ್ನು ತಿಳಿದುಕೊಳ್ಳುವ ಹಕ್ಕು ಗ್ರಾಹಕನಿಗಿದೆ. ಸರಕಾರದ ಆರ್ಥಿಕ ನೀತಿಗಳು ಕೆಲವು ಪ್ರತ್ಯಕ್ಷವಾಗಿ ಮತ್ತು ಕೆಲವು ಪರೋಕ್ಷವಾಗಿ ಗ್ರಾಹಕನ ಕ್ಷೇಮಾಭ್ಯುದಯಕ್ಕೆ ಕಾರಣವಾಗುವುದರಿಂದ ಇಂತಹ ನೀತಿ ನಿಯಮಗಳನ್ನು ಗ್ರಾಹಕ ಕೇಳಿಕೊಳ್ಳುವುದು ಅಥವಾ ಅರಿತುಕೊಳ್ಳುವುದರಿಂದ ಈ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಲು ಸಾಧ್ಯವಾಗುತ್ತದೆ.

ದೂರುವ ಹಕ್ಕು

ಸರಕು ಸಾಧನಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವಾಗ ಗ್ರಾಹಕ ತನ್ನ ಆರಿಸುವ ಹಕ್ಕನ್ನು ಹೇಗೆ ಚಲಾಯಿಸುತ್ತಾನೋ ಹಾಗೆಯೇ ಕೊಂಡ ಸಾಧನಗಳ ತೂಕ, ಅಳತೆಗಳಲ್ಲಿ ವ್ಯತ್ಯಾಸ, ಅವುಗಳ ಗುಣಮಟ್ಟದಲ್ಲಿ ದೋಷ, ಬೆಲೆಯಲ್ಲಿ ತಾರತಮ್ಯ ಕಂಡುಬಂದರೆ ಅಂತಹ ವಸ್ತುಗಳ ಬಗ್ಗೆ ಸಂಬಂಧಪಟ್ಟವರಿಗೆ ದೂರು ನೀಡುವ ಹಕ್ಕು ಗ್ರಾಹಕನಿಗಿದೆ. ಹೀಗೆ ದೂರಿತ್ತಾಗ ಸರಿಯಾದ ಉತ್ತರ ಗ್ರಾಹಕನಿಗೆ ದೊರಕಬೇಕು ಮತ್ತು ಈ ದಿಸೆಯಲ್ಲಿ ಯಾವುದೇ ಅನ್ಯಾಯವಾಗದಂತೆ ಗ್ರಾಹಕ ಮಂಡಳಿಗಳು ಎಚ್ಚರವಹಿಸಬೇಕು.

ಗ್ರಾಹಕ ಶಿಕ್ಷಣದ ಹಕ್ಕು

ಗ್ರಾಹಕ ಶಿಕ್ಷಣವನ್ನೆ ಕಾಣದ ನಮ್ಮ ಗ್ರಾಹಕ ಈ ತಾಂತ್ರಿಕ, ಜಾಹಿರಾತುಮಯ ಪ್ರಪಂಚದಲ್ಲಿ ಕಂಗಾಲಾಗಿದ್ದಾನೆ. ಮಾರುಕಟ್ಟೆಯಲ್ಲಿ ಗ್ರಾಹಕ ಹೇಗೆ ವರ್ತಿಸಬೇಕು, ತನ್ನ ಆದಾಯದ ಸಮಂಜಸ ಹಂಚಿಕೆಯ ಆಧಾರದ ಮೇಲೆ ಹೇಗೆ ವ್ಯವಸ್ಥಿತವಾಗಿ ಸಂಸಾರದ ಯೋಜನೆಯನ್ನು ಮಾಡಿಕೊಳ್ಳಬೇಕು ಮತ್ತು ತನ್ನ ಮೂಲಭೂತ ಹಕ್ಕುಗಳನ್ನು ಹೇಗೆ ಸಂದರ್ಭಕ್ಕೆ ಸರಿಯಾಗಿ ಚಲಾಯಿಸಬೇಕು ಹಾಗೂ ತೂಕ ಅಳತೆ, ಬೆಲೆ ಗುಣಮಟ್ಟ, ಕಲಬೆರಕೆ, ಪ್ರಚಾರಕ ಜಾಹಿರಾತುಗಳಿಂದ ಮೋಸ ಹೋಗದಂತೆ ತಿಳಿವಳಿಕೆ ಗ್ರಾಹಕನಿಗೆ ಅಗತ್ಯ. ಇಂತಹ ಗ್ರಾಹಕ ಶಿಕ್ಷಣವನ್ನು ಒದಗಿಸುವುದು ಎಲ್ಲಾ ಗ್ರಾಹಕ ಮಂಡಳಿಗಳ ಮುಖ್ಯ ಉದ್ದೇಶವಾದಾಗ ಮಾತ್ರ ಗ್ರಾಹಕ ಶಿಕ್ಷಣದ ಹಕ್ಕು ರಕ್ಷಿತವಾದಂತೆ.

ಆರೋಗ್ಯ ಪರಿಸರದ ಹಕ್ಕು

ಗ್ರಾಹಕ ಚಟುವಟಿಕೆಯಿಂದಿರಬೇಕಾದರೆ ಅವನ ಪರಿಸರ ಪರಿಶುದ್ಧವಾಗಿರಬೇಕು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಗ್ರಾಹಕನ ಪರಿಸ್ಥಿತಿ ಚಿಂತಾಜನಕವಾಗಿದೆ.

ಕಾರ್ಖಾನೆಗಳ ವಿಷಪೂರಿತ ಅನಿಲಗಳಿಂದ ಗಾಳಿಯಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಿದೆ. ಹೆಚ್ಚುತ್ತಿರುವ ವಾಹನಗಳ ಓಡಾಟದಿಂದ ಶಬ್ದಮಯ ಪ್ರಪಂಚ ಸೃಷ್ಟಿಯಾಗಿ ಶಾಂತಿ ನೆಮ್ಮದಿ ಇಲ್ಲದಂತಾಗಿದೆ. ಮಂಡಳಿಗಳು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಗ್ರಾಹಕನಿಗೆ ಆರೋಗ್ಯಕರ ಪರಿಸರವನ್ನು ಒದಗಿಸಿಕೊಡಲು ಸರ್ವಪ್ರಯತ್ನ ಮಾಡಬೇಕು.

ಮೇಲಿನ ಎಲ್ಲ ಗ್ರಾಹಕ ಹಕ್ಕುಗಳೂ ಸರಕಾರದ ಮನ್ನಣೆ ಹಾಗೂ ಗ್ರಾಹಕ ಸಂರಕ್ಷಣಾ ಮಂಡಳಿಯ ಸ್ಥಾಪನೆಯ ಮೂಲಕ ದೊರೆತಿದೆ. ಭಾರತದಲ್ಲಿ ಮೊಟ್ಟ ಮೊದಲಿಗೆ ಗ್ರಾಹಕ ಸಂರಕ್ಷಣಾ ಮಂಡಳಿಯನ್ನು ಪ್ರಾರಂಭಿಸಿದ ಕೀರ್ತಿ ನಮ್ಮ ಕರ್ನಾಟಕದ್ದು. ಈ ದಿಸೆಯಲ್ಲಿ ಕರ್ನಾಟಕ ಸರಕಾರ ಇಟ್ಟಿರುವ ದಿಟ್ಟ ಹೆಜ್ಜೆ ಫಲಕಾರಿಯಾಗಲಿ.

ಭಾರತದಲ್ಲಿ ಗ್ರಾಹಕರ ಪರಿಸ್ಥಿತಿ ತುಂಬಾ ಶೋಚನೀಯ. ಇತ್ತೀಚಿನ ಮಾಹಿತಿಯ ಪ್ರಕಾರ ವರ್ಷ ಒಂದಕ್ಕೆ ಸುಮಾರು ೨೦,೦೦೦ ಮಿಲಿಯನ್ ರೂಪಾಯಿಗಳಷ್ಟು ಮೋಸ ನಮ್ಮ ದೇಶದ ಗ್ರಾಹಕರಿಗಾಗುತ್ತಿದೆ. ಗ್ರಾಮೀಣ ಪ್ರದೇಶದ ಗ್ರಾಹಕ ಪಟ್ಟಣ ಪ್ರದೇಶದ ಗ್ರಾಹಕನಿಗಿಂತ ಹೆಚ್ಚು ಕಂಗಾಲಾಗಿದ್ದಾನೆ. ಬೆನ್‌ಹ್ಯಾಮ್ ಎನ್ನುವ ಅರ್ಥಶಾಸ್ತ್ರಜ್ಞ ಅಭಿಪ್ರಾಯಪಟ್ಟಂತೆ ಭಾರತದಲ್ಲಿ ಗ್ರಾಹಕ ದೊರೆಯಾಗದೆ ಮರೆಯಾಗುತ್ತಿದ್ದಾನೆ. ಇದಕ್ಕೆ ಕಾರಣವೆಂದರೆ -

೧ ಅನಕ್ಷರತೆ.

೨ ಗ್ರಾಹಕ ಶಿಕ್ಷಣದ ಕೊರತೆ.

೩ ವಂಶ ಪಾರಂಪರ್ಯವಾಗಿ ಬಂದಿರುವ ಗ್ರಾಹಕರ ಅಪನಂಬಿಕೆಗಳು.

೪ ಹಕ್ಕು ಬಾಧ್ಯತೆಗಳ ಬಗ್ಗೆ ತಿಳಿವಳಿಕೆ ಇಲ್ಲದೆ ಇರುವುದು.

೫ ಆರ್ಥಿಕ ಸಂಕಷ್ಟಗಳು ಮತ್ತು ಹಿಂದುಳಿಕೆ.

ಭಾರತದ ಗ್ರಾಹಕರು ಮಾರುಕಟ್ಟೆಯಲ್ಲಿ ಸರಕು ಮತ್ತು ಸೇವೆಗಳ ಕೊಳ್ಳುವಿಕೆಯಲ್ಲಿ ನಾನಾ ಕಾರಣಗಳಿಂದ ತಮ್ಮ ಪ್ರಾವೀಣ್ಯತೆ ಮತ್ತು ದಕ್ಷತೆಯನ್ನು ತೋರಿಸಲಾಗುತ್ತಿಲ್ಲ.

೧ ಒಂದು ವೇಳೆ ಕೆಲವು ಸರಕುಗಳನ್ನು ಇಂದು ಕೊಳ್ಳದಿದ್ದರೆ ನಾಳೆ ಸಿಗದೇ ಇರಬಹುದು ಎನ್ನುವ ಭಯ.

೨ ಇಂದು ಕಿಸೆಯಲ್ಲಿರುವ ಹಣವನ್ನು ಸರಕುಗಳ ಕೊಳ್ಳುವಿಕೆಗೆ ಬಳಸದೇ ಇದ್ದರೆ ನಾಳೆ ಆ ಹಣ ಬೇರೊಂದು ಬಳಕೆಗೆ ಬಳಸಲ್ಪಡಬಹುದೆನ್ನುವ ಆತಂಕ.

೩ ಗ್ರಾಹಕರ ಮೊದಲ ಆಲೋಚನೆಯೆ ಒಳ್ಳೆಯ ಆಲೋಚನೆ. ಅಂತೆಯೆ ಮೊದಲ ಆಯ್ಕೆಯೇ ಸರಿಯಾದ ಆಯ್ಕೆ ಎಂದು ಪರಿಗಣಿಸಿ ಸರಕುಗಳನ್ನು ಆರಿಸಿಕೊಳ್ಳುತ್ತಾರೆ.

೪ ಕೆಲವು ಸರಕುಗಳು ಅವಶ್ಯಕವಲ್ಲವಾದರೂ ಅವಶ್ಯಕವೆಂದು ಪರಿಗಣಿಸಿಕೊಳ್ಳಲಾಗುವುದು.

೫ ಅನೇಕ ಸಂದರ್ಭಗಳಲ್ಲಿ ತಾನು ಕೊಳ್ಳುವ ಸರಕು ತುಂಬಾ ಕಡಿಮೆ ಬೆಲೆಯದ್ದು ಎಂದುಕೊಂಡು ಕೊಂಡುಕೊಳ್ಳಲಾಗುವುದು.

೬ ಕೆಲವು ಸಾರಿ ಗ್ರಾಹಕರು ವ್ಯಾಪಾರಿಗಳ ಹೇಳಿಕೆಯೇ ಅಚಲವಾದದ್ದು ಎಂದುಕೊಂಡು ಬಿಡುತ್ತಾರೆ.

೭ ಗ್ರಾಹಕರು ಕೆಲವು ಸಾರಿ ಮಾರುಕಟ್ಟೆಗೆ ಸಮಯ ಕಳೆಯಲು ಹೋಗಿ ಹಿಂತಿರುಗಿ ಬರುವಾಗ ಅವಶ್ಯಕವಿಲ್ಲದ ಸರಕಿನೊಂದಿಗೆ ಬರುತ್ತಾರೆ.

೮ ಕೆಲವು ಸಾರಿ ಆಯವ್ಯಯ ಪಟ್ಟಿಯನ್ನು ಮೀರಿ ಕೊಂಡುಕೊಳ್ಳುತ್ತಾರೆ.

೯ ಗ್ರಾಹಕರು ಕೆಲವು ಸರಕುಗಳನ್ನು ಕೊಂಡುಕೊಳ್ಳುವಾಗ ಈಗಾಗಲೆ ಆ ಸರಕುಗಳನ್ನು ಹೊಂದಿರುವವರೊಂದಿಗೆ ಚರ್ಚಿಸದೇ ಇರುವುದು.

ಒಟ್ಟಿನಲ್ಲಿ ಗ್ರಾಹಕ ವ್ಯವಸ್ಥಿತವಾಗಿ ಸರಕುಗಳನ್ನು ಕೊಳ್ಳುವಂತಾಗಬೇಕಾದರೆ ಈ ಕೆಲವು ಸಲಹೆಗಳನ್ನು ಅನುಸರಿಸುವುದು ಸರಿ ಎನಿಸುತ್ತದೆ.

೧ ಸರಕುಗಳ ಕೊಂಡುಕೊಳ್ಳುವಿಕೆಯನ್ನು ತಿಂಗಳ ಒಂದು ನಿಗದಿತ ಸಮಯದಲ್ಲಿ ಮಾಡಬೇಕು.

೨ ಸರಕುಗಳನ್ನು ಕೊಂಡುಕೊಳ್ಳುವಿಕೆ ನಿರ್ದಿಷ್ಟ ಅವಶ್ಯಕತೆ ಮತ್ತು ಯೋಜಿತತೆಯಿಂದ ಕೂಡಿರಬೇಕು.

೩ ಕೊಂಡುಕೊಳ್ಳಲಾಗುವ ಸರಕುಗಳ ಬಗ್ಗೆ ವ್ಯಾಪಕ ಚರ್ಚೆ ಮಾಡಬೇಕು.

೪ ಒಬ್ಬನೇ ವ್ಯಾಪಾರಿ ಬಳಿ ಕೊಂಡುಕೊಳ್ಳುವುದರ ಬದಲು ಆಗಾಗ ಅವರನ್ನು ಬದಲಾಯಿಸುತ್ತಿರಬೇಕು.

೫ ಮಾರುಕಟ್ಟೆಗೆ ಹೋಗುವಾಗ ಅವಶ್ಯಕತೆಯನ್ನು ಮೀರಿ ಹಣವನ್ನು ಕೊಂಡೊಯ್ಯಬಾರದು.

೬ ಸಾಲದ ಆಧಾರದ ಮೇಲೆ ಸರಕುಗಳನ್ನು ಕೊಳ್ಳಬಾರದು.

೭ ತನ್ನ ಕೊಳ್ಳುವ ಶಕ್ತಿಯನ್ನು ಮೀರಿ, ತನ್ನ ಆದಾಯಕ್ಕಿಂತ ಹೆಚ್ಚಿನ ಮೊತ್ತದ ಕೊಳ್ಳುವಿಕೆ ಮಾಡಬಾರದು. ಎಂದರೆ "ಹಾಸಿಗೆ ಇದ್ದಷ್ಟು ಕಾಲು ಚಾಚುವುದು".

೮ ಆಮಿಷ, ಆಸೆ, ಆಕಾಂಕ್ಷೆಗಳಿಗೆ ಗಮನ ಕೊಡಬಾರದು.

೯ ಪ್ರಚಾರಕಲೆಗೆ ಸಂಪೂರ್ಣವಾಗಿ ಶರಣಾಗಬಾರದು.

೧೦ ಮಾರುಕಟ್ಟೆಯ ಆಗುಹೋಗುಗಳ ಬಗ್ಗೆ ತಿಳಿದುಕೊಳ್ಳುತ್ತಿರಬೇಕು.

ಭಾರತದಲ್ಲಿ ಗ್ರಾಹಕ ರಕ್ಷಣೆ

ನಮ್ಮ ದೇಶದಲ್ಲಿ ಸುಮಾರು ೨೦ಕ್ಕೂ ಹೆಚ್ಚು ಗ್ರಾಹಕ ರಕ್ಷಣಾ ಕಾನೂನುಗಳು ಜಾರಿಯಲ್ಲಿವೆ. ಇತ್ತೀಚಿನ ಗ್ರಾಹಕ ರಕ್ಷಣಾ ಕಾಯಿದೆ ಎಂದರೆ (COPRA - Consumer Protection Act of 1986) ವಿಶ್ವಸಂಸ್ಥೆ ೧೯೮೫ರಲ್ಲಿ ಗ್ರಾಹಕ ರಕ್ಷಣೆಗೆ ಸಂಬಂಧಿಸಿದ ಬೃಹತ್ ಸಲಹಾ ನಿಲುವನ್ನು ಜಾರಿಗೆ ತಂದದ್ದನ್ನು ಅನುಸರಿಸಿಕೊಂಡು ಭಾರತ ೧೯೮೬ರಲ್ಲಿ ಈ COPRAವನ್ನು ಜಾರಿಗೆ ತಂದಿರುವುದು ಒಂದು ಮಹತ್ತರ ಸಾಧನೆಯೇ ಸರಿ. ಈ ಗ್ರಾಹಕ ಸಂರಕ್ಷಣಾ ಕಾಯಿದೆ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಿ ನ್ಯಾಯಬದ್ಧವಾಗಿ ಪರಿಶೀಲಿಸಿ ಅವರಿಗೆ ಪರಿಹಾರ ನೀಡಲು ಮೂರು ಹಂತದ ವೇದಿಕೆಗಳನ್ನು ಪ್ರಾರಂಭಿಸಿದೆ.

೧ ಜಿಲ್ಲಾ ಗ್ರಾಹಕ ವೇದಿಕೆ.

೨ ರಾಜ್ಯಮಟ್ಟದ ಗ್ರಾಹಕ ವೇದಿಕೆ.

೩ ರಾಷ್ಟ್ರಮಟ್ಟದ ಗ್ರಾಹಕ ವೇದಿಕೆ.

೧ ಕೊಂಡುಕೊಳ್ಳುವಾಗ ಸರಕುಗಳ ಮೊತ್ತ ಐದು ಲಕ್ಷ ರೂಪಾಯಿಗಳ ಒಳಮೌಲ್ಯದ್ದಾಗಿದ್ದರೆ, ಆ ಸರಕುಗಳ ದೋಷಪೂರಿತ, ಹಾನಿ ತರುವ ಸರಕುಗಳಾಗಿದ್ದಲ್ಲಿ ಗ್ರಾಹಕರು ಸೂಕ್ತ ಮಾಹಿತಿ ಮತ್ತು ಕ್ರಯ ಮಾಡಿದ ರಸೀದಿಗಳೊಂದಿಗೆ ಈ ವೇದಿಕೆಯಲ್ಲಿ ತಮ್ಮ ದೂರು ನೀಡಿ ಸರಿಯಾದ ಪರಿಹಾರ ಪಡೆಯುವ ಅವಕಾಶವಿದೆ.

೨ ರಾಜ್ಯಮಟ್ಟದ ಗ್ರಾಹಕ ವೇದಿಕೆಗಳು ಸರಕುಗಳು ಮತ್ತು ಸೇವೆಗಳ ಮೌಲ್ಯ ಐದು ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಇದ್ದು, ೨೫ ಲಕ್ಷದ ಒಳಗಿದ್ದ ಪಕ್ಷದಲ್ಲಿ ದೂರುಗಳನ್ನು ಸ್ವೀಕರಿಸಿ ಗ್ರಾಹಕರಿಗೆ ಅನುಕೂಲ ಮಾಡಿಕೊಡುತ್ತದೆ.

೩ ರಾಷ್ಟ್ರಮಟ್ಟದ ಗ್ರಾಹಕ ವೇದಿಕೆ ಸರಕು ಮತ್ತು ಸೇವೆಗಳ ಮೌಲ್ಯ ೨೫ ಲಕ್ಷ ರೂ. ಗಳಿಗೆ ಮೇಲ್ಪಟ್ಟಿದ್ದ ದೂರುಗಳನ್ನು ಸ್ವೀಕರಿಸಿ ಗ್ರಾಹಕರಿಗೆ ಪರಿಹಾರ ನೀಡಲು ಪ್ರಯತ್ನಿಸುತ್ತವೆ.

೧೯೮೬ರ ಈ ಗ್ರಾಹಕ ಸಂರಕ್ಷಣಾ ಕಾಯಿದೆಯನ್ನು ೧೯೯೩ ಮತ್ತು ೨೦೦೩ರಲ್ಲಿ ತಿದ್ದುಪಡಿ ಮಾಡಲಾಗಿ, ಗ್ರಾಹಕರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುವಂತೆ ಮಾಡಲಾಗಿದೆ. ಈ ಹಿಂದೆ ಸೇರಿಸದೇ ಇದ್ದ ವೈದ್ಯಕೀಯ, ಜೀವವಿಮೆ, ವಿದ್ಯೆ ಮತ್ತಿತರ ಸೇವೆಗಳನ್ನು ಈ ಕಾಯಿದೆಯಲ್ಲಿ ಸೇರಿಸಲಾಗಿರುವುದು ಒಂದು ವಿಶೇಷ ಸಾಧನೆಯೇ ಸರಿ.

ಯಾರು ಕಾರಣ?

ನಮ್ಮ ದೈನಂದಿನ ಆರ್ಥಿಕ ಸಮಸ್ಯೆಗಳಿಗೆ ಸರ್ಕಾರ, ಸಮಾಜ, ಅರ್ಥ ವ್ಯವಸ್ಥೆ, ಯೋಜನೆಗಳು, ಪ್ರತ್ಯಕ್ಷವಾಗಿ ಕಾರಣವಾದರೆ, ಅವುಗಳನ್ನು ಬಳಸಿಕೊಳ್ಳುವ ನಾವು ಪರೋಕ್ಷವಾಗಿ ಕಾರಣ. ನಾವೆಲ್ಲರೂ ಒಗ್ಗಟ್ಟಾಗಿ "ಬಳಕೆದಾರರ ಸಂಘ"ಗಳನ್ನು ಕಟ್ಟಿಕೊಂಡು ಕಲಬೆರಕೆ, ಬೆಲೆಯ ಸಮಸ್ಯೆಗಳ ಬಗ್ಗೆ ಚಿಂತಿಸಿ, ಚರ್ಚಿಸಲು ಪ್ರಯತ್ನಿಸಬಾರದೇಕೆ? ಇಂತಹ ಸಂಘಗಳ ಮೂಲಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಉತ್ಪಾದಕರಿಗೆ, ಸರ್ಕಾರಕ್ಕೆ ಸಲಹೆ ನೀಡಲು ಹೆಚ್ಚು ಹೆಚ್ಚು ಈ ಸಂಘಗಳನ್ನು ನಾವು ಪ್ರಾರಂಭಿಸಲೇಬೇಕು. ಅಲ್ಲಿ ಇಲ್ಲಿ ಕಾಣುವ, ಪ್ರೋತ್ಸಾಹವಿಲ್ಲದ ಕೆಲವೇ ಸಂಘಗಳು ಪ್ರಯೋಜನಕಾರಿಯಾಗಲಾರವು. ಪ್ರತಿ ರಾಜ್ಯ ಸರ್ಕಾರವು ಬಳಕೆದಾರರ ರಕ್ಷಣಾ ಸಂಸ್ಥೆಗಳನ್ನು ರಚಿಸಲೇಬೇಕು. ಪ್ರಜ್ಞಾವಂತ ಪ್ರಜೆಗಳಿಂದ ರಚಿಸಲ್ಪಡುವ ಈ ಸಂಘಗಳು ನಮ್ಮೆಲ್ಲರನ್ನೂ ಪ್ರಜ್ಞಾವಂತ ಬಳಕೆದಾರರನ್ನಾಗಿ ಮಾಡಲು ಪ್ರಯತ್ನಿಸಬಹುದೇ, ಕಾದು ನೋಡಬೇಕು.

ಕಲಬೆರಕೆ ವಸ್ತುಗಳಿಗೆ ಒಗ್ಗಿ ಹೋಗಿರುವ ನಮಗೆಲ್ಲ ಅಕ್ಕಿಯಲ್ಲಿ ಕಲ್ಲಿರುವುದು, ರಾಗಿಯಲ್ಲಿ ಮಣ್ಣಿರುವುದು ಪ್ರಕೃತಿ ನಿಯಮವೇನೊ ಎನ್ನುವಷ್ಟು ಸಹಜವಾಗಿಬಿಟ್ಟಿದೆ. ಇತ್ತೀಚಿನ ದಿನಗಳಲ್ಲಿ ಈ ಕಲಬೆರಕೆ ಹಾವಳಿ ವಿಪರೀತವಾಗಿ ಗ್ರಾಹಕರಾದ ನಮಗೆಲ್ಲ ಬದುಕು ನೀರಸವಾಗಿಬಿಟ್ಟಿದೆ, ಎಂದರೆ, ಸತ್ಯ ಮಿತ್ಯಗಳ ಹುಡುಕಾಟದಲ್ಲಿ ನಾವು ಸಿಕ್ಕಿಕೊಂಡಿದ್ದೇವೆ. ಪ್ರತಿಯೊಂದು ವಸ್ತುವಿನ ಬಗ್ಗೆಯೂ ನಾವು ಸಂಶಯ ಪಡಬೇಕಾಗಿದೆ. ಈ ಬಗ್ಗೆ ಪಟ್ಟಣಗಳಲ್ಲಿ ವಾಸಿಸುವ ನಮ್ಮವರನೇಕರಿಗೆ ಸ್ವಲ್ಪಮಟ್ಟಿನ ಪರಿಜ್ಞಾನವಿದ್ದರೆ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಮುಗ್ಧ ಜೀವಿಗಳಿಗೆ ಇದಾವುದೂ ತಿಳಿಯದೆ ಮೂಕರಾಗಿ ಮೋಸ ಹೊಂದಬೇಕಾಗಿದೆ. ಇದು ದೊಡ್ಡ ಶೋಷಣೆ ಅಲ್ಲವೆ?

ಪರಿಸ್ಥಿತಿ ಹೀಗಿರುವಾಗ ಗ್ರಾಹಕ ಕಂಗಾಲಾಗದೆ ನೆಮ್ಮದಿಯಿಂದ ಬದುಕಲು ಸಾಧ್ಯವೆ? ಬಡವರು, ಅನಕ್ಷರಸ್ಥರು ತುಂಬಿರುವ ನಮ್ಮ ದೇಶದಲ್ಲಿ ಸರಕಾರವೆ ಮುಂದೆ ಬಂದು "ಗ್ರಾಹಕರ ರಕ್ಷಣಾ ಸಂಘಗಳನ್ನು ಸ್ಥಾಪಿಸಿ, ಅದರ ಕಾರ್ಯ ಚಟುವಟಿಕೆಗಳಲ್ಲಿ ನೇರ ಭಾಗಿಯಾಗಿ ಹಣಕಾಸಿನ ನೆರವು ಮಾರ್ಗದರ್ಶನ ನೀಡಬೇಕು. ಆದರೆ ಯಾವ ಕಾರಣದಿಂದಲೂ ಈ ಹಸ್ತಕ್ಷೇಪ ರಾಜಕೀಯವಾಗಬಾರದು.

ಮೇಲೆ ಹೇಳಿದ ಪರಿಭಾವನೆಗಳ ಬಗ್ಗೆ ಗ್ರಾಹಕರಿಗೆ ತಿಳಿವಳಿಕೆ - ಮನವರಿಕೆಯಾಗಬೇಕಾದರೆ, ಹೀಗೆ ಸ್ಥಾಪಿಸಲ್ಪಡುವ "ಗ್ರಾಹಕರ ರಕ್ಷಣಾ ಸಂಘ"ಗಳು ಮತ್ತು ಇತರ ಸಂಬಂಧಿ ಸಂಘ ಸಂಸ್ಥೆಗಳು ಜನ ಸಾಮಾನ್ಯನಿಗೆ ಸುಲಭವಾಗಿ ಮನಮುಟ್ಟುವಂತೆ ಶಿಕ್ಷಣ ಪ್ರಸಾರ ಯೋಜನೆಗಳನ್ನು ಕೈಗೊಳ್ಳಬೇಕು. ಈ ಗ್ರಾಹಕರ ಶಿಕ್ಷಣ ವಿಶಾಲ ವ್ಯಾಪ್ತಿಯುಳ್ಳ ಸಮಗ್ರ ಪರಿಭಾವನೆಯಾಗಬೇಕು. ಅಂದರೆ ಬದಲಿ ವಸ್ತುಗಳ ಬಳಕೆ, ಮೋಸ ಹೊಂದಿದ ಗ್ರಾಹಕ ಯಾರಿಗೆ, ಯಾವಾಗ, ಹೇಗೆ ದೂರು ನೀಡಬೇಕೆಂಬ ಬಗ್ಗೆ ಪರಿಜ್ಞಾನ

ಮುಂತಾದವು ಇದರ ವ್ಯಾಪ್ತಿಯಲ್ಲಿ ಸೇರಬೇಕು. ಆಗ ಮಾತ್ರ ದಿನೇ ದಿನೆ ಬದಲಾಯಿಸುತ್ತಿರುವ ಈ ತಾಂತ್ರಿಕ ಜಾಹಿರಾತುಮಯ ಪ್ರಪಂಚದಲ್ಲಿ ಗ್ರಾಹಕನ ತನು, ಮನ, ಧನ ಛಿದ್ರವಾಗದೆ ಪ್ರಜ್ಞಾವಂತ ಬಳಕೆದಾರನಾಗಿ ನೆಮ್ಮದಿಯಿಂದ ಜೀವಿಸಲು ಸಾಧ್ಯ.

ಒಟ್ಟಿನಲ್ಲಿ ಗ್ರಾಹಕ ತನ್ನ ಹಕ್ಕು ಬಾಧ್ಯತೆಗಳನ್ನು ಅರಿತುಕೊಂಡು ಪ್ರಜ್ಞಾವಂತನಾಗಬೇಕಾದರೆ ಸಮಾಜದ ಎಲ್ಲಾ ವರ್ಗದ ಜನರಿಗೆ, ಗ್ರಾಮೀಣ ಮತ್ತು ಪಟ್ಟಣ ಪ್ರದೇಶದ ಗ್ರಾಹಕರಿಗೆ ಸಮಗ್ರ ಗ್ರಾಹಕ ಶಿಕ್ಷಣ ದೊರೆಯುವಂತಾಗಬೇಕು. ಹೀಗಾದಲ್ಲಿ ಗ್ರಾಹಕರು ಮಾರುಕಟ್ಟೆಯಲ್ಲಿ ಸರಕು ಮತ್ತು ಸೇವೆಗಳನ್ನು ಖರೀದಿಸುವಾಗ ಎಚ್ಚರ ವಹಿಸಬಹುದು, ಅನುಭೋಗದಲ್ಲಿ ಪೋಲಾಗುವುದನ್ನು ತಪ್ಪಿಸಬಹುದು, ತಾನು ಖರೀದಿಸುವ ಸರಕುಗಳ ಬಗ್ಗೆ ಸಾಧ್ಯವಾದಷ್ಟು ಮಾಹಿತಿಗಳನ್ನು ಪಡೆಯಬಹುದು ಮತ್ತು ತನ್ನ ಹಣಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲು ಸಾಧ್ಯವಾಗುವುದಲ್ಲದೆ ಈ ಜಾಹಿರಾತು ಪ್ರಪಂಚದ ನಕರಾತ್ಮಕ ಕತೆಗಳಿಂದ ಹೊರಬರಲು ಸಾಧ್ಯವಾಗುತ್ತದೆ. ನಮ್ಮ ಈ ಮಾರುಕಟ್ಟೆ ವ್ಯವಸ್ಥೆಯಲ್ಲಿ "ಕೊಳ್ಳುವವನೆ ಎಚ್ಚರಿಕೆ (caveat emptor)" ಎನ್ನುವ ತತ್ವ ಮಾಯವಾಗಿ "ಮಾರುವವನೆ ಎಚ್ಚರ (caveat venditor) ಎನ್ನುವಂತಾಗಬೇಕಾದರೆ ಗ್ರಾಹಕತ್ವದ ಪ್ರಚಾರ ಹೆಚ್ಚಾಗಬೇಕು. ಪ್ರತಿಯೊಬ್ಬ ಗ್ರಾಹಕನು ಪ್ರತಿರೋಧಕ್ಕೆ ಸಿದ್ಧವಾಗಬೇಕು. ತಮಗೆ ನ್ಯಾಯ ಸಿಗುವ ತನಕ ಸ್ವಾಮಿ ವಿವೇಕಾನಂದರ ನುಡಿಯಂತೆ "ಏಳಬೇಕು, ಎದ್ದೇಳಬೇಕು! ಗುರಿಮುಟ್ಟುವ ತನಕ ಹೋರಾಡಬೇಕು". ಹೀಗಾದಾಗ ಮಾತ್ರ ಗ್ರಾಹಕರಿಗೆ ನ್ಯಾಯ-ಪರಿಹಾರಗಳು ಪ್ರಚಲಿತ ಅರ್ಥವ್ಯವಸ್ಥೆಯಲ್ಲಿ ದೊರೆಯುತ್ತವೆಯೇ ಹೊರತು, ಇಲ್ಲವಾದಲ್ಲಿ ಪ್ರಸ್ತುತ ಎಲ್ಲಾ ಸಮಸ್ಯೆಗಳು ಹಾಗೆ ಮುಂದುವರಿದು, ಉಲ್ಬಣಗೊಂಡು ಗ್ರಾಹಕ ಕಂಗಾಲಾಗಬೇಕಾಗುತ್ತದೆ.

ಸುಸ್ಥಿರ ಅಭಿವೃದ್ಧಿಗೆ ಮಳೆಕೊಯ್ಲು

ಜೆ. ಆರ್. ಪರಮೇಶ

ನೀರು, ಆಹಾರ ಮತ್ತು ವಸತಿಗಳನ್ನು ಸಮರ್ಪಕವಾಗಿ ಪೂರೈಸಿಕೊಳ್ಳಲು ನಮ್ಮೆಲ್ಲರನ್ನು ಕಾಡುವ ಪ್ರಶ್ನೆ ಇಂಧನ ಮತ್ತು ಶಕ್ತಿಯ ಲಭ್ಯತೆ. ಸಾಂಪ್ರದಾಯಿಕ ಶಕ್ತಿ ಮೂಲಗಳಾದ ಕಲ್ಲಿದ್ದಲು, ತೈಲ, ಅನಿಲ ಇವುಗಳ ಲಭ್ಯತೆ ಕಡಿಮೆಯಾಗುತ್ತಿದ್ದು ಕೆಲವೇ ವರ್ಷಗಳಲ್ಲಿ ಮುಗಿಯುವ ಸಾಧ್ಯತೆಗಳೇ ಹೆಚ್ಚಾಗಿವೆ. ಇಷ್ಟಲ್ಲದೆ ಇವುಗಳ ದುರ್ಬಳಕೆಯಿಂದ ಪ್ರಕೃತಿಯ ಮೇಲಾಗುತ್ತಿರುವ ಪ್ರತಿಕೂಲ ಪರಿಣಾಮ ನಮಗೆಲ್ಲ ಮನದಟ್ಟಾಗುತ್ತಿದೆ. ಜಲ ಶಕ್ತಿ ಸಂಪನ್ಮೂಲದ ಬಳಕೆಗೂ ಇತಿಮಿತಿಗಳಿದ್ದು ದೊಡ್ಡ ಜಲಾಶಯಗಳ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಹಾಗೆಯೇ ಅಣುಶಕ್ತಿಸ್ಥಾವರಗಳ ಬಗ್ಗೆಯೂ ತೀವ್ರ ಜಿಜ್ಞಾಸೆಯಿದ್ದು ಇದನ್ನು ಸಹ ನಾಳೆಯ ಶಕ್ತಿ ಮೂಲವೆಂದು ಪರಿಗಣಿಸುವಂತಿಲ್ಲ. ವಿದ್ಯುಚ್ಛಕ್ತಿ ಸ್ಥಾವರಗಳ ಪರಿ ಹೀಗಾದರೆ ಗ್ರಾಮೀಣ ಇಂಧನದ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಒಂದೆಡೆ ವ್ಯವಸಾಯಕ್ಕೆ ಅರಣ್ಯ ಮತ್ತು ಕೆರೆ-ಕಟ್ಟೆಗಳ ನಾಶವಾದರೆ, ಮತ್ತೊಂದೆಡೆ ಶಾಖೋತ್ಪಾದನೆಗೆ ಮತ್ತಷ್ಟು ಅರಣ್ಯ ನಾಶವಾಗಿ ಮಳೆಯ ಅಭಾವ, ನೀರಿನ ಕೊರತೆ, ಇಂಧನದ ಅಲಭ್ಯತೆ ಇವುಗಳಿಂದ ನಾಳೆ ನಮಗೆ ಆಹಾರ ಪದಾರ್ಥಗಳು ದೊರೆತರೂ ಅವನ್ನು ಬೇಯಿಸಲು ಸಾಧ್ಯವೇ? ಎಂಬ ಸಮಸ್ಯೆ ಎದುರಾಗುವ ಕಾಲ ದೂರವಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಸುಸ್ಥಿರ ಅಭಿವೃದ್ಧಿಯತ್ತ ಗಮನ ಹರಿಸುವುದು ಪ್ರತಿಯೊಬ್ಬರ ಕರ್ತವ್ಯ. ಸುಸ್ಥಿರ ಅಭಿವೃದ್ಧಿಯ ಪಥದಲ್ಲಿ ನಡೆಯಲು ಪರಿಸರಪೂರಕ ಮಾರ್ಗೋಪಾಯಗಳು ಅಗತ್ಯ. ಒಂದೆಡೆ ಇಲ್ಲೆ ಲಭ್ಯವಿರುವ ಗಾಳಿ, ನೀರು ಮತ್ತು ಸೌರಶಕ್ತಿಯನ್ನು ಶಾಖೋತ್ಪಾದನೆ ಮತ್ತು ವಿದ್ಯುಚ್ಛಕ್ತಿಗೆ ಬಳಸಿದರೆ ಮತ್ತೊಂದೆಡೆ ಗ್ರಾಮೀಣ ಪ್ರದೇಶಗಳಲ್ಲೇ ದೊರೆಯುವ ಸಸ್ಯ ಮತ್ತಿತರ ಜೈವಿಕ ಸಂಪತ್ತನ್ನು ಬಳಸಿ ಜೈವಿಕ ಅನಿಲ, ಕಟ್ಟಿಗೆ ಅನಿಲ ಮತ್ತು ಇಂಧನ ತೈಲಗಳನ್ನು ಉತ್ಪಾದಿಸಿ ಶಕ್ತಿ ತಯಾರಿಕೆಗೆ ಬಳಸಬಹುದಾಗಿದೆ. ಇದರಿಂದ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ, ಸ್ಥಳೀಯ ಸಂಪನ್ಮೂಲಗಳ ಮೌಲ್ಯವರ್ಧನೆ, ಸ್ಥಳೀಯ ಕರಕುಶಲತೆಗೆ ಪ್ರೋತ್ಸಾಹ ಮತ್ತು ಉದ್ಯೋಗಾವಕಾಶವನ್ನು ಒದಗಿಸುವುದರೊಂದಿಗೆ ಪರಿಸರಪೂರಕ ಸುಸ್ಥಿರ ಅಭಿವೃದ್ಧಿ ಪಥದಲ್ಲಿ ನಡೆಯಲು ಸಾಧ್ಯ. ಇದಕ್ಕೆ ಅಗತ್ಯವಾದ ತಂತ್ರಜ್ಞಾನ ದೇಶೀಯವಾಗಿಯೇ ಲಭ್ಯವಿದೆ. ನಮ್ಮಲ್ಲಿ ಅದರ ಸದ್ಬಳಕೆಯ ನಿದರ್ಶನಗಳೂ ಸಾಕಷ್ಟಿವೆ.

ಇತ್ತೀಚಿನ ದಿನಗಳಲ್ಲಿ ನೀರಿನ ಕೊರತೆಯನ್ನು ತೀವ್ರವಾಗಿ ಎದುರಿಸುತ್ತಿರುವ ನಾವು "ಮಳೆ ಕೊಯ್ಲು" ಏನಂತಹ ಸುಸ್ಥಿರ ಮಾರ್ಗಗಳತ್ತ ದೃಷ್ಟಿ ಹರಿಸಬೇಕಾಗಿದೆ. ಏನಿದು ಮಳೆಕೊಯ್ಲು? ರೈತ ವರ್ಷವೆಲ್ಲ ಕಷ್ಟಪಟ್ಟು ಉತ್ತು-ಬಿತ್ತು ಬೆಳೆಸಿದ ಧಾನ್ಯ ಸಂಪತ್ತನ್ನು ಸುಗ್ಗಿ ಸಮಯದಲ್ಲಿ ಎಚ್ಚರಿಕೆಯಿಂದ ಸಂಗ್ರಹಿಸಿಟ್ಟುಕೊಂಡು ವರ್ಷವೆಲ್ಲಾ ಬಳಸಿಕೊಳ್ಳುವಂತೆ ಕೆಲವೇ ದಿವಸಗಳಲ್ಲಿ ಸುರಿಯುವ ಮಳೆನೀರನ್ನು ಸಂಗ್ರಹಿಸಿಟ್ಟುಕೊಂಡು ವರ್ಷವೆಲ್ಲಾ ಎಚ್ಚರಿಕೆಯಿಂದ ಬಳಸಿಕೊಳ್ಳುವ ಸರಳ ವಿಧಾನವಾಗಿರುತ್ತದೆ. ತಮ್ಮ ತಮ್ಮ ಪ್ರದೇಶಗಳ ಮೇಲೆ ಬಿದ್ದ ಮಳೆನೀರನ್ನು ಬಿದ್ದ ಜಾಗದಲ್ಲಿಯೇ ಶೇಖರಿಸಿ ಸಂಗ್ರಹಿಸಿಟ್ಟುಕೊಳ್ಳುವುದು. ಎರಡು ವಿಧಾನಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳಬಹುದು. ಮನೆಗಳ ಅಥವಾ ಕಟ್ಟಡಗಳ ಮೇಲ್ಛಾವಣಿಯ ಮೇಲೆ ಬಿದ್ದ ಮಳೆನೀರನ್ನು ಶೇಖರಿಸಿ ತೊಟ್ಟಿಗಳಲ್ಲಿ ಸಂಗ್ರಹಿಸುವುದು ಮತ್ತು ಶೋಧಿಸುವ ಹಳ್ಳಗಳು, ತೆರೆದ ಬಾವಿಗಳು, ಕೊಳವೆ ಬಾವಿಗಳ ಮೂಲಕ ಭೂಮಿಯಲ್ಲಿ ನೀರನ್ನು ಶೇಖರಿಸಿ ಉಪಯೋಗಿಸುವುದು. ಮನೆಯ ಮೇಲೆ ಮತ್ತು ಅಂಗಳದಲ್ಲಿ ಬಿದ್ದ ಮಳೆನೀರನ್ನು ಶೇಖರಿಸಿ ಬಳಸಿದಲ್ಲಿ ಅಂತರ್ಜಲದ ಮೇಲಿನ ಒತ್ತಡ ಕಡಿಮೆಯಾಗುತ್ತದೆ ಹಾಗೂ ವಿದ್ಯುಚ್ಛಕ್ತಿ ಮತ್ತು ಇತರೆ ಶಕ್ತಿ ಮೂಲಗಳ ಮೇಲಿನ ಒತ್ತಡವಿಲ್ಲದೆ ಸಾಕಷ್ಟು ಪ್ರಮಾಣದ ನೀರನ್ನು ಪ್ರತೀವರ್ಷ ಸಂಪಾದಿಸಿಕೊಳ್ಳಬಹುದಾಗಿದೆ. ಇದರಿಂದ ಸಾಂಪ್ರದಾಯಿಕ ನೀರಿನ ಮೂಲಗಳ ಮತ್ತು ಶಕ್ತಿ ಮೂಲಗಳ ಮೇಲಿನ ಅವಲಂಬನೆ ಕಡಿಮೆಯಾಗಿ ಸುಸ್ಥಿರತೆಯನ್ನು ಕಾಪಾಡಿದಂತಾಗುತ್ತದೆ.

ಮಳೆಕೊಯ್ಲು ಮಾಡುವುದಕ್ಕಿಂತ ಮೊದಲು ನಮಗೆಷ್ಟು ನೀರು ಬೇಕು, ನಾವೆಷ್ಟು ನೀರು ಬಳಸುತ್ತಿದ್ದೇವೆ ಎಂಬುದನ್ನು ಯೋಚಿಸೋಣ. ಒಂದು ಅಂದಾಜಿನ ಪ್ರಕಾರ ಮೈಸೂರು ನಗರದಲ್ಲಿ, ಸರಾಸರಿ ಪ್ರತಿಯೊಬ್ಬರ ನೀರಿನ ಬಳಕೆಯ ಪ್ರಮಾಣ ೧೩೫ ಲೀಟರುಗಳಷ್ಟು ಪ್ರತಿದಿನಕ್ಕೆ.

ಬಳಕೆಯ ಉದ್ದೇಶ	ಪ್ರಮಾಣ
ಕುಡಿಯಲು	೩ ಲೀ.
ಅಡುಗೆಗೆ	೪ ಲೀ.
ಸ್ನಾನಕ್ಕೆ	೨೦ ಲೀ.
ಶೌಚಾಲಯಕ್ಕೆ	೪೦ ಲೀ.
ಬಟ್ಟೆ ಒಗೆಯಲು	೨೫ ಲೀ.
ಪಾತ್ರೆ ತೊಳೆಯಲು	೨೦ ಲೀ.
ಇತರೆ	೨೫ ಲೀ.
ಒಟ್ಟು	೧೩೫ ಲೀ.

ಗಮನಿಸಿ, ಅತಿ ಹೆಚ್ಚು ನೀರು ಬಳಸುತ್ತಿರುವುದು ಶೌಚಾಲಯಕ್ಕೆ ಮತ್ತು ಅಲ್ಲಿ ಬಳಸುತ್ತಿರುವುದು ಪರಿಶುದ್ಧ ಕುಡಿಯುವ ನೀರನ್ನೇ ಎಂಬುದನ್ನು ನೆನಪಿನಲ್ಲಿಡಿ. ಕೆಲವು ಪರಿಸರ ಚಿಂತಕರ ಅಭಿಪ್ರಾಯದಂತೆ ಏರುತ್ತಿರುವ ಜನಸಂಖ್ಯೆಯಿಂದಾಗುತ್ತಿರುವ ನೀರಿನ ದುರ್ಬಳಕೆಗಿಂತಲೂ ಅಧಿಕಪಟ್ಟು ನೀರಿನ ದುರ್ಬಳಕೆ ಬೆಳೆಯುತ್ತಿರುವ ನಾಗರೀಕತೆಯಿಂದ ಆಗುತ್ತಿದೆ.

ನಾವು ನೀರನ್ನು ಸಂಗ್ರಹಿಸುವ ದಿಕ್ಕಿನಲ್ಲಿ ಕೆಲಸ ಮಾಡುವುದಕ್ಕಿಂತಲೂ ಮೊದಲು ಮಿತವಾಗಿ ಬಳಸುವ ಕಡೆ ಆಲೋಚಿಸುವುದು ಅಗತ್ಯ.

ವರ್ಷದಲ್ಲಿ ನಾವೆಷ್ಟು ನೀರು ಬಳಸುತ್ತೇವೆ ?

ಒಬ್ಬರಿಗೆ ಒಂದು ದಿನಕ್ಕೆ	ಒಬ್ಬರಿಗೆ ಒಂದು ವರ್ಷಕ್ಕೆ	ಐದು ಜನರ ಕುಟುಂಬಕ್ಕೆ ಒಂದು ವರ್ಷಕ್ಕೆ
೧೩೫ ಲೀ.	೪೯,೨೭೫ ಲೀ.	೨,೪೬,೩೭೫ ಲೀ.
೧೦೦ ಲೀ.	೩೬,೫೦೦ ಲೀ.	೧,೮೨,೫೦೦ ಲೀ.
೭೫ ಲೀ.	೨೭,೩೭೫ ಲೀ.	೧,೩೦,೮೭೫ ಲೀ.
೫೦ ಲೀ.	೧೮,೨೫೦ ಲೀ.	೯೧,೨೫೦ ಲೀ.

ಮೈಸೂರಿನಲ್ಲಿ ಸಿಗುವ ಮಳೆಯ ನೀರೆಷ್ಟು?

ಮೈಸೂರಿನ ಸರಾಸರಿ ವಾರ್ಷಿಕ ಮಳೆ ಪ್ರಮಾಣ ೮೦೦ ಮಿ. ಲೀ. ಶೇ. ೮೦ರಷ್ಟು ಮಳೆ ನೀರನ್ನು ಹಿಡಿದು ಶೇಖರಿಸಿದರೆ ದೊರಕುವ ನೀರಿನ ಪ್ರಮಾಣ ಹೀಗಿದೆ.

ಛಾವಣಿ ವಿಸ್ತೀರ್ಣ	ವರ್ಷದಲ್ಲಿ ಲಭ್ಯವಿರುವ ನೀರಿನ ಪ್ರಮಾಣ
೧೦೦ ಚದುರಡಿ (೧೦ ಚ. ಮೀ)	೬,೪೦೦ ಲೀ. ಗಳು
೧೦೦೦ ಚದುರಡಿ	೬೪,೦೦೦ ಲೀ. ಗಳು
೧೫೦೦ ಚದುರಡಿ	೯೬,೦೦೦ ಲೀ. ಗಳು
೨೦೦೦ ಚದುರಡಿ	೧,೨೮,೦೦೦ ಲೀ. ಗಳು

ಒಂದು ೬೦ x ೪೦ ಅಡಿ ನಿವೇಶನದಲ್ಲಿ ಪ್ರತಿವರ್ಷ ೧,೯೨,೦೦೦ ಲೀಟರ್ ನೀರು ಬಿದ್ದು ಹರಿದು ಹೋಗುತ್ತಿದೆ. ೫೦ x ೩೦ ಅಡಿ ನಿವೇಶನದಲ್ಲಿ ಪ್ರತಿವರ್ಷ ೩,೨೦,೦೦೦ ಲೀಟರ್ ನೀರು ಬಿದ್ದು ಹರಿದು ಹೋಗುತ್ತಿದೆ.

ಮಳೆ ನೀರು ಸಂಗ್ರಹಣೆ ಹೊಸ ವಿಧಾನವೇನೂ ಅಲ್ಲ. ಭಾರತ ದೇಶದಲ್ಲಿ ಮಳೆ ನೀರು ಸಂಗ್ರಹಿಸಿ ವ್ಯವಸ್ಥಿತವಾಗಿ ನಿರ್ವಹಿಸಿರುವುದಕ್ಕೆ ಪ್ರಾಚೀನ ಹಾಗೂ ಐತಿಹಾಸಿಕ ನಿದರ್ಶನಗಳು ಹೇರಳವಾಗಿವೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲೂ ಜನರು ಮಳೆ ನೀರು ಮತ್ತು ನೀರಾವರಿಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿರುವ ವಿಧಾನಗಳ ಬಗ್ಗೆ ಪ್ರಸ್ತಾಪವಿದೆ. ಸಿಂಧೂ ಬಯಲಿನ ನಾಗರೀಕತೆಯಲ್ಲೂ ಮಳೆ ನೀರನ್ನು ಸಂಗ್ರಹಿಸುವ ಹಾಗೂ ವ್ಯವಸ್ಥಿತವಾಗಿ ಬಳಸುವ ನಿದರ್ಶನಗಳು ಹೇರಳವಾಗಿವೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಮಳೆನೀರು ಸಂಗ್ರಹಣೆಯ ಕೆಲಸ ಅತ್ಯಗತ್ಯ. ಅಂತರ್ಜಲ ಮಟ್ಟ ಕ್ಷೀಣಿಸುತ್ತಾ, ದಿನೇ-ದಿನೇ ನೀರಿನಲ್ಲಿ ಕರಗುವ ಲವಣಾಂಶಗಳ ಪ್ರಮಾಣ ಅಧಿಕವಾಗುತ್ತಿದ್ದು, ಜನರು ಅನೇಕ ಕಾಯಿಲೆಗಳಿಂದ ಬಳಲುವಂತಾಗಿದೆ. ನದಿ, ಕೆರೆ ಮುಂತಾದ ನೀರಿನ ಮೂಲಗಳಲ್ಲಿ ನೀರಿನ ಕೊರತೆ ಕಂಡು ಬಂದಿದ್ದು ಇಡೀ ಜೀವಸಂಕುಲವೇ ಅಪಾಯದ ಅಂಚಿನಲ್ಲಿದೆ.

ಇಂತಹ ಪರಿಸ್ಥಿತಿಯಲ್ಲಿ ಶುದ್ಧ ನೀರಿನ ಮೂಲವಾದ ಮಳೆನೀರನ್ನು ಸಂಗ್ರಹಿಸುವುದು ಹಲವು ಸಮಸ್ಯೆಗಳಿಗೆ ಪರಿಹಾರ. ಛಾವಣಿ ಮಳೆನೀರನ್ನು ಒಂದೆಡೆ ಕಲೆ ಹಾಕಿ ತೊಟ್ಟಿಗಳಲ್ಲಿ ಸಂಗ್ರಹಿಸಿಡಬಹುದು. ಪ್ರತಿ ೧೦೦೦ ಚದರಡಿಗೆ ಸುಮಾರು ೪೦೦೦ ಲೀ. ನಿಂದ ೫೦೦೦ ಲೀ. ಸಾಮರ್ಥ್ಯದ ತೊಟ್ಟಿ ಕಟ್ಟಿದರೆ, ಮಳೆನೀರನ್ನು ಸಾಕಷ್ಟು ಪ್ರಮಾಣದಲ್ಲಿ ಶೇಖರಿಸಿ ಬಳಸಲು ಸಾಧ್ಯ. ೧೦೦೦ ಲೀ. ನಿಂದ ೨೦೦೦ ಲೀ. ಸಾಮರ್ಥ್ಯದ ತೊಟ್ಟಿಯಿದ್ದರೆ ಸಾಕಷ್ಟು ನೀರನ್ನು ಸಂಪಾದಿಸಬಹುದು. ತೊಟ್ಟಿಯನ್ನು ಸಿಮೆಂಟ್ ಗಾರೆಯಿಂದ, ಇಟ್ಟಿಗೆಯಿಂದ ನಿರ್ಮಿಸಬಹುದು, ಅಥವಾ ಪ್ಲಾಸ್ಟಿಕ್ ತೊಟ್ಟಿಗಳನ್ನು ಬಳಸಬಹುದು. ಈ ತೊಟ್ಟಿಗಳಲ್ಲಿ ಸೂರ್ಯನ ಕಿರಣ ಬೀಳದಂತಿರಬೇಕು. ಗಾಳಿ ಸಹ ಜಾಲರಿಯ ಮೂಲಕ ಆಡುವಂತೆ ವ್ಯವಸ್ಥೆ ಇರಬೇಕು.

ಮಳೆನೀರು ಪ್ರಕೃತಿಯಲ್ಲೇ ಅತಿ ಪರಿಶುದ್ಧವಾದ ನೀರು. ಛಾವಣಿಯನ್ನು ಸ್ವಚ್ಛವಾಗಿಟ್ಟುಕೊಂಡಲ್ಲಿ ಉತ್ತಮಗುಣಮಟ್ಟದ ನೀರನ್ನು ಪಡೆಯಬಹುದು. ಗುಣಮಟ್ಟ ಬಳಕೆಯ ಉದ್ದೇಶಕ್ಕೆ ಅನುಗುಣವಾಗಿದ್ದರೆ ಸಾಕು. ಅಂದರೆ ತೋಟಕ್ಕೆ ಹಾಯಿಸಲು, ಮನೆಗೆಲಸಕ್ಕೆ ಇತ್ಯಾದಿ...

ಕುಡಿಯಲು ಬಳಸುವುದಾದರೆ ಮೊದಲು ಸರಳ ಜಾಲರಿಯಲ್ಲಿ ಹಾಯಿಸಿ (ಎಲೆ, ಘನ ಕಸ ತೆಗೆಯಲು) ಅನಂತರ, ಮೊದಲ ಮಳೆ ಉಚ್ಚಾಟಕಕ್ಕೆ ಕಳುಹಿಸುತ್ತಾರೆ. ಇಲ್ಲಿ ತಾರಸಿ (ಛಾವಣಿ)ಯನ್ನು ತೊಳೆಯುವ ಮೊದಲು ೫೦ ಲೀಟರ್, ನೀರು ಶೇಖರಿಸಿ ತಾನಾಗಿಯೇ ಮುಚ್ಚಿ ತೊಟ್ಟಿಯಲ್ಲಿ ಸೇರದಂತೆ ಬೇರ್ಪಡಿಸುತ್ತದೆ. ಮುಂದೆ ಹರಿವ ಮಳೆ ನೀರನ್ನು ಸ್ಪಂಜಿನಿಂದ ಅಥವಾ ಮರಳು ಹಾಗೂ ಇದ್ದಿಲಿನಿಂದ ಮಾಡಿದ ಶೋಧಕದ ಮೂಲಕ ಹಾಯಿಸುವುದರಿಂದ ಪರಿಶುದ್ಧವಾದ ನೀರು ತೊಟ್ಟಿಯಲ್ಲಿ ಶೇಖರವಾಗುತ್ತದೆ. ಇದನ್ನು ಕುಡಿಯಲು ಬಳಸಬಹುದು.

ಉತ್ತಮ ಆರೋಗ್ಯ ಹಾಗೂ ನೈರ್ಮಲ್ಯಗಳಿಗಾಗಿ ಪರಿಶುದ್ಧ ನೀರಿನ ಅಭಾವವಿರುವ ಈ ದಿನಗಳಲ್ಲಿ ಇದು ಸೂಕ್ತ ವ್ಯವಸ್ಥೆ.

ಒಬ್ಬ ಮನುಷ್ಯನಿಗೆ ಕುಡಿಯಲು ಮತ್ತು ಅಡುಗೆಗಾಗಿ ೫ ಲೀ. ಪರಿಶುದ್ಧ ನೀರು ಪ್ರತಿದಿನದ ಅವಶ್ಯಕತೆಯಾದರೆ ೬ ಜನರಿರುವ ಕುಟುಂಬಕ್ಕೆ ಪ್ರತಿದಿನ ೩೦ ಲೀ. ನೀರು ಅವಶ್ಯಕವಿರುತ್ತದೆ. ಅಂದರೆ ತಿಂಗಳಿಗೆ ೯೦೦ ಲೀ. ಅಥವಾ ವರ್ಷಕ್ಕೆ ೧೦,೮೦೦ ಲೀ. ಮೈಸೂರಿನಂತಹ ಪ್ರದೇಶದಲ್ಲಿ ವಾರ್ಷಿಕ ೮೦೦ ಮಿ.ಲೀ. ಮಳೆ ಬೀಳುವುದರಿಂದ ೨೦೦ ಚದರಡಿ ಮನೆಯಿರುವ ಬಡಕುಟುಂಬದವರೂ ಕೂಡ ವರ್ಷಕ್ಕೆ ೧೩,೦೦೦ ಲೀ. ನೀರನ್ನು ಸಂಪಾದಿಸಬಹುದು. ಅವರು ೫೫೦೦ ಲೀ. ಸಾಮರ್ಥ್ಯದ ಒಂದು ತೊಟ್ಟಿಯನ್ನು ನಿರ್ಮಿಸಿಕೊಂಡರೆ ಮಳೆಗಾಲದಲ್ಲಿ ಹೆಚ್ಚು ಮಳೆ ಬೀಳುವುದರಿಂದ ಸಾಕಷ್ಟು ನೀರನ್ನು ಉಪಯೋಗಿಸಿಕೊಳ್ಳಬಹುದು. ಮಳೆಗಾಲ ಕೊನೆಯಾಗುವ ನವೆಂಬರ್ ತಿಂಗಳಿನಲ್ಲಿ ತೊಟ್ಟಿಯ ತುಂಬಾ ನೀರನ್ನು ಭದ್ರವಾಗಿ ಶೇಖರಿಸಿಟ್ಟುಕೊಂಡು ಪ್ರತಿದಿನ ೩೦ ಲೀ. ನಂತೆ ೬ ತಿಂಗಳು ಮಳೆ ಬೀಳದಿರುವ, ನೀರಿಗೆ ಅಭಾವವಿರುವ ದಿನಗಳನ್ನು ಸಂತೋಷವಾಗಿ ಶುದ್ಧ ನೀರಿನ ಬಳಕೆಯಿಂದ ನಿರ್ವಹಿಸಬಹುದು. ಮತ್ತೆ ಮಳೆಗಾಲ ಪ್ರಾರಂಭವಾದಾಗ ತೊಟ್ಟಿ ಭರ್ತಿಯಾಗಿ ಯಥಾಸ್ಥಿತಿ ಉತ್ತಮ ನೀರು ದೊರಕುತ್ತದೆ. ಹೀಗೆ ಪ್ರತೀ ಬಡ ಕುಟುಂಬವೂ ನೀರಿನ ಭದ್ರತೆಯಿಂದ ಹಳ್ಳಿಗಾಡಿನಲ್ಲೂ ಬದುಕಬಹುದಾಗಿದೆ.

ಮುಂದಿನ ಒಣ ದಿನಗಳನ್ನೆದುರಿಸಲು ಇಂದೇ ಸನ್ನದ್ಧರಾಗೋಣ. ನಮ್ಮ ಮನೆಗಳಲ್ಲಿ, ಕಛೇರಿಗಳಲ್ಲಿ ಮತ್ತು ನಮ್ಮ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ನೀರನ್ನು ಶೇಖರಿಸಲು ಮತ್ತು ಇಂಗಿಸಲು ವ್ಯವಸ್ಥೆ ಮಾಡೋಣ. ಸಾಮರ್ಥ್ಯಕ್ಕೆ ಸೂಕ್ತವಾಗಿ ಶುರು ಮಾಡಿ ಅನುಕೂಲಕ್ಕೆ ತಕ್ಕಂತೆ ವರ್ಧಿಸಬಹುದು. ಜಲಕಲ್ಯಾಣದಿಂದ ಜನಕಲ್ಯಾಣದತ್ತ ಹೆಜ್ಜೆ ಹಾಕೋಣ.

ಅಳಿಯುತ್ತಿರುವ ಬುಡಕಟ್ಟು ಸಂಸ್ಕೃತಿ

ಪ್ರೊ. ಅಂಬಳಿಕೆ ಹಿರಿಯಣ್ಣ

ಶತಶತಮಾನಗಳಿಂದಲೂ ಬೆಟ್ಟಗುಡ್ಡಗಳ ಪ್ರದೇಶದಲ್ಲಿ, ಮರಳುಗಾಡುಗಳಲ್ಲಿ, ಹಿಮ ಪ್ರದೇಶಗಳಲ್ಲಿ, ದ್ವೀಪಗಳಲ್ಲಿ ನೆಲೆಸಿ ಬೇಟೆ ಪಶುಪಾಲನೆಯನ್ನೇ ಅವಲಂಬಿಸಿ ಬದುಕುವ ಜನರನ್ನು 'ಬುಡಕಟ್ಟು' (Tribe) ಜನರೆಂದು ಗುರುತಿಸಲಾಗುತ್ತದೆ. ಈ ಜನ ಪ್ರತ್ಯೇಕವಾದ ಭಾಷೆ, ಆಚಾರ, ವ್ಯವಹಾರ, ರೀತಿರಿವಾಜುಗಳನ್ನು ಹೊಂದಿದ್ದು ತನ್ನದೇ ಆದ ಕೇಂದ್ರದಲ್ಲಿ ಪ್ರತ್ಯೇಕ ಜೀವನಶೈಲಿಯನ್ನು ರೂಢಿಸಿಕೊಂಡು ತನಗೆ ತಾನೇ ಮಾದರಿಯಾಗಿ ಬೆಳೆಯುತ್ತ ಹೋಗುವ ಸಂಸ್ಕೃತಿಯನ್ನು ರೂಢಿಸಿಕೊಂಡಿರುತ್ತಾರೆ. ಈ ಸಂಸ್ಕೃತಿ 'ಒಡಲನೂಲಿನಿಂದ ಜೇಡ ನೇಯುವಂತೆ ಜಾಲ' ತನ್ನ ಹೊಟ್ಟೆಯೊಳಗಿಂದ ಹುಟ್ಟಿದುದು ಹಾಗೂ ಮತ್ತೆ ಮತ್ತೆ ಹುಟ್ಟಿ ಬೆಳೆಯುತ್ತಿರುವಂಥದು. ಅದರಷ್ಟಕ್ಕೆ ಅದು ಸ್ವತಂತ್ರ; ಅದಕ್ಕೆ ಅದೇ ಮೂಲ.

ಈ ಸಂಸ್ಕೃತಿಯಲ್ಲಿ ರಕ್ತಸಂಬಂಧಕ್ಕೆ ವಿಶೇಷ ಪ್ರಾಶಸ್ತ್ಯವಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಮೂಹದ ಪ್ರತಿಯೊಬ್ಬನನ್ನೂ ತಿಳಿದುಕೊಂಡಿರುತ್ತಾನೆ. ಕರ್ತವ್ಯ ಹಾಗೂ ರಕ್ತಸಂಬಂಧಗಳಿಂದ ಹೆಣೆಯಲ್ಪಟ್ಟ ಸಾಮಾಜಿಕ ಸಂಬಂಧಗಳೇ ಬುಡಕಟ್ಟು ಸಮೂಹಗಳ ಜೀವಾಳ. ಕುಟುಂಬ ಹಾಗೂ ಬಂಧುತ್ವ ಸಂಸ್ಥೆಗಳೇ ಕೇಂದ್ರ ಬಿಂದುಗಳಾಗಿರುವ ಇಂಥ ಸಮೂಹಗಳಲ್ಲಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ಸಾಮಾಜಿಕ ಅಂತಸ್ತುಗಳಲ್ಲಿ ವ್ಯಕ್ತಿಗಳ ನಡುವೆ ಕೊಂಚ ತಾರತಮ್ಯ ಕಂಡುಬಂದರೂ ಅವು ಗುಂಪಿನ ರಚನೆಯಲ್ಲಿ ಸ್ಥಾಯೀ ಅಂಶಗಳಾಗಿ ಮುಂದುವರೆಯುವುದಿಲ್ಲ. ತುಂಬ ಬಿಗಿಕಟ್ಟಾದ ನಿಯಮಗಳನ್ನು ಪಾಲಿಸುವ ಈ ಸಮೂಹಗಳು ಹೊರಗಿನ ಯಾರನ್ನೂ ಅನುಮಾನದಿಂದಲೇ ನೋಡುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಜಗತ್ತಿನಾದ್ಯಂತ ಇಂಥ ಸಹಸ್ರಾರು ಬುಡಕಟ್ಟುಗಳಿದ್ದು ಸುಮಾರು ಇಪ್ಪತ್ತು ಕೋಟಿಗೂ ಹೆಚ್ಚು ಜನಸಂಖ್ಯೆ ಇದೆ ಎಂದು ಅಂದಾಜು ಮಾಡಲಾಗಿದೆ. ಫೆಸಿಫಿಕ್ ಸಾಗರದ ಮೆಲನೇಷಿಯಾ, ಮೈಕ್ರೊನೇಷಿಯಾ, ಪಾಲಿನೇಷಿಯಾ ಮೊದಲಾದ ದ್ವೀಪ ಸಮೂಹಗಳ ಬುಡಕಟ್ಟುಗಳು, ಆಫ್ರಿಕಾದ ಕಾಡುಗಳಲ್ಲಿ ಮತ್ತು ಮರಳುಗಾಡುಗಳಲ್ಲಿ ನೆಲೆಸಿರುವ ಬುಡಕಟ್ಟುಗಳು, ಭಾರತೀಯ ಬುಡಕಟ್ಟುಗಳು ಅದಕ್ಕೆ ಒಳ್ಳೆಯ ಉದಾಹರಣೆಗಳು. ಕಸುಬು ಆಧಾರಿತವಾಗಿ ವರ್ಗೀಕರಿಸಲ್ಪಟ್ಟ ಐದು ಜಾತಿಗಳನ್ನು ಹೊರತುಪಡಿಸಿ ಉಳಿದ ಹಿಂದೂ ಸಾಮಾಜಿಕ ಗುಂಪುಗಳನ್ನೆಲ್ಲಾ ಭಾರತದಲ್ಲಿ 'ಬುಡಕಟ್ಟುಗಳು' ಎಂದೇ ಹೆಸರಿಸಲಾಗಿದೆ. ಈ ಜನರು ಜಾತಿ ಸಮೂಹಗಳೊಡನೆ ಬೆರೆಯದೆಯೇ ಸ್ವತಂತ್ರವಾಗಿ

ಪ್ರತ್ಯೇಕವಾಗಿಯೇ ಇರುವಂಥವರು. ನಾಗರಿಕರು ಎಂದು ಗುರುತಿಸಲಾಗುವ ಜನಜಾತಿಗಳಿಂದ ದೂರವಿರಲು ಈ ಬುಡಕಟ್ಟುಗಳು ಬೆಟ್ಟಗುಡ್ಡಗಳಲ್ಲಿ ನೆಲೆಸಿರುವುದೇ ಕಾರಣ.

ಭಾರತದಲ್ಲಿ ಬುಡಕಟ್ಟುಗಳ ಪರಿಸ್ಥಿತಿ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಬ್ರಿಟಿಷರ ಆಳ್ವಿಕೆಗೆ ಮೊದಲು ಬುಡಕಟ್ಟುಗಳ ಸ್ವಚ್ಛಂದ ಜೀವನಕ್ಕೆ ಸ್ವಾತಂತ್ರ್ಯಕ್ಕೆ ಯಾವ ರೀತಿಯಲ್ಲೂ ಧಕ್ಕೆ ಬಂದಿರಲಿಲ್ಲ. ಹಲವಾರು ಶತಮಾನಗಳ ಮುಸಲ್ಮಾನರ ಆಳ್ವಿಕೆಯ ಕಾಲದಲ್ಲೂ ಬುಡಕಟ್ಟುಗಳು ಸ್ವತಂತ್ರವಾಗಿದ್ದವು. ಬ್ರಿಟಿಷರ ಆಗಮನದ ನಂತರ ದೇಶದಾದ್ಯಂತ ಏಕರೀತಿಯ ಆಳ್ವಿಕೆಯ ಕ್ರಮ ಜಾರಿಗೆ ಬಂತು. ಕಾಲಕ್ರಮೇಣ ಕೈಗಾರಿಕಾ ಕ್ರಾಂತಿಯಿಂದಾಗಿ ಬ್ರಿಟಿಷರು ಭಾರತದಾದ್ಯಂತ ರಸ್ತೆ ನಿರ್ಮಾಣ ಹಾಗೂ ರೈಲ್ವೆ ಸಂಪರ್ಕ ಕಾರ್ಯದಲ್ಲಿ ತೊಡಗಿದರು. ಇದರಿಂದಾಗಿ ಕಾಡುಗಳನ್ನು ಕಡಿಯಬೇಕಾಯಿತು. ಸಂಪರ್ಕ ಸಾಧನಗಳು ಹೆಚ್ಚಾದಂತೆಲ್ಲಾ ಪರ್ವತಾರಣ್ಯಗಳಲ್ಲಿ ವಾಸವಾಗಿದ್ದ ಬುಡಕಟ್ಟು ಜನ ಅನಿವಾರ್ಯವಾಗಿ ಇತರರ ಸಂಪರ್ಕಕ್ಕೆ ಬರಬೇಕಾಯಿತು. ಅದೇ ಸಂದರ್ಭದಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಬ್ರಿಟಿಷರು ಈ ಬುಡಕಟ್ಟು ಜನರ ಸ್ವಾಮ್ಯದಲ್ಲಿದ್ದ ಪರ್ವತಾರಣ್ಯ ಪ್ರದೇಶಗಳನ್ನು ಕಿತ್ತುಕೊಂಡರು. ಇದರಿಂದಾಗಿ ಸ್ಥಳಾಂತರ ಬೇಸಾಯ ಮಾಡುತ್ತಿದ್ದ ಬುಡಕಟ್ಟು ಜನರಿಗೆ ಭೂಮಿ ಇಲ್ಲದಂತಾಯಿತು. ಈ ಸಂದರ್ಭದಲ್ಲೇ ಕೆಲವು ಬ್ರಿಟಿಷ್ ಜನ ಇಲ್ಲಿಯ ಚಹಾ ತೋಟಗಳ ಒಡೆತನ ಹೊಂದಿದರು; ಗಣಿ ಮಾಲೀಕರಾದರು. ಈ ತೋಟ ತುಡಿಕೆಗಳಲ್ಲಿ ಗಣಿಗಳಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಯಿತು. ಆ ವೇಳೆಗಾಗಲೇ ಭೂಮಿಯನ್ನು ಕಳೆದುಕೊಂಡಿದ್ದ ಬುಡಕಟ್ಟು ಜನ ಚಹಾ ತೋಟಗಳಲ್ಲಿ ಗಣಿಗಳಲ್ಲಿ ಕೆಲಸಗಾರರಾಗಿ ಸೇರಿಕೊಂಡರು. ಇದರಿಂದಾಗಿ ಈ ಜನ ಪ್ರತಿನಿತ್ಯವೂ ಇತರರ ಸಂಪರ್ಕಕ್ಕೆ ಬಂದು ತಮ್ಮ ಸಂಸ್ಕೃತಿಯ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಾ ಇತರ ಹಿಂದೂ ಸಮುದಾಯಗಳ ಜೀವನಶೈಲಿಯನ್ನು ಅನುಸರಿಸುವುದು ಅನಿವಾರ್ಯವಾಯಿತು. ಭೂಮಿಯನ್ನು ಕಳೆದುಕೊಂಡಿದ್ದ ಕೆಲವರಿಗೆ ಅಲ್ಪಸ್ವಲ್ಪ ಪರಿಹಾರಧನ ಸಿಕ್ಕಿತ್ತಾದರೂ ಖಾಯಂ ಕೆಲಸದ ಭರವಸೆ ಇರಲಿಲ್ಲ. ಇದರಿಂದಾಗಿ ಬಹುಪಾಲು ಜನ ಕೂಲಿ ಕಾರ್ಮಿಕರಾಗಿ ದುಡಿಯತೊಡಗಿ ತೀವ್ರವಾದ ಆರ್ಥಿಕ ಸಂಕಷ್ಟಕ್ಕೆ ಗುರಿಯಾದರು. ಶ್ರೀಮಂತರ ಬಳಿ ಸಾಲ ಮಾಡಿ ತಮ್ಮಲ್ಲಿದ್ದ ಅಲ್ಪ ಸ್ವಲ್ಪ ಸ್ವತ್ತುಗಳನ್ನೂ ಕಳೆದುಕೊಂಡು ಕಡುಬಡವರಾದರು. ಅವರಿಗೆ ಮೊದಲಿದ್ದ ಸುಖಶಾಂತಿಗಳು ಇಲ್ಲವಾದವು. ತಮ್ಮ ಜೀವಾಳವೇ ಆಗಿದ್ದ ಭೂಮಿ ಮತ್ತು ಸಂಸ್ಕೃತಿಯನ್ನು ಕಳೆದುಕೊಂಡು ಅನಾಥರಾದರು. ದಟ್ಟವಾದ ಪರ್ವತ ಪ್ರದೇಶಗಳಲ್ಲಿದ್ದ ಬುಡಕಟ್ಟು ಜನರು ಮಾತ್ರ ಈ ಹೊಡೆತದಿಂದ ಪಾರಾಗಿ ತಮ್ಮ ಮೂಲ ಸಂಸ್ಕೃತಿಯನ್ನು ಕಾಯ್ದುಕೊಂಡರು. ಕೆಲವು ಬುಡಕಟ್ಟು ಸಮೂಹಗಳಂತೂ ತಮ್ಮ ಪ್ರದೇಶ ಪರಕೀಯರ ವಶವಾಯಿತು ಎಂಬ ಪರಕೀಯ ಪ್ರಜ್ಞೆ ಮೂಡಿ ತಮ್ಮ ಹಕ್ಕನ್ನು ಕಾಯ್ದುಕೊಳ್ಳಲು ದಂಗೆ ಎದ್ದರು. ಬ್ರಿಟಿಷರು ಈ

ವಂಗೆಯನ್ನು ಸದೆಬಡಿದರು. ಇನ್ನು ಕೆಲವು ಬುಡಕಟ್ಟುಗಳು ಹತಾಶರಾಗಿ ದರೋಡೆಗೆ ಇಳಿದವು. ಬ್ರಿಟಿಷ್ ಸರಕಾರ ಅಂತಹ ಬುಡಕಟ್ಟುಗಳನ್ನು ಅಪರಾಧಿ ಬುಡಕಟ್ಟುಗಳು ಎಂದು ಹೆಸರಿಸಿ ತೀವ್ರ ಬಿಗಿರಕ್ಷಣಾಕ್ರಮಗಳನ್ನು ಜರುಗಿಸಿತು.

ಬ್ರಿಟಿಷರು ಈ ಬುಡಕಟ್ಟು ಜನರನ್ನು ಮೊದಲಿಗೆ ಗುರುತಿಸಿದ್ದು ನಿಜ ಎಂದು ಒಪ್ಪಿಕೊಂಡರೂ ತಮ್ಮ ಸ್ವಾರ್ಥ ಸಾಧನೆಗಾಗಿ ಅವರು ಬಳಸಿಕೊಂಡ ಒಳಮಾರ್ಗಗಳು ಹಲವು. ಬುಡಕಟ್ಟು ಜನರು ಸ್ವಚ್ಛಂದವಾಗಿ ಬದುಕುತ್ತಿದ್ದ ಪ್ರದೇಶಗಳನ್ನು ಭೂಮಾಲೀಕರಿಗೆ ಹಂಚಿದರು. ಅದರ ಉತ್ಪನ್ನ ಆಳುವ ಬ್ರಿಟಿಷರಿಗೂ ಭೂಮಾಲೀಕ ವರ್ಗಕ್ಕೂ ಹಂಚಿಕೆಯಾಗತೊಡಗಿತು. ಕಾಡಿನಲ್ಲಿ ಸ್ವೇಚ್ಛೆಯಾಗಿ ಅಲೆದಾಡುತ್ತ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುತ್ತಾ ಸಾಧ್ಯವಾದಲ್ಲಿ ಸ್ಥಳಾಂತರ ಬೇಸಾಯ ಮಾಡುತ್ತಾ ತಮ್ಮ ಪಾಡಿಗೆ ತಾವು ಇದ್ದವರನ್ನು, ಬ್ರಿಟಿಷರ ಈ ತಂತ್ರದಿಂದಾಗಿ, ಭೂಮಾಲೀಕರ ಹಿಡಿತದಲ್ಲಿ ಸಿಲುಕಿಸಲಾಯಿತು. ಕಾಡುಗಳು ಕ್ರಮೇಣ ಟೀ/ಕಾಫಿ/ಏಲಕ್ಕಿ/ಅಡಿಕೆ ತೋಟಗಳಾಗಿ ಬತ್ತದ ಗದ್ದೆಗಳಾಗಿ ಬದಲಾಗತೊಡಗಿದವು. ಕಾಡಿನ ಉತ್ಪನ್ನಗಳಿಂದ ವಂಚಿತರಾದುದಲ್ಲದೆ ಭೂಮಾಲೀಕರ ದೌರ್ಜನ್ಯಕ್ಕೆ ಒಳಗಾದ ಈ ಬುಡಕಟ್ಟು ಜನ ಅನಿವಾರ್ಯವಾಗಿ ಇವರ ತೊತ್ತುಗಳಾಗಿ ಬಿಟ್ಟರು. ಹೀಗೆ ಅತಂತ್ರರನ್ನಾಗಿಸಿದ ಬುಡಕಟ್ಟು ಜನರನ್ನು ಆಸೆ ತೋರಿಸಿ ಮತಾಂತರಗೊಳಿಸುವುದು ಬ್ರಿಟಿಷರಿಗೆ ಸುಲಭವಾಗಿತ್ತು. ಮೇಲಿಂದ ಮೇಲೆ ಜರುಗಿದ ಇಂಥ ಹುನ್ನಾರುಗಳಿಂದ ಬುಡಕಟ್ಟು ಜನರು ಲೆಕ್ಕಕ್ಕೆ ಸಿಗದ ಕ್ಷುದ್ರ ಜಂತುಗಳಾಗಿ ಹೋದರು. ಅವರ ಆತ್ಮಸ್ಥೈರ್ಯವೇ ನಾಶವಾಗಿ ಹೋಯಿತು. ಕಾಡನ್ನು ಅವಲಂಬಿಸಿ ಬದುಕುತ್ತಿದ್ದ ಬುಡಕಟ್ಟು ಜನರು ಭೂಮಾಲೀಕರ ತೊತ್ತುಗಳಾಗಿ ಹೋದ ಅವಸ್ಥೆಯ ಹಿಂದೆಯೇ ಸ್ವತಂತ್ರಭಾರತ ಅವರಿಗೆ ನೀಡಿದ ಕೊಡುಗೆ ಇನ್ನೂ ಕ್ರೂರವಾದುದು. ಅರಣ್ಯ ಸಂರಕ್ಷಣೆಯ ಘೋಷಣೆಯೊಂದಿಗೆ ಹುಟ್ಟಿಕೊಂಡ ಅರಣ್ಯ ಇಲಾಖೆಯ ಕ್ರೂರದೃಷ್ಟಿಗೆ ಮೊದಲು ಬಲಿಯಾದವರು ಈ ಬುಡಕಟ್ಟು ಜನರು. ಭೂಮಾಲೀಕರ ತೋಟತುಡಿಕೆಗಳು ವಿಸ್ತರಣೆಯಾಗುತ್ತಾ ಹೋದಂತೆ ಇವರ ಗುಡಿಸಲುಗಳು ಹಿಂದೆ ಸರಿಯುತ್ತಾ ಹೋದವು. ಭೂಮಾಲೀಕರ ತೋಟಗಳು ವಿಸ್ತರಣೆಯಾಗುವುದನ್ನು ಅರಣ್ಯ ಇಲಾಖೆ ಸಹಿಸಿಕೊಂಡಿತಾದರೂ ಬುಡಕಟ್ಟು ಜನರ ವಾಸದ ಗುಡಿಸಲುಗಳ ವಿಸ್ತರಣೆಯನ್ನು ಸಹಿಸಲಿಲ್ಲ. ಕೆಲವು ಪ್ರದೇಶಗಳಲ್ಲಂತೂ ಭೂಮಾಲೀಕರ ಪರವಾಗಿಲ್ಲದ ಬುಡಕಟ್ಟು ಜನರನ್ನು ಅರಣ್ಯ ಇಲಾಖೆಯ ಮೂಲಕವೇ ಒಕ್ಕಲೆಬ್ಬಿಸಲಾಯಿತು. ಕೊಡಗಿನ ಯರವರು, ಕಾಡುಕುರುಬರು, ದಕ್ಷಿಣ ಕನ್ನಡದ ಮಲೆಕುಡಿಯರು, ಉತ್ತರ ಕನ್ನಡದ ಕಚ್ಚೆಗೌಳಿಗರು ಇಂಥ ಅನೇಕಾನೇಕ ಕಷ್ಟಗಳನ್ನು ಇಂದಿಗೂ ಎದುರಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಸದ್ಯ ಅರುವತ್ತಮೂರು ಬುಡಕಟ್ಟುಗಳಿವೆ ಎಂದು ಹೇಳಲಾಗಿದೆ. ಆ ಪೈಕಿ ಸೋಲಿಗರು, ಕಾಡುಕುರುಬರು, ಮ್ಯಾಸಬೇಡರು, ಕಾಡುಗೊಲ್ಲರು, ಕೊರಗರು,

ಕುಡುಬಿಯರು, ಕಚ್ಚೆಗೌಳಿಗರು, ಸಿದ್ಧಿಯರು, ಹಸಲರು, ಗೊಂಡರು, ಕುಡಿಯರು, ಯರವರು, ಮನ್ನರು, ಫಣಿಯರು, ಜೇನುಕುರುಬರು, ಮೇದರು, ಇರುಳರು, ಇಲ್ಲಿಗರು, ಸುಡುಗಾಡುಸಿದ್ಧರು, ಅಡವಿ ಚೆಂಚರು, ಮುಕ್ರಿಯರು, ಗೌಡಲು, ಗಾಮೊಕ್ಕಲು, ಕರೆ ಒಕ್ಕಲು, ಹಾಲಕ್ಕಿ ಒಕ್ಕಲಿಗರು, ಲಂಬಾಣಿಗರು ಇವರೇ ಮುಂತಾದವರು ಮುಖ್ಯರು. ಆದರೆ ಭಾರತ ಸರ್ಕಾರ ಮೈಸೂರು, ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಮಾತ್ರ ಬುಡಕಟ್ಟು ಜನರ ಪ್ರದೇಶ ಎಂದು ಸಾರಿದೆ. ದಟ್ಟ ಬುಡಕಟ್ಟು ಜನರ ಪ್ರದೇಶಗಳಾದ ಶಿವಮೊಗ್ಗ ಮತ್ತು ಉತ್ತರ ಕನ್ನಡ ಇನ್ನೂ ಅದರ ಲಕ್ಷ್ಯದಲ್ಲಿಲ್ಲ. ಶಿವಮೊಗ್ಗ ಜಿಲ್ಲೆಯ ಹಸಲರು, ಕುಣುಬಿಯರು, ಉತ್ತರ ಕನ್ನಡದ ಗೊಂಡರು, ಸಿದ್ಧಿಯರು, ಗೌಳಿಗರು, ಹಾಲಕ್ಕಿ ಒಕ್ಕಲಿಗರು, ಮುಕ್ರಿಯರು ಇನ್ನೂ ಬುಡಕಟ್ಟು ಸಮೂಹಗಳಾಗಿ ಪರಿಗಣಿತವಾಗಿಲ್ಲ! ಅಲ್ಲದೆ ಭಾರತ ಸರ್ಕಾರ ಗುರುತಿಸಿರುವ ಇತರ ಜಿಲ್ಲೆಗಳಲ್ಲೂ ಬುಡಕಟ್ಟು ಜನರಾಗಬಹುದಾದ ಎಷ್ಟೋ ಸಮೂಹಗಳಿವೆ ದಕ್ಷಿಣ ಕನ್ನಡದಲ್ಲಿ ಮರಾಠಿ, ಕೊರಗ, ಮಲೆಕುಡಿಯರು ಮಾತ್ರ ಬುಡಕಟ್ಟು ಜನರಾಗಿದ್ದಾರೆ. ಉಳಿದವರಲ್ಲ, ಈ ನಿರ್ಣಯಕ್ಕೆ ಏನು ಮಾನದಂಡವೊ ಸ್ಪಷ್ಟವಿಲ್ಲ.

ಕರ್ನಾಟಕದ ಪಶುಸಂಗೋಪನ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಪ್ರಮುಖ ಬುಡಕಟ್ಟುಗಳೆಂದರೆ ಗೊಲ್ಲರು ಮತ್ತು ಕುರುಬರು. ಗೊಲ್ಲರಲ್ಲಿ ಕಾಡುಗೊಲ್ಲರು ಮತ್ತು ಊರುಗೊಲ್ಲರು ಎಂಬ ಎರಡು ಪ್ರಭೇದಗಳಿವೆ. ಅಂತೆಯೇ ಕುರುಬರಲ್ಲೂ ಈ ಪ್ರಭೇದಗಳಿವೆ. ಊರುಗೊಲ್ಲರು ಮತ್ತು ಊರುಕುರುಬರು ಊರು ಸೇರಿದ ಕಾರಣಕ್ಕಾಗಿ ತಮ್ಮೊಡನೆ ಬಾಳುವ ಇತರ ಜನ ಸಮೂಹಗಳ ಸಂಸ್ಕೃತಿಯ ಜೊತೆ ಬೆರೆತು ಹೋಗಿದ್ದಾರೆ. ಆದರೆ ಕಾಡುಗೊಲ್ಲರ ಮತ್ತು ಕಾಡುಕುರುಬರ ಸಂಸ್ಕೃತಿ ಇಂದಿಗೂ ವಿಶಿಷ್ಟವಾಗಿಯೇ ಉಳಿದುಕೊಂಡು ಬಂದಿವೆ. ಕಾಡುಗೊಲ್ಲರು ತಮ್ಮ ವಾಸಕ್ಕಾಗಿ ಆಯ್ದುಕೊಂಡಿರುವ ಭೂಪ್ರದೇಶಗಳು ವಿಶಿಷ್ಟವಾಗಿವೆ. ಕುರುಚಲು ಕಾಡುಗಳ, ಸಾಮಾನ್ಯ ಗುಡ್ಡಬೆಟ್ಟಗಳ ಹುಲ್ಲುಗಾವಲುಗಳೇ ಪ್ರಧಾನವಾದ ಪ್ರದೇಶ ಇವರ ವೃತ್ತಿಗೆ ಪೂರಕವಾದುದು. ಊರುಗಳ ಸಂಸ್ಕೃತಿಗೆ ಪರ್ಯಾಯವಾದ ಹಟ್ಟಿ ಸಂಸ್ಕೃತಿಯನ್ನು ಪೋಷಿಸುತ್ತಾ ಯಾವ ಕಾರಣಕ್ಕೂ ಊರಿನ ಕಲಾಪಗಳೊಂದಿಗೆ ಸೇರದ ಇವರು ಊರಿನ ಜನರನ್ನು ಇಂದಿಗೂ 'ಮೈಲಿಗೆಯವರು' ಎಂದೇ ಗುರುತಿಸುತ್ತಾರೆ. ಕಾಡುಕುರುಬರು ಮೈಸೂರು ಮತ್ತು ಕೊಡಗು ಪ್ರದೇಶಗಳಲ್ಲಿ ಮಾತ್ರ ಕಂಡುಬರುವ ಒಂದು ಬುಡಕಟ್ಟು ಸಮೂಹ. ವಾಸ್ತವವಾಗಿ ಕಾಡುಕುರುಬರು, ಜೇನುಕುರುಬರು ಮತ್ತು ಮುಳ್ಳುಕುರುಬರು ಬಹು ಹಿಂದಿನಿಂದಲೂ ಕರ್ನಾಟಕದ ದಕ್ಷಿಣ ಭಾಗದ ಬೃಹತ್ ಅರಣ್ಯಗಳಲ್ಲಿ ಜೀವನ ಸಾಗಿಸುತ್ತಿರುವ ಬುಡಕಟ್ಟು ಜನರು. ಮೂಲತಃ ಬೇಟೆಗಾರರಾದ ಮ್ಯಾಸಬೇಡರು ಇಂದಿಗೂ ಕಾಡುಗಳಲ್ಲಿಯೇ ನೆಲೆಸಿದ್ದು ನಾಗರಿಕ ಜಗತ್ತಿನಿಂದ ಅತೀತವಾಗಿಯೇ ಉಳಿದಿದ್ದಾರೆ. ಮ್ಯಾಸಬೇಡರು ಕಾಡನ್ನೇ ಅವಲಂಬಿಸಿ ತಮ್ಮ ಬೇಟೆ ಮತ್ತು ಪಶುಸಂಗೋಪನಾ ವೃತ್ತಿಯನ್ನು ನಿರಂತರವಾಗಿ ನಡೆಸಿಕೊಂಡು ಬಂದವರು; ನಿಸರ್ಗದ ಜೊತೆ ಅವಿನಾಭಾವ ಸಂಬಂಧ ಇಟ್ಟುಕೊಂಡವರು. ಯರವರು ಕೊಡಗಿನ ಅರಣ್ಯಗಳಲ್ಲಿ ಕಾಣಸಿಗುವ ಒಂದು ಬುಡಕಟ್ಟು ಸಮೂಹ. ದಟ್ಟ

ಅರಣ್ಯವೇ ಇವರ ನೆಲೆ. ಆದಿಯಿಂದಲೂ ಆಹಾರ ಸಂಗ್ರಹಣೆ ಮತ್ತು ಬೇಟೆಯಿಂದ ಜೀವನಸಾಗಿಸುವ ಪ್ರವೃತ್ತಿಯವರು. ತುಮಕೂರು ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದ ಇಲ್ಲಿಗರು ಸೋಲಿಗರಂತೆ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ನಾಡಿಗೆ ಮಾರಾಟ ಮಾಡುವ ಪ್ರವೃತ್ತಿಯವರು. ಒಂದು ಕಾಲಕ್ಕೆ ಬೇಟೆಯಲ್ಲಿಯೂ ಇವರು ನಿಷ್ಣಾತರು. ಇವರ ಸಾಂಸ್ಕೃತಿಕ ಬದುಕು ಅಸಾಧಾರಣವಾದುದು. ಸತ್ತವರ ಸಮಾಧಿಗಳೇ ಇವರ ಆರಾಧನಾ ಸ್ಥಳ. ಹಿರಿಯರ ಪೂಜೆ ಮತ್ತು ಹಬ್ಬ ಇವರ ಆದ್ಯತೆಗಳಲ್ಲಿ ಮೊದಲನೆಯದು. ಮಾಟ ಮಂತ್ರ ಮೋಡಿಗಳಲ್ಲಿ ಇವರಿಗೆ ಅಚಲವಾದ ನಂಬಿಕೆ. ಉತ್ತರಕನ್ನಡದ ದಟ್ಟಾರಣ್ಯಗಳಲ್ಲಿ ಕಂಡುಬರುವ ಗೊಂಡರು ಮೂಲತಃ ಕುಮುರಿ ಬೇಸಾಯಗಾರರು. ಇವತ್ತು ಕೂಡ ಅವರು ಕೃಷಿಕರೇ ಆಗಿ ಮುಂದುವರೆದಿದ್ದಾರೆ. ಅಚ್ಚಕನ್ನಡ ಮಾತಾಡುವ ಜನ, ಇವರ ರಾಮಾಯಣ ಮೂಲರಾಮಾಯಣಕ್ಕಿಂತ ಭಿನ್ನವಾದುದು. ಸಂಪೂರ್ಣವಾಗಿ ಕಾಡಿನಲ್ಲಿಯೇ ಆರಂಭವಾಗಿ ಕಾಡಿನಲ್ಲೇ ಮುಗಿಯುವ ರಾಮಾಯಣ ಅದು. ಇಲ್ಲಿ ಬರುವ ಸೀತೆ ಮಹಾ ಸ್ವಾಭಿಮಾನಿ ತನಗೆ ಇಷ್ಟವಾದ ಜಿಂಕೆಯನ್ನು ತಂದುಕೊಡಲೇಬೇಕೆಂದು ಹಠ ಹಿಡಿಯುತ್ತಾಳೆ. ಅದು ಮಾಯಾ ಜಿಂಕೆ ಎಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಜಿಂಕೆಯ ಚರ್ಮದಿಂದ ತನ್ನ ಎದೆಗೆ ಒಪ್ಪುವ ಕುಪ್ಪಸ ಮಾಡಿಕೊಳ್ಳಬೇಕೆಂಬ ಸಹಜ ಆಸೆಯಿಂದ ಅವಳು ಜಿಂಕೆಯನ್ನು ಬಯಸುವುದು ಇಲ್ಲಿಯ ವಿಶೇಷ. ಆದರೆ ಗಂಡನಾದ ರಾಮ ಅವಳ ಆಸೆಯನ್ನು ನಿರಾಕರಿಸುತ್ತಾನೆ. ಆಗ ಅವಳು ಆ ಜಿಂಕೆಯನ್ನು ತಂದುಕೊಡದಿದ್ದರೆ 'ನೀನು ರಾಮನೂ ಅಲ್ಲ, ನನ್ನ ಗಂಡನೂ ಅಲ್ಲ; ಇನ್ನು ಮೇಲೆ ನನಗೂ ನಿನಗೂ ಸಂಬಂಧವೂ ಇಲ್ಲ' ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿ ಅವನನ್ನು ತೊರೆದು ಹೋಗಲು ಸಿದ್ಧಳಾಗುತ್ತಾಳೆ. ಬುಡಕಟ್ಟು ಸಮಾಜವೊಂದರ ಸ್ವಾಭಿಮಾನಿ ಹೆಣ್ಣಾಗಿ ಸೀತೆಯನ್ನು ಇಲ್ಲಿ ಚಿತ್ರಿಸುವ ಮೂಲಕ ಮಾತೃಪ್ರಧಾನ ವ್ಯವಸ್ಥೆಯ ಹೆಣ್ಣಿನ ಪಾರಮ್ಯವನ್ನು ಗೊಂಡರು ನಿರೂಪಿಸಿದ್ದಾರೆ.

ಹೀಗೆ ಬುಡಕಟ್ಟು ಸಂಸ್ಕೃತಿಗಳು ಅರಳಿರುವುದು ಸ್ವಾಭಾವಿಕ ಸನ್ನಿವೇಶದಲ್ಲಿ. ಅಲ್ಲಿ ಸೊಗಸು ಹೊರಹೊಮ್ಮುತ್ತಿರುತ್ತದೆ. ಹೊರಗಿನದನ್ನು ಎಷ್ಟು ಬೇಕೊ ಅಷ್ಟು ಪಡೆದು ವಿಕಾಸಗೊಳ್ಳುತ್ತಲೇ ತನ್ನ ಆಂತರಿಕ ಪ್ರವಾಹವನ್ನು ಹಾಗೇ ಜತನದಿಂದ ಕಾಪಾಡಿಕೊಳ್ಳುವ, ನಾಶವಾಗಲು ಒಪ್ಪದ ಅನನ್ಯತೆ ಅವರದು. ಆ ಅನನ್ಯತೆಯ ವಿವಿಧ ರೂಪವೇ ಬುಡಕಟ್ಟು ಸಂಸ್ಕೃತಿ ಎನ್ನಬಹುದು. ಇಂದು, ನಾನಾ ಐತಿಹಾಸಿಕ ಕಾರಣಗಳಿಗಾಗಿ ಈ ಬುಡಕಟ್ಟು ಸಮೂಹಗಳು ತಮ್ಮ ಮೂಲ ನೆಲೆಗಳನ್ನು ಬಿಟ್ಟು ಬರಬೇಕಾಗಿದೆ. ಭೂ ಸುಧಾರಣೆ, ಅರಣ್ಯ ಕಾಯಿದೆಗಳು ಅವರ ನೆಮ್ಮದಿಯ ಜೀವನವನ್ನು ಕಲಕಿವೆ.

ಇಷ್ಟಾದರೂ ಈ ಒಂದೊಂದೂ ಬುಡಕಟ್ಟು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿವೆ. ಈ ಒಂದೊಂದೂ ಬುಡಕಟ್ಟು ಚಿಕ್ಕಗಾತ್ರದ್ದೇ ಆಗಿರುವುದು ವಿಶೇಷ. ಬುಡಕಟ್ಟು ಸಮೂಹಗಳು ತಮ್ಮ ಸಾಮಾಜಿಕ ಐಕ್ಯತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿರುವುದೇ ಆ ಕಾರಣದಿಂದ. ಚಿಕ್ಕ ಸಮೂಹಗಳಾದ್ದರಿಂದಲೇ ಬುಡಕಟ್ಟಿನ ಸದಸ್ಯರ ನೈತಿಕ ಹಾಗೂ ಧಾರ್ಮಿಕ ನಂಬಿಕೆಗಳು

ಇಲ್ಲಿ ಸಾಕಷ್ಟು ಬಲವಾಗಿರುತ್ತವೆ. ಅತಿಮಾನುಷ ಶಕ್ತಿಗಳಲ್ಲಿ ಅವರಿಗಿರುವ ಶ್ರದ್ಧೆ, ನಿಸರ್ಗದಲ್ಲಿ ಅವರು ಗುರುತಿಸುವ ದೈವತ್ವ - ಇವೆಲ್ಲ ಅಂಶಗಳಿಗೂ ಅವರ ಸಮೂಹಗಳ ರಚನಾತ್ಮಕ ಅಂಶಗಳೇ ಮೂಲಭೂತ ಕಾರಣ. ಆಧುನಿಕ ಮೌಲ್ಯಗಳ ದೃಷ್ಟಿಯಿಂದ ನೋಡಿದಾಗ ಇಂಥ ಸಮೂಹಗಳು ಅತಿಮೌಢ್ಯ ಗುಂಪುಗಳಾಗಿ ತೋರಿಬರಬಹುದು. ಆದರೂ ಕಷ್ಟಪಟ್ಟು ದುಡಿದು ಸ್ವಾವಲಂಬಿ ಜೀವನಕ್ಕೆ ಹಾತೊರೆಯುವ ಅವರ ರೀತಿ ಅನುಕರಣೀಯ. ಅಚ್ಚರಿಯ ಸಂಗತಿಯೆಂದರೆ, ಬದಲಾದ ಸಂದರ್ಭದಲ್ಲೂ, ಇನ್ನೂ ಕೆಲವು ಬುಡಕಟ್ಟು ಜನರಿಗೂ ಹುಟ್ಟಾಳು ಪದ್ಧತಿಯ ಹಳೆಯ ನೆನಪು ಮಾಸಿಲ್ಲ. ಭೂಮಾಲೀಕರ ಜೀತದಾಳುಗಳಾಗಿಯೇ ಮುಂದುವರಿದಿದ್ದಾರೆ. ದಾಸ್ಯ ಪ್ರವೃತ್ತಿ ಅವರಿಗೆ ಮೈಉಂಡು ಹೋಗಿದೆ.

ಸಂತೆಯ ಮಾರುಕಟ್ಟೆಗಳಿಗೆ ತಮ್ಮ ಅಡವಿಗಳಿಂದ ಸಂಗ್ರಹಿಸಿ ತಂದ ಜೇನುತುಪ್ಪ, ಕಾಡಿನ ವಸ್ತುಗಳು, ತಾವು ಬೆಳೆದ ತರಕಾರಿ, ಹಲಸಿನ ಹಣ್ಣು ಮುಂತಾದುವನ್ನು ತಂದು ಮಾರುವ ಪ್ರವೃತ್ತಿಯಿರುವ ಬುಡಕಟ್ಟು ಜನರು ತಮ್ಮ ದಿನನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಅರಣ್ಯ ಜನ್ಯ ಭೌತಿಕ ವಸ್ತುಗಳನ್ನು ಹಣವಾಗಿ ಪರಿವರ್ತಿಸುವ ಕ್ರಿಯೆಗಳಲ್ಲಿ ಈ ಜನರ ಸಾಚಾ ಹಾಗೂ ಮುಗ್ಧ ವ್ಯವಹಾರ ಗೋಚರಕ್ಕೆ ಬರುತ್ತದೆ.

ಈ ನಡುವೆ ಆಧುನೀಕರಣದ ಗಾಳಿ ಬುಡಕಟ್ಟು ಜನರನ್ನು ನಿಧಾನವಾಗಿ ಪ್ರಭಾವಿಸುತ್ತಿದೆ. ತಮ್ಮ ಸುತ್ತಲಿನ ಪರಿಸರದಿಂದ ಪ್ರಭಾವಿತರಾಗಿ ಆಧುನಿಕ ಜೀವನ ವಿಧಾನವನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ. ಕುಟುಂಬ ಯೋಜನೆಯಂಥ ಯೋಜನೆಗಳು ಅವರ ಗಮನ ಸೆಳೆಯುತ್ತಿವೆ. ಬುಡಕಟ್ಟು ಹುಡುಗ-ಹುಡುಗಿಯರು ಥಳಕು ಬಳಕುಗಳಿಗೆ ಮನಸೋಲುತ್ತಿದ್ದಾರೆ. ವೇಷಭೂಷಣ, ಸಾಮಾಜಿಕ ನಡವಳಿಕೆ, ಮನೋರಂಜನೆಗಳನ್ನು ಅನುಕರಿಸುತ್ತಿದ್ದಾರೆ. ಕೃಷಿ ಸಂಬಂಧಿ ಚಟುವಟಿಕೆಗಳಲ್ಲೂ ಆಧುನೀಕರಣದ ಪ್ರಭಾವ ಕಾಣುತ್ತಿದೆ. ರಸ್ತೆ, ಅಂಗಡಿ, ಬಸ್ಸು, ರೇಡಿಯೊ, ಟಿ.ವಿ. ಮುಂತಾದುವು ಮಹತ್ತರ ಪಾತ್ರ ವಹಿಸಿವೆ. ಆಧುನಿಕ ಶಿಕ್ಷಣ ಪದ್ಧತಿ, ಅದರಿಂದ ದೊರಕಬಹುದಾದ ಉದ್ಯೋಗಾವಕಾಶಗಳು ಮತ್ತು ಅದು ನೀಡುವ ಮೌಲ್ಯವ್ಯವಸ್ಥೆ ಬಗೆಗೆ ಅಲ್ಪಸ್ವಲ್ಪ ತಿಳಿವಳಿಕೆ ಮೂಡುತ್ತಿದೆ.

ವಾಸ್ತವವಾಗಿ, ಬುಡಕಟ್ಟು ಜನರಿಗೆ ನಿಸರ್ಗವೇ ಸರ್ವಶಕ್ತದೇವತೆ. ಅವರ ನಂಬಿಕೆಗಳು ಕಾಡುಮೇಡುಗಳಲ್ಲಿ ಅವರಿಟ್ಟ ವಿಶ್ವಾಸದ ಕುರುಹುಗಳು. ಆಧುನೀಕರಣ ಪ್ರಕ್ರಿಯೆಯಿಂದಾಗಿ ಅವರ ಅನೇಕ ನಂಬಿಕೆಗಳನ್ನು ಅವರೇ ಪ್ರಶ್ನಿಸಲಾರಂಭಿಸಿದ್ದಾರೆ. ಇದು ಅವರ ಸಾಮಾಜಿಕ ಬದಲಾವಣೆಯ ಗತಿಯ ಸಂಕೇತ. ಬುಡಕಟ್ಟು ಸಮೂಹದ ಪ್ರತಿಯೊಂದು ಆಗುಹೋಗುಗಳಲ್ಲಿ ತಮ್ಮ ಹಿರಿಯರನ್ನು ನೆನೆಯುವ ಅವರಿಂದ ಮುಕ್ತ ಮಾರ್ಗದರ್ಶನ ಪಡೆಯುವ ಪರಿಪಾಠವಿದೆ. ಈ ಕ್ರಿಯೆ ಬುಡಕಟ್ಟು ಜೀವನದ ಸಮಗ್ರ ಅಭಿವ್ಯಕ್ತಿಯ ಪ್ರತೀಕ ಎನ್ನಬಹುದು.

ಬುಡಕಟ್ಟು ಜನರಲ್ಲಿ ಕಾಯಿಲೆ ಕಸಾಯಿಲೆಗಳು ಕಾಣಿಸಿಕೊಂಡಾಗ 'ದೇವರು ಕರೆಸುವ' ಆಚರಣೆ ಜರುಗಿಸುವುದು ಸಾಮಾನ್ಯ. ಈ ಆಚರಣೆಯ ಪರಿಣಾಮಗಳು ಅವರ ನಂಬಿಕೆಗಳನ್ನು ಆಧರಿಸಿರುತ್ತವೆ. ಈ ಆಚರಣೆ, ಗಿಡಮೂಲಿಕೆಗಳ ಬಳಕೆ ಹಾಗೂ ನಂಬಿಕೆಯಿಂದಾಗಿ ಹಲವಾರು ಬಾರಿ ಅವು ಪರಿಣಾಮಕಾರಕವಾಗಿವೆ. ಪ್ರಸ್ತುತದಲ್ಲಿ ಬುಡಕಟ್ಟು ಜನರನ್ನು ಸರ್ಕಾರವೇ ಒಕ್ಕಲೆಬ್ಬಿಸುತ್ತಿರುವುದರಿಂದ, ನೈಸರ್ಗಿಕ ಪರಿಸರದಿಂದ ಹೊರದೂಡಲ್ಪಟ್ಟಿರುವುದರಿಂದ ಅವರ ಸಮಗ್ರ ಜೀವನ ಶೈಲಿ ಬದಲಾವಣೆಗೆ ಗುರಿಯಾಗುತ್ತಿದೆ. ಪರಿಣಾಮವಾಗಿ ಅವರ ಆಹಾರ ಸೇವನಾ ಕ್ರಮ ತೀವ್ರ ಬದಲಾಗಿದ್ದು ದೈಹಿಕವಾಗಿ ಈ ಆಚರಣೆಗಳು, ಗಿಡಮೂಲಿಕೆಗಳು ನಿರೀಕ್ಷಿತ ಪರಿಣಾಮ ಉಂಟುಮಾಡುತ್ತಿಲ್ಲ. ಇದರೊಂದಿಗೆ ಬುಡಕಟ್ಟು ನೆಲೆಗಳಿರುವ ಕಡೆಗಳಲ್ಲಿ ಬೇರೂರುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಜನರ ಆರೋಗ್ಯದ ಬಗೆಗೆ ಕಾಳಜಿ ತೋರುತ್ತಿವೆ. ಸಾವಕಾಶವಾಗಿ ಅವರು ಆಧುನಿಕ ಔಷಧೋಪಚಾರಗಳಿಗೆ ಒಗ್ಗುವಂತೆ ಮುತುವರ್ಜಿ ವಹಿಸಲಾಗುತ್ತಿದೆ. ಒಂದು ಸಣ್ಣ ತಲೆಶೂಲೆಗೂ ಆಚರಣೆಯ ಮೊರೆ ಹೋಗುತ್ತಿದ್ದ ಬುಡಕಟ್ಟು ಜನರು ಈಗ ಚುಚ್ಚುಮದ್ದು ಹಾಕಿಸಿಕೊಳ್ಳುತ್ತಿರುವುದು ಅವರ ಬದಲಾದ ಜೀವನಕ್ರಮಕ್ಕೆ ಕನ್ನಡಿ ಹಿಡಿಯುತ್ತದೆ.

ಆದರೂ ಬುಡಕಟ್ಟು ಜನರು ಮದ್ಯ, ಮಾಂಸ, ಬಂಗಿ ಹಾಗೂ ಮೈಥುನಗಳಂಥ ಚೈತನ್ಯದಾಯಕ ಅಂಶಗಳನ್ನು ಎಂದೂ ತ್ಯಜಿಸುವವರಲ್ಲ. ಅಂಥ ನಿರ್ಬಂಧಗಳಿಂದ ಸಿಡಿದು ಹೊರಬಂದು ಮತ್ತೆ ತಮ್ಮ ಪ್ರೀತಿಯ ಕಾಡುಗಳನ್ನೇ ಆಶ್ರಯಿಸುವ ತವಕದಲ್ಲಿದ್ದಾರೆ. ತಮ್ಮ ಬದುಕು ಮೊದಲಿನಂತೆ ಹಸನಾಗಬೇಕಾದರೆ ಕಾಡಿಗೇ ಮರಳಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೆ. ಒಂದೆಡೆ ಸರ್ಕಾರ ಅದಕ್ಕೆ ಪ್ರಬಲ ತಡೆ ಒಡ್ಡುತ್ತಿದೆ. ಇನ್ನೊಂದೆಡೆ, ಸ್ವಯಂ ಸೇವಾ ಸಂಸ್ಥೆಗಳು ಬುಡಕಟ್ಟು ಜನರನ್ನು ಶಾಖಾಹಾರಿಗಳನ್ನಾಗಿ ಮಾಡಲು ಹೋಗಿ ಮಾಂಸಾಹಾರದ ಬದಲು ಬೇರೆ ಏನನ್ನೂ ಅವರಿಗೆ ಕೊಡಲು ಆಗುತ್ತಿಲ್ಲ. ಪಾನ ನಿರೋಧವನ್ನು ಜಾರಿಗೆ ತಂದು ಅವರಿಗೆ ಮದುವೆ ಮುಂಜಿಗಳಲ್ಲಿ ಸಂಭ್ರಮಿಸುವ ಬೇರೊಂದನ್ನು ಒದಗಿಸಲಿಲ್ಲ. ಸರಳ ಉಡುಗೆ ತೊಡುಗೆ ಸರಿಯಲ್ಲವೆಂದು ಹೇಳಿ ಅವರ ಮೇಲೆ ಹೊಸ ಆರ್ಥಿಕ ಹೊರೆಯನ್ನು ಹೊರೆಸಲಾಗಿದೆ.

ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೂ ಪರಿಣಾಮಕಾರಿಯಾಗಿಲ್ಲ. ಗಿರಿಜನ ಆಶ್ರಮಶಾಲೆಗಳು, ಗಿರಿಜನ ವಿದ್ಯಾರ್ಥಿನಿಲಯಗಳು, ಮಹಿಳಾ ಕಲ್ಯಾಣ ಕೇಂದ್ರಗಳು - ಈ ಯಾವುವೂ ಅವರ ಮೂಲಭೂತ ಅವಶ್ಯಕತೆಗಳನ್ನು ಸಮಗ್ರವಾಗಿ ಪೂರೈಸಲು ಸಾಧ್ಯವಾಗಿಲ್ಲ; ಅವರಿಗೆ ಆರ್ಥಿಕ ಸಬಲತೆಯನ್ನು ತಂದುಕೊಡಲು ಸಮರ್ಥವಾಗಿಲ್ಲ.

ಸರ್ಕಾರದ ಯೋಜನೆಗಳು ಕ್ರಿಯಾಶೀಲವಾಗಿರುವುದಿಲ್ಲ ಎನ್ನಲು ವಸತಿ ಹೀನರಿಗೆ ಕಟ್ಟಿಕೊಟ್ಟಿರುವ ಮನೆಗಳೇ ಸಾಕ್ಷಿ. ಬುಡಕಟ್ಟು ಜನರಿಗೆ ಮನೆಗಳನ್ನು ನಿರ್ಮಿಸುವಾಗ ಕಡೇಪಕ್ಷ

ಅವರ ಹಾಡಿ ಗುಡಿಸಲುಗಳ ವಿನ್ಯಾಸದಲ್ಲಿ ಕಟ್ಟಿಕೊಡಬಹುದಾಗಿತ್ತು. ಹಸಲರಿಗಾಗಿ ಕಟ್ಟಿರುವ ಮನೆಗಳು, ಕಟ್ಟೆಗೌಳಿಗರಿಗಾಗಿ ಕಟ್ಟಿರುವ ಮನೆಗಳು ಇನ್ನೂ ಅನಾಥವಾಗಿಯೇ ಬಿದ್ದಿವೆ!

ಬುಡಕಟ್ಟು ಜನರ ಬದುಕು ಇಂದು ಸಂಕ್ರಮಣಾವಸ್ಥೆಯಲ್ಲಿದೆ. ಕಾಡಿನ ಮಧ್ಯೆ ಅದರ ಆಸರೆಯಿಂದ ಬದುಕುತ್ತಿದ್ದ ಇವರ ಅಸ್ತಿತ್ವಕ್ಕೆ ಸಂಚಕಾರ ಬಂದಿದೆ. ಕಾಡಿನ ನಾಶ ಅವರನ್ನು ತಲ್ಲಣಗೊಳಿಸಿದೆ. ಕಾಡನ್ನೇ ನಂಬಿ ಅಲೆಮಾರಿಗಳಾಗಿ ಬದುಕು ನಡೆಸುತ್ತಿದ್ದ ದಟ್ಟಡವಿಗಳು ಬಯಲಾಗುತ್ತಿವೆ. ಕಾಡಿನ ಮಧ್ಯೆ ಹುಲುಸಾಗಿ ಬೆಳೆಯುತ್ತಿದ್ದ ಮೇವು ವಿರಳವಾಗುತ್ತಾ ತಮ್ಮ ಆರ್ಥಿಕ ಬೆನ್ನೆಲುಬಾಗಿದ್ದ ಪಶುಸಂಗೋಪನೆ ಕುತ್ತಿನಲ್ಲಿದೆ. ಎಷ್ಟೋ ಕುಟುಂಬಗಳು ಪಶುಸಂಗೋಪನೆ ಮಾಡಲಾಗದೆ ಹೊಟ್ಟೆಪಾಡಿಗಾಗಿ ನಾಗರಿಕ ಸಂಪರ್ಕದ ಅನಿವಾರ್ಯತೆಯಲ್ಲಿ ಬದುಕಬೇಕಾಗಿದೆ. ಒಟ್ಟಿನಲ್ಲಿ ಬುಡಕಟ್ಟು ಜನರ ಬದುಕು ಶೋಚನೀಯವಾಗುತ್ತ ಸಾಗಿದೆ. ನಾಗರಿಕ ಸಂಪರ್ಕದ ಹೊಡೆತದಿಂದ ಇವರ ಕುಟುಂಬಗಳು ತತ್ತರಿಸುತ್ತಿವೆ. ಕುಲ, ಬಳಿ, ಸಂಪ್ರದಾಯದ ಬಗ್ಗೆ ಅಚಲ ವಿಶ್ವಾಸವಿಟ್ಟುಕೊಂಡಿದ್ದ ಬುಡಕಟ್ಟು ಜನರ ಹುಡುಗರು ನೌಕರಿ ಆಮಿಷಗಳಿಗೆ ಬಲಿಯಾಗಿ ತಮ್ಮ ಸಂಪ್ರದಾಯಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿ ನಲುಗುತ್ತಿದ್ದಾರೆ.

ಅತಂತ್ರದ ಬದುಕನ್ನು ಬದುಕುತ್ತಿರುವ ಬುಡಕಟ್ಟು ಜನರ ಆರ್ಥಿಕ ಜೀವನ ತೀರಾ ಕೆಳಮಟ್ಟದಲ್ಲಿದ್ದು ಜೀವನ ಸಾಗಿಸುವುದೇ ದುರ್ಭರವಾಗುವಂತಹ ಸನ್ನಿವೇಶ ನಿರ್ಮಾಣವಾಗಿದೆ. ಈ ಜನರು ಉತ್ಪಾದಿಸುವ ಕಾಡಿನ ಹಾಗೂ ಹಾಲಿನ ಉತ್ಪನ್ನಗಳ ಮೇಲೆ ಮಧ್ಯವರ್ತಿಗಳ ಹಸ್ತಕ್ಷೇಪ ತಪ್ಪಿಸಲು ಹಾಲು ಒಕ್ಕೂಟಗಳ ಸಹಕಾರಿ ಸಂಘಗಳು ಸ್ಥಾಪನೆಯಾಗಿವೆ. ಆದರೆ ಪಶುಗಳಿಗೆ ಸರಿಯಾದ ನೀರು-ಮೇವು ಹಾಗೂ ವೈದ್ಯಕೀಯ ಸೌಲಭ್ಯದ ಕೊರತೆಯಿಂದಾಗಿ ಪಶುಸಂಗೋಪನೆ ತನ್ನ ಆಕರ್ಷಣೆ ಕಳೆದುಕೊಂಡಿದೆ. ಶ್ರೀಮಂತರ ಸಾಲಶೂಲಗಳಿಗೆ ದಿನೇ ದಿನೇ ಬಲಿಯಾಗುತ್ತಿರುವ ಇವರ ಜೀವನದಲ್ಲಿ ನೆಮ್ಮದಿ ದೂರವಾಗುತ್ತಿದೆ. ಇವರ ನೆಲೆಗಳು ಕೊಳಚೆಯ ಕೊಂಪೆಗಳಾಗುತ್ತ ಶುದ್ಧವಾದ ನೀರು ಹಾಗೂ ಉಚಿತ ಔಷಧೋಪಚಾರ ದೊರೆಯದೆ ತತ್ತರಿಸಿ ಹೋಗಿವೆ. ನೈರ್ಮಲ್ಯೀಕರಣದ ಕೊರತೆ ಎದ್ದು ಕಾಣುತ್ತದೆ. ಕಾಡನ್ನೇ ನಂಬಿ ಬದುಕುತ್ತಿದ್ದವರ ಆರ್ಥಿಕ ಸ್ಥಿತಿಗತಿಗಳಲ್ಲಿ ದೊಡ್ಡ ಬಿರುಗಾಳಿ ಎದ್ದಿದೆ. ಇದು ಕೇವಲ ಒಂದು ಬುಡಕಟ್ಟಿನ ಸಮಸ್ಯೆಯಲ್ಲ. ಕಾಡನ್ನು ನಂಬಿದ ಎಲ್ಲರ ಸಮಸ್ಯೆಯೂ ಇದೇ ಆಗಿದೆ.

ಬುಡಕಟ್ಟು ಜನರನ್ನು ಕಾಡುತ್ತಿರುವ ಹಲವು ಸಮಸ್ಯೆಗಳ ಪೈಕಿ ಪ್ರತ್ಯೇಕತೆಯೇ ಮುಖ್ಯ ಸಮಸ್ಯೆ. ಇತರ ಸಮುದಾಯಗಳೊಡನೆ ಮುಕ್ತವಾಗಿ ಬೆರೆಯಲಾಗದೆ ಸಮಸ್ಯೆಗಳನ್ನು ಎದುರಿಸುತ್ತಿವೆ, ಬುಡಕಟ್ಟು ಸಮೂಹಗಳು. ಕುಲ, ಬಳಿ, ಆಚಾರ, ಸಂಪ್ರದಾಯ, ವ್ಯವಹಾರ-ಎಲ್ಲದರಲ್ಲೂ ಪ್ರತ್ಯೇಕತೆಯನ್ನು ಹೊಂದಿ ಬದುಕುತ್ತಿರುವ ಬುಡಕಟ್ಟು ಜನ ಇತರರ ಹೀಯಾಳಿಕೆಗೆ ಗುರಿಯಾಗಿ ಕೀಳರಿಮೆಯಿಂದ ಬದುಕಬೇಕಾದ ಸನ್ನಿವೇಶ ಎದುರಾಗಿದೆ. ಕಾಡಿನ

ಉತ್ಪನ್ನಗಳು ಹಾಗೂ ಪಶುಸಂಗೋಪನೆಯಿಂದ ದೂರವಾಗುತ್ತಿರುವ ಇವರಿಗೆ ತಮ್ಮ ಒಡೆತನದ ಕಾಡು, ಭೂಮಿ ಇಲ್ಲ. ಅರಣ್ಯ ಇಲಾಖೆಯವರ ಕಿರುಕುಳಗಳ ಮಧ್ಯೆ ಜೀವನ ಸಾಗಿಸಬೇಕಾದ ಅನಿವಾರ್ಯತೆ ಇರುವ ಇವರು ತಮ್ಮ ಅಸ್ತಿತ್ವಕ್ಕಾಗಿಯೇ ಹೋರಾಡಬೇಕಾದ ದುಸ್ಥಿತಿಗೆ ತಲುಪಿದ್ದಾರೆ. ಒಳಬಾಂಧವ್ಯ ವಿವಾಹ ಪದ್ಧತಿಯನ್ನು ರೂಢಿಸಿಕೊಂಡಿರುವ ಕಾರಣಕ್ಕಾಗಿ ಹೊಸ ಜೀವನ ವಿಧಾನಕ್ಕೆ ಒಗ್ಗದವರಾಗಿದ್ದಾರೆ. ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುತ್ತಲೇ ಇವರು ಹೊಸ ಬದುಕನ್ನು ಎದುರುಗೊಳ್ಳಬೇಕಾಗಿದೆ.

ಬುಡಕಟ್ಟು ಜನರ ಬದುಕು ಇಷ್ಟು ಶೋಚನೀಯವಾಗಲು ನಿಜವಾದ ಕಾರಣ ಅನಕ್ಷರತೆಯೇ. ವಾಸ್ತವವಾಗಿ, ಶಿಕ್ಷಣವು ಈ ಜನರ ಸರ್ವತೋಮುಖ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವಹಿಸಬಲ್ಲದು. ಶೇಕಡಾ ಐದು ಮಂದಿ ಮಾತ್ರ ಅಕ್ಷರಾಭ್ಯಾಸ ಮಾಡಿದ್ದಾರೆಂದರೆ ಇವರ ಸಾಕ್ಷರತೆಯ ಪ್ರಮಾಣ ಅರಿವಾಗುತ್ತದೆ. ಕಾಲದ ಬದಲಾವಣೆಯೊಂದಿಗೆ ತಮ್ಮ ಬದುಕಿನ ಬದಲಾವಣೆಗೆ ಇವರು ಪ್ರಯತ್ನಿಸಲೇ ಇಲ್ಲ ಎಂಬುದು ಸ್ಪಷ್ಟ. ಸದಾ ಅನ್ನಕ್ಕಾಗಿ ಹೋರಾಟ ನಡೆಸಬೇಕಾಗಿ ಬಂದದ್ದರಿಂದ ಅಕ್ಷರದತ್ತ ಅವರು ಗಮನಹರಿಸಲಾಗಲಿಲ್ಲ ಎಂಬುದು ಸತ್ಯ. ಅಂತೆಯೇ ಸಾಮಾಜಿಕವಾಗಿ ಯಾವುದೇ ಸ್ಥಾನಮಾನ ಪಡೆದುಕೊಳ್ಳುವುದು ಸಾಧ್ಯವಾಗಲಿಲ್ಲ. ಅವರದೇ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅವರಿಗೆ ಉಚಿತ ಶಿಕ್ಷಣ ನೀಡುವಂತಾಗಬೇಕು. ಸುಧಾರಣೆ ಆದೀತು.

ಬುಡಕಟ್ಟು ಜನರಲ್ಲಿ ಜೀವನೋಪಾಯಕ್ಕೆ ಕಾಡೇ ಆಧಾರವಾಗಿರುವುದರಿಂದ ಆರ್ಥಿಕ ಸ್ವಾವಲಂಬನೆಯನ್ನು ಪಡೆದ ಕುಟುಂಬಗಳು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಸರ್ಕಾರ ಈ ಜನರ ಕಲ್ಯಾಣಕ್ಕಾಗಿ ರೂಪಿಸಿದ ಶಾಸನಗಳಾಗಲಿ, ಯೋಜನೆಗಳಾಗಲಿ ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳ್ಳದಿರುವುದೇ ಈ ದುಸ್ಥಿತಿಗೆ ಕಾರಣ. ಇಂದಿಗೂ ಬಹುತೇಕ ಬುಡಕಟ್ಟು ಸಮೂಹಗಳು ಅಲೆಮಾರಿ ಬದುಕನ್ನೇ ಮುಂದುವರಿಸಿರುವುದರಿಂದ ನಿಲ್ಲಲು ನೆಲೆಯಿಲ್ಲದೆ ತಲೆಯ ಮೇಲೆ ಸೂರು ಇಲ್ಲದೆ ನಿರಾಶ್ರಿತರಾಗಿದ್ದಾರೆ. ಒಪ್ಪೊತ್ತಿಗಿದ್ದರೆ ಒಲೆ ಕಿತ್ತು ಹಾಕುತ್ತಾ 'ಇದ್ದರೆ ಈ ಊರು ಎದ್ದರೆ ಮುಂದಿನ ಊರು' ಎನ್ನುವಂತಹ ಸ್ಥಿತಿಯಲ್ಲಿದ್ದಾರೆ.

ಕಾಡುಗಳ ನಾಶದೊಂದಿಗೆ ಕಾಂಕ್ರೀಟ್ ಕಟ್ಟಡಗಳು ದಿನೆ ದಿನೇ ಬೆಳೆಯುತ್ತಿವೆ. ಇದರಿಂದಾಗಿ ಈ ಜನರ ಮೂಲಭೂತವಾದ ಜೀವನ ವಿಧಾನವೇ ಪಲ್ಲಟಗೊಳ್ಳುತ್ತಾ ಬಂದಿದೆ. ಪರಂಪರಾಗತ ಜೀವನ ವಿಧಾನವನ್ನು ಸಂಪೂರ್ಣವಾಗಿ ಕೈಬಿಡದ ಮತ್ತು ಹೊಸತರ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗದ ಸಂದಿಗ್ಧದಲ್ಲಿ ಇವರು ಬದುಕಬೇಕಾಗಿದೆ.

ನಾಗರಿಕ ಜನ, ಈ ಎಲ್ಲ ಕಾರಣಗಳಿಗಾಗಿ, ಬುಡಕಟ್ಟು ಜನರನ್ನು ಅಸಡ್ಡೆಯಿಂದ-ಕೀಳಾಗಿ ಕಾಣದೆ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳಲು ಅವರಿಗೆ ಅವಕಾಶ ಮಾಡಿಕೊಡಬೇಕು; ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸಬೇಕು.

ಪರಾಮರ್ಶನ ಗ್ರಂಥಗಳು

a Census of India, Series - 9, Karnataka Part XI

b ಕಾಳೇಗೌಡ ನಾಗವಾರ ಮತ್ತು ಹುಚ್ಚಪ್ಪ ಮಾಸ್ತರ್ (ಸಂ.) ೨೦೦೦, ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

c ಬೋರಲಿಂಗಯ್ಯ ಹಿ. ಚಿ. ೧೯೯೩ - ಬೆಂಕಿ ಮತ್ತು ವಿದ್ಯುತ್ ಯುಗಗಳ ನಡುವೆ - ಇದರಲ್ಲಿ ಪ್ರಕಟಿತ, ಸಿರಿಗನ್ನಡ, ವಸಂತ ಸಂಚಿಕೆ, ಕನ್ನಡ ವಿ.ವಿ., ಹಂಪಿ.

d ಬೋರಲಿಂಗಯ್ಯ ಹಿ. ಚಿ. (ಸಂ.) ೧೯೯೯, ಗೊಂಡರ ರಾಮಾಯಣ, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

e ಶಂಕರನಾರಾಯಣ ತಿ. ನಂ. ೧೯೮೨, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು.

ಆನ್ವಯಿಕ ಭಾಷಾವಿಜ್ಞಾನದ ಇತ್ತೀಚಿನ ಪರಿಕಲ್ಪನೆಗಳು

ಡಾ. ಆರ್. ರಾಮಕೃಷ್ಣ

ಪ್ರಪಂಚದಲ್ಲಿ ಹಲವಾರು ಜೀವಿಗಳಿವೆ. ಅವು ನಡೆದಾಡುತ್ತವೆ. ಧ್ವನಿ ಹೊರಡಿಸುತ್ತವೆ. ಆದರೆ ಮಾನವ ಜೀವಿ ಉಳಿದೆಲ್ಲ ಪ್ರಾಣಿಗಳಿಗಿಂತ ವಿಭಿನ್ನನಾಗಿದ್ದಾನೆ. ಬೇರೆ ಪ್ರಾಣಿಗಳು ಕೂಗಬಹುದು, ಬುಸುಗುಟ್ಟಬಹುದು, ತಮ್ಮ ನೋವನ್ನೂ ನಲಿವನ್ನೂ ವ್ಯಕ್ತಪಡಿಸಬಹುದು. ಆದರೂ ಮಾನವನಂತೆ ಸ್ಪಷ್ಟವಾಗಿ ಪ್ರಾಣಿಗಳು ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸಲಾರವು. ಮನುಷ್ಯ ಮಾತ್ರ ತನ್ನ ಭಾವನೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಬಲ್ಲ ಸಾಮರ್ಥ್ಯ ಹೊಂದಿದ್ದಾನೆ. ಇತರರ ಭಾವನೆಗಳನ್ನು ಅರಿಯಬಲ್ಲ ಶಕ್ತಿ ಪಡೆದಿದ್ದಾನೆ. ಇದಕ್ಕೆ ಪ್ರಮುಖ ಸಾಧನವೆಂದರೆ ಭಾಷೆ.

ಭಾಷೆಯೆಂಬುದು ಯಾದೃಚ್ಛಿಕ ಉಚ್ಚರಿತ ಧ್ವನಿಸಂಕೇತಗಳ ಒಂದು ವ್ಯವಸ್ಥೆ. ಮನದಲ್ಲಿ ಮೂಡಿಬಂದ ಭಾವನೆಗಳಿಗೆ ಮೂರ್ತಸ್ವರೂಪವನ್ನು ನೀಡಿ ಅದನ್ನು ಪರಸ್ಪರ ಒಪ್ಪಿಕೊಂಡುದೇ ಭಾಷೆ. ಬಾಯಿಯಿಂದ ಮೂಡಿಬಂದ ಶಬ್ದಗಳು, ಹೇಳುವವನ ಭಾವವನ್ನು ಅಭಿವ್ಯಕ್ತಿಸಲು, ಅದನ್ನು ಕೇಳುವವನು ಅದೇ ರೀತಿಯಲ್ಲಿ ತಿಳಿದುಕೊಳ್ಳಲು ರೂಪಿಸಿಕೊಂಡ ಸಂಕೇತಗಳ ಒಂದು ವ್ಯವಸ್ಥೆಯೇ ಭಾಷೆ. ಭಾಷೆಯಿರುವುದು ಅಭಿಪ್ರಾಯ ಸಂವಹನಕ್ಕೆ, ಸಾಮಾಜಿಕ ಸಂಪರ್ಕಕ್ಕೆ. ನಾವು ಮತ್ತೊಬ್ಬರೊಡನೆ ಅಭಿಪ್ರಾಯ ಸಂವಹನ ಮಾಡಲು ಮಾತ್ರವಲ್ಲ, ಆ ಇನ್ನೊಬ್ಬರ ಅಭಿಪ್ರಾಯ ನಮಗೆ ಸಂವಹನಗೊಳ್ಳಲೂ ಭಾಷೆ ತೀರಾ ಅವಶ್ಯಕವಾದುದು. ಮಾಹಿತಿಗಳನ್ನು ಪಡೆಯಲು, ಸುದ್ದಿಗಳನ್ನು ರವಾನಿಸಲು, ಕುಶಲೋಪರಿ ವಿಚಾರಿಸಲು, ದೈನಂದಿನ ಸರಳವಾದ ವ್ಯವಹಾರಗಳನ್ನು ನಿರ್ವಹಿಸಲು ಭಾಷೆಯನ್ನು ಬಳಸುತ್ತೇವೆ. ಇಂಥ ಕಡೆಗಳಲ್ಲಿ ಭಾಷೆ 'ಲೋಕೋಪಯೋಗಿ' ಎನ್ನಬಹುದು. ಇಲ್ಲಿ ಭಾಷೆಗೆ ವಾಚ್ಯಾರ್ಥ ಪ್ರತೀತಿಯೇ ಪ್ರಮುಖವಾಗಿರುತ್ತದೆ. ಓದಿದವರಿಗೆ ಕೇಳಿದವರಿಗೆ ನಿರ್ದಿಷ್ಟ ವಿಚಾರವನ್ನು ಅರುಹುವ ಗುರಿ ಭಾಷೆಗೆ ಇರುತ್ತದೆ.

ಭಾಷೆ ಭಾವೋಪಯೋಗಿಯಾದಾಗ, ಭಾಷೆಯನ್ನಾಡುವವನ ಮನಸ್ಥಿತಿಯನ್ನು ಸೂಚಿಸುತ್ತದೆ. ಕೆಲವೊಮ್ಮೆ ಕೇಳುವವರಲ್ಲೂ ಭಾವೋದ್ದೀಪನತೆ ಕಾರಣವಾಗುವುದು ಸಾಧ್ಯ. ಇಂಥ ಕಡೆ, ಅಭಿಪ್ರಾಯ ಸಂವಹನದ ಬದಲು ಭಾವಸಂವಹನ ನಡೆದಿರುತ್ತದೆ. ಭಾವೋಪಯೋಗಿ ಭಾಷಾರೂಪವು ಅಯ್ಯೋ, ಛೇ, ಥೂ, ಥತ್ ಮೊದಲಾದ ರೂಪಗಳಲ್ಲಿ ಗೋಚರಿಸಬಹುದು. ಮಾತಿನ ನಡುವೆ ಕಾಣಿಸಿಕೊಳ್ಳುವ ಊಂ, ಹಾಂ ಮೊದಲಾದ

ಧ್ವನಿಗಳಾಗಿರಬಹುದು. ಮಾತನಾಡುವ ವ್ಯಕ್ತಿಯ ಭಾವಸ್ಥಿತಿಯನ್ನು ಸೂಚಿಸುವ ಧ್ವನಿಯ ಏರಿಳಿತದ ರೂಪದಲ್ಲಿ ಕೂಡ ಅಭಿವ್ಯಕ್ತಗೊಳ್ಳಬಹುದು.

ಭಾಷೆಯ ಬಾಹ್ಯ ಮತ್ತು ಆಂತರಿಕ ವಿಚಾರಗಳ ವೈಜ್ಞಾನಿಕ ಅಧ್ಯಯನವನ್ನೇ 'ಭಾಷಾವಿಜ್ಞಾನ' ಎನ್ನುವರು. ಭಾಷಾವಿಜ್ಞಾನದ ಪ್ರಮುಖ ವರ್ಗಗಳೆಂದರೆ : ೧ ಸಾಮಾನ್ಯ ಭಾಷಾವಿಜ್ಞಾನ, ೨ ಅನ್ವಯಿಕ ಭಾಷಾವಿಜ್ಞಾನ. ವಿವರಣಾತ್ಮಕ (ವರ್ಣನಾತ್ಮಕ), ಐತಿಹಾಸಿಕ ಮತ್ತು ತೌಲನಿಕ ಭಾಷಾವಿಜ್ಞಾನ ಶಾಖೆಗಳು ಸಾಮಾನ್ಯ ಭಾಷಾವಿಜ್ಞಾನ ವರ್ಗಕ್ಕೆ ಸೇರಿದರೆ, ಮನೋಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ, ಜೈವಿಕ ಭಾಷಾವಿಜ್ಞಾನ, ನರವ್ಯೂಹ ಭಾಷಾವಿಜ್ಞಾನ, ವೈದ್ಯಶ್ಯಾತ್ಮಕ ಭಾಷಾವಿಜ್ಞಾನ, ಭಾಷಾಬೋಧನೆ, ಭಾಷಾಂತರ ಶೈಲಿವಿಜ್ಞಾನ, ಜನಪದ ಭಾಷಾವಿಜ್ಞಾನ, ಗಣಕಭಾಷಾವಿಜ್ಞಾನ ಮೊದಲಾದ ಶಾಖೆಗಳು ಅನ್ವಯಿಕ ಭಾಷಾವಿಜ್ಞಾನ ವರ್ಗಕ್ಕೆ ಸೇರಿವೆ.

ಭಾಷಾವಿಜ್ಞಾನವನ್ನು ಕುರಿತ ವಿಚಾರ ಸೈದ್ಧಾಂತಿಕವಾಗಿರಲಿ ಅಥವಾ ಅನ್ವಯಿಕವಾಗಿರಲಿ, ಭಾಷೆಯ ಧ್ವನಿ, ಪದ, ವಾಕ್ಯ ಮತ್ತು ಅರ್ಥ ಎಂಬ ರಚನಾಂಶಗಳನ್ನು ಮರೆಯುವಂತಿಲ್ಲ. ವಿವರಣಾತ್ಮಕ ಭಾಷಾವಿಜ್ಞಾನದ ಮೂಲಘಟಕಗಳಾದ ಇವು ಯಾವುದೇ, ನೂತನ ಪ್ರವೃತ್ತಿಯಲ್ಲಿ ತಮ್ಮ ಅಸ್ತಿತ್ವದ ಅನಿವಾರ್ಯತೆಯನ್ನು ಸಂಶೋಧಕನಿಗೆ ಮನಗಾಣಿಸುತ್ತವೆ. ಭಾಷೆಗಳು ಐತಿಹಾಸಿಕವಾಗಿ ಬೆಳೆದುಬಂದ ವಿಧಾನವನ್ನು ವಿವೇಚಿಸುವುದು ಐತಿಹಾಸಿಕ ಭಾಷಾವಿಜ್ಞಾನ. ಅಂತೆಯೇ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳ ರಚನಾತ್ಮಕ ಅಂಶಗಳನ್ನು ತೌಲನಿಕವಾಗಿ ವಿವೇಚಿಸಬಹುದಾದುದನ್ನೇ ತೌಲನಿಕ ಭಾಷಾವಿಜ್ಞಾನ ಎನ್ನುವರು.

ಅನ್ವಯಿಕ ಭಾಷಾವಿಜ್ಞಾನ ವಿಭಾಗವು ಭಾಷಾವಿಜ್ಞಾನ ವಿಷಯದಲ್ಲಿ ಆಸಕ್ತಿಯುಳ್ಳ ಯಾವುದೇ ವ್ಯಕ್ತಿಯನ್ನಾದರೂ ಬೆರಗುಗೊಳಿಸುವಷ್ಟರಮಟ್ಟಿಗೆ ಬೆಳೆದುಬಂದಿದೆ.

ಈ ವಿಭಾಗಕ್ಕೆ ಸೇರಿರುವ ಕೆಲವು ಶಾಖೆಗಳನ್ನು ಇಲ್ಲಿ ಪರಿಭಾವಿಸಬಹುದು:

೧ ಮನೋಭಾಷಾವಿಜ್ಞಾನ **(Psycholinguistics)**

ವ್ಯಕ್ತಿಯ ವಿವಿಧ ಮಾನಸಿಕ ವರ್ತನೆಗಳು ಅಥವಾ ಚಟುವಟಿಕೆಗಳು ಅವನಾಡುವ ಭಾಷೆಯ ಮುಖೇಣ ವ್ಯಕ್ತಗೊಳ್ಳುತ್ತದೆ. ತನ್ನ ಸುತ್ತಮುತ್ತಲಿನ ಹಿರಿಯರಾಡುವ ಮಾತುಗಳನ್ನು ಆಲಿಸಿ, ಮಕ್ಕಳು ಭಾಷೆಯನ್ನು ಹೇಗೆ ಗ್ರಹಿಸುತ್ತಾರೆ, ಕೇಳಿದ ಹಲವಾರು ವಾಕ್ಯಗಳ ಆಧಾರದಿಂದ, ಆ ಭಾಷೆಗೆ ಸಂಬಂಧಿಸಿದ ವ್ಯಾಕರಣವನ್ನು ಹೇಗೆ ರಚಿಸಿಕೊಳ್ಳುತ್ತಾರೆ, ಹೀಗೆ ರೂಪಿಸಿಕೊಂಡ ಭಾಷೆಯ ಮೇಲಣ ತಮ್ಮ ಸಾಮರ್ಥ್ಯವನ್ನು, ತಾವಾಡುವ ಮಾತುಗಳಿಂದ ಯಾವ ಬಗೆಯಲ್ಲಿ ಅಭಿವ್ಯಕ್ತಿಸುತ್ತಾರೆ ಮೊದಲಾದ ವಿಚಾರಗಳು ಮನೋಭಾಷಾವಿಜ್ಞಾನದ ಅಧ್ಯಯನ ವಸ್ತುಗಳಾಗಿವೆ. ಭಾಷೆಯನ್ನು ಕಲಿಯಲು ಬೇಕಾದ ಧ್ವನ್ಯಂಗಗಳ

ವೈಕಲ್ಯವಿಲ್ಲದಿರುವಾಗ, ತಾಯ್ನುಡಿಯನ್ನು ಕಲಿತುಕೊಳ್ಳಲಾರದ ಮಕ್ಕಳೇ ಇಲ್ಲವೆನ್ನಬಹುದು. ಮಗುವಿಗೆ ಯಾವುದೇ ಭಾಷೆಯನ್ನಾದರೂ ಕಲಿಯುವ ಸಾಮರ್ಥ್ಯ ಹುಟ್ಟಿನಿಂದಲೇ ಬರುತ್ತದೆಂದೂ ಯಾವ ಭಾಷೆಯನ್ನು ಮಾತೃಭಾಷೆಯನ್ನಾಗಿ ಕಲಿಯುತ್ತದೆಂಬುದು ಪರಿಸರ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂಬುದು ಮನೋಭಾಷಾವಿಜ್ಞಾನಿಗಳ ಅಭಿಮತ. ಮನೋಭಾಷಾವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದ ಕೆಲವು ತಜ್ಞರ ಪೈಕಿ ಫ್ರಾಯ್ಡ್, ಪಾವ್‌ಲೋವ್, ಸ್ಕಿನ್ನರ್, ನೋಮ್ ಚಾಮ್‌ಸ್ಕಿ, ಮೌರರ್, ಬಸ್ಗೂಡ್, ಸ್ಲೋಬಿನ್ ಪಿಯಾಜೆ ಮುಖ್ಯರಾದವರು.

೨ ಸಾಮಾಜಿಕ ಭಾಷಾವಿಜ್ಞಾನ (Sociolinguistics)

ಭಾಷೆಗೂ ಸಮಾಜಕ್ಕೂ ನಿಕಟ ಸಂಬಂಧವುಂಟು. ಸಮಾಜದಿಂದ ವ್ಯಕ್ತಿಯನ್ನೂ ವ್ಯಕ್ತಿಯಿಂದ ಭಾಷೆಯನ್ನೂ ಬೇರ್ಪಡಿಸಲು ಸಾಧ್ಯವಾಗುವುದಿಲ್ಲ. ಸಮಾಜದ ಅಭಿವೃದ್ಧಿಗೆ ಭಾಷೆ ಸಹಾಯಕವಾಗಿದೆ. ಇಡೀ ಸಮಾಜವನ್ನೇ ಭಾಷೆ ಪ್ರತಿನಿಧಿಸುತ್ತದೆ. ಪ್ರತಿಬಿಂಬಿಸುತ್ತದೆ. ಸಮಾಜದ ಆಂತರಿಕ ಹಾಗೂ ಬಾಹ್ಯ ವಿಚಾರಗಳಲ್ಲಿ ಭಾಷೆ ಬೆರೆತುಹೋಗಿ ಅದರ ಅಳಿವಿಗೆ ಉಳಿವಿಗೆ ಕಾರಣವಾಗುತ್ತದೆ. ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಭಾಷೆಯನ್ನು ವಿಶ್ಲೇಷಿಸುವ ದೃಷ್ಟಿಯಿಂದ ಭಾಷಾವಿಜ್ಞಾನಿಗಳು, ಮಾನವಶಾಸ್ತ್ರಜ್ಞರು, ಸಮಾಜವಿಜ್ಞಾನಿಗಳು ಕೈಗೊಂಡ ಪ್ರಯತ್ನದ ಫಲವಾಗಿ ಭಾಷಾವಿಜ್ಞಾನ ಕ್ಷೇತ್ರದಲ್ಲಿ 'ಸಾಮಾಜಿಕ ಭಾಷಾವಿಜ್ಞಾನ' ಎಂಬ ಶಾಖೆ ರೂಪುತಳೆಯಿತು. ಈ ಹೆಸರನ್ನು ಮೊತ್ತಮೊದಲು ಬಳಸಿದವನೆಂದರೆ ಹ್ಯಾವರ್.ಸಿ.ಕ್ಯೂರಿ. ಭಾಷೆಯ ರಚನೆಯಲ್ಲಿ ಧ್ವನಿ, ಪದ, ವಾಕ್ಯ, ಅರ್ಥ ಎಂಬ ಅಂಶಗಳಿರುವಂತೆ, ಸಾಮಾಜಿಕ ರಚನೆಯಲ್ಲಿ ಲಿಂಗ, ವರ್ಗ, ಜಾತಿ ವ್ಯವಸ್ಥೆಗಳಿವೆ. ಇವು ಭಾಷೆಯ ರಚನಾಂಶಗಳ ವ್ಯತ್ಯಯಕ್ಕೆ ಪ್ರಮುಖ ಕಾರಣಗಳಾಗುತ್ತವೆ ಎಂಬ ವಿಚಾರವನ್ನು ವೈಜ್ಞಾನಿಕವಾಗಿ ಸ್ಪಷ್ಟಪಡಿಸುವುದೇ ಸಾಮಾಜಿಕ ಭಾಷಾವಿಜ್ಞಾನಿಗಳ ಮುಖ್ಯ ಗುರಿ. ಭಾಷೆಯನ್ನು ಆಧುನಿಕ ದೃಷ್ಟಿಕೋನಗಳಿಗೆ ಅನುಗುಣವಾಗಿ ಆಧುನೀಕರಣಗೊಳಿಸುವುದು ಮಾನವನ ಸವಲತ್ತುಗಳಿಗೆ ಅನುಗುಣವಾಗಿ ಬೆಳೆಸುವುದು ಮೊದಲಾದ ಉದ್ದೇಶಗಳನ್ನು ಈ ಶಾಖೆ ಹೊಂದಿದೆ. ಭಾಷೆಯ ಶಿಷ್ಟೀಕರಣ (Standardisation), ಲಿಪಿ ಸುಧಾರಣೆ (Script reformation), ಭಾಷಾಯೋಜನೆ (Language Planning) ಮೊದಲಾದ ಸಂದರ್ಭಗಳಲ್ಲಿ ಸಾಮಾಜಿಕ ಭಾಷಾವಿಜ್ಞಾನಿಗಳ ಅಗತ್ಯ ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಬೇಸಿಲ್ ಬರ್ನ್‌ಸ್ಟೈನ್, ಲ್ಯಾಬೊವ್, ಗುಂಪರ್ಚ್, ಡೆಲ್‌ಹೈಮ್ಸ್, ವಿಲಿಯಮ್ ಬ್ರೈಟ್, ಡಿಟ್‌ಮಾರ್, ಟ್ರಡ್ಗಿಲ್ ಮೊದಲಾದವರನ್ನು ಹೆಸರಿಸಬಹುದು.

೩ ಜೈವಿಕ ಭಾಷಾವಿಜ್ಞಾನ (Biolinguistics)

ಜೀವವಿಜ್ಞಾನ ಮತ್ತು ಭಾಷಾವಿಜ್ಞಾನ ಸಿದ್ಧಾಂತಗಳ ಸಾಹಚರ್ಯದಿಂದ ರೂಪುಗೊಂಡ ಶಾಖೆಯೇ ಜೈವಿಕ ಭಾಷಾವಿಜ್ಞಾನ. ಭಾಷೆಯ ಉಗಮ ಮತ್ತು ವಿಕಾಸಕ್ಕೆ

ಡಾರ್ವಿನ್ನನ ಜೀವವಿಕಾಸವಾದವನ್ನು ಅನ್ವಯಿಸುವ ಪ್ರಯತ್ನ ಜೈವಿಕ ಭಾಷಾವಿಜ್ಞಾನ ಕ್ಷೇತ್ರದಲ್ಲಿ ನಡೆದಿದೆ. ಪ್ರಾಣಿವರ್ಗದ ವಿಕಾಸದೊಡನೆ ಭಾಷಾವಿಕಾಸವನ್ನು ಗುರುತಿಸುವ ಪ್ರಯತ್ನ ನಡೆಯುತ್ತಿದೆ. ಪ್ರಾಣಿ ಸಂವಹನದ ಅನುಕರಣೆಯಿಂದ ಮಾನವ ಭಾಷೆ ರೂಪುಗೊಂಡಿತೆಂಬ ಅಭಿಪ್ರಾಯಗಳು, ಜೊತೆಗೆ ಭಾಷಾರ್ಜನೆ (acquisition of language) ಮತ್ತು ಭಾಷಾಸಾರ್ವತ್ರಿಕತೆ (language universals) ಬಗೆಗೂ ಜೈವಿಕ ಭಾಷಾತಜ್ಞರು ಮಾಹಿತಿಗಳನ್ನು ಒದಗಿಸಿದ್ದಾರೆ. ಈ ಕ್ಷೇತ್ರದಲ್ಲಿ ಇ. ಎಚ್. ಲೆನೆಬರ್ಗ್ ಅವರ Biological Foundations of Language, ಲೈಬರ್‌ಮನ್ ಅವರ Origin of Language ಎಂಬ ಕೃತಿ ಪ್ರಮುಖವಾದುದು.

೪ ನರವ್ಯೂಹ ಭಾಷಾವಿಜ್ಞಾನ (Neurolinguistics)

ಮಾತಾಡುವುದು, ಕೇಳುವುದು, ಬರೆಯುವುದು, ಓದುವುದು ಮೊದಲಾದವೆಲ್ಲ ದೇಹದ ವಿವಿಧ ಅಂಗಾಂಗಗಳ ಮೂಲಕ ನಿರ್ವಹಣೆಯಾಗುವ ಸಹಜ ಕ್ರಿಯೆಗಳು. ಆದರೆ ಈ ಎಲ್ಲ ಅಂಗಾಂಗಗಳ ಕ್ರಿಯಾವರ್ತನವನ್ನು ನಿಯಂತ್ರಿಸುವ ಮತ್ತು ಆ ಕ್ರಿಯಾವರ್ತನವನ್ನು ಸುಸಂಬದ್ಧವಾಗಿ ಸಂಯೋಜಿಸುವ ಕಾರ್ಯ ಮಾನವನ ಮಿದುಳಿನಲ್ಲಿ ನಡೆಯುತ್ತದೆ.

ಮಿದುಳಿನಲ್ಲಿ ಭಾಷಾಕಲಿಕೆ ಮತ್ತು ಭಾಷಾಬಳಕೆಗಳು ನಿಯಂತ್ರಿತವಾಗುವ ರೀತಿಯನ್ನು ತಿಳಿಯಲು ೧೯೫೦ ರಿಂದೀಚೆಗೆ ಹಲವಾರು ಪ್ರಯತ್ನಗಳು ನಡೆದಿವೆ. ಭಾಷಾಕೌಶಲಗಳನ್ನು ಆರ್ಜಿಸುವಿಕೆ ಮತ್ತು ಬಳಸುವಿಕೆ, ಮಿದುಳಿನಲ್ಲಿರುವ ನಿಯಂತ್ರಣಕೇಂದ್ರದ ಕಾರ್ಯದಿಂದ ಪ್ರಭಾವಿತವಾಗುತ್ತವೆ. ಮರೆವು, ತೊದಲು, ಅಸ್ಪಷ್ಟವಾಗಿ ಮಾತಾಡುವುದು, ಬರವಣಿಗೆ ದೋಷಗಳು, ಭಾಷಾಬಳಕೆಯ ವಿವಿಧ ವಿಕಲತೆಗಳು ಮೊದಲಾದ ಭಾಷಾದೋಷಗಳನ್ನು ಇಂದಿನ ದಿನಗಳಲ್ಲಿ ವಿಶ್ಲೇಷಿಸಿ ವಿವರಿಸಲು ಸಾಧ್ಯವಾಗುತ್ತಿದೆ. ಮಿದುಳು ಮತ್ತು ಭಾಷೆಯ ಸಂಬಂಧ, ಮಿದುಳಿನಲ್ಲಿ ಭಾಷಾನಿಯಂತ್ರಣದ ನೆಲೆಗಳು, ಭಾಷೆಗೆ ಸಂಬಂಧಿಸಿದ ನರಮಂಡಲದ ಕಾರ್ಯವೈಖರಿ, ಮಿದುಳಿನ ಅರೆಗೋಳದ ಪ್ರಾಬಲ್ಯ ಹಾಗೂ ಭಾಷಾಬೆಳವಣಿಗೆ, ಮಿದುಳಿನ ಕಂಪನದ ಅಲೆಗಳ ಕಾರ್ಯವಿಧಾನ, ಭಾಷಾನ್ಯೂನತೆಗಳು ಮೊದಲಾದ ವಿಚಾರಗಳು ನರವ್ಯೂಹ ಭಾಷಾವಿಜ್ಞಾನ ಶಾಖೆಯ ಅಧ್ಯಯನ ವಿಷಯಗಳಾಗಿವೆ. ಬ್ರೋಕ, ವರ್ನಿಕ್, ಕೊಹೆನ್, ಮಾರ್ಸಿ, ವೆಂಡ್ರನೆಸ್, ಲೆನೆಬರ್ಗ್, ಗ್ರೆವಲ್, ಲೂರಿಯಾ, ಫ್ರಾಂಕಿನ್, ವಿಟೇಕರ್, ಕೆ. ಎಚ್. ಕೃಷ್ಣಮೂರ್ತಿ ಮೊದಲಾದ ತಜ್ಞರು ಈ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ.

೫ ವೈದೃಶ್ಯಾತ್ಮಕ ಭಾಷಾವಿಜ್ಞಾನ (Contrastive Linguistics)

ಒಂದೇ ಭಾಷಾಪರಿವಾರಕ್ಕೆ ಸೇರದೇ ಇರುವ, ಎರಡು ವಿಭಿನ್ನ ಭಾಷೆಗಳ ರಚನೆಯನ್ನು ಪರಸ್ಪರ ಹೋಲಿಸಿ, ಅವುಗಳ ನಡುವೆ ಇರುವಂಥ ವ್ಯತ್ಯಾಸಗಳನ್ನು ಪಟ್ಟಿಮಾಡಿ, ಆ ಪಟ್ಟಿಯ ಸಹಾಯದಿಂದ, ವಿದ್ಯಾರ್ಥಿ ತಪ್ಪು ಮಾಡಬಹುದಾದ ಸಂದರ್ಭಗಳನ್ನು

ಮೊದಲೇ ಗುರುತಿಸಿ, ಅವನ್ನು ಕಲಿಯುವಾಗ ವಿಶೇಷ ಎಚ್ಚರ ವಹಿಸುವಂತೆ ಪ್ರೇರೇಪಿಸುವಂಥ ಬೋಧನಾ ಸಾಮಗ್ರಿಯನ್ನು ಸಿದ್ಧಪಡಿಸುವ ಪ್ರಮುಖ ಹೊಣೆಗಾರಿಕೆ ವೈದೃಶ್ಯಾತ್ಮಕ ಭಾಷಾವಿಜ್ಞಾನಿಯದ್ದು.

ಒಂದು ಭಾಷೆಯನ್ನು ಕಲಿಯುವ ಸಂದರ್ಭದಲ್ಲಿ, ಒಬ್ಬ ವಿದ್ಯಾರ್ಥಿ ಎಸಗುವ ಎಲ್ಲ ತಪ್ಪುಗಳನ್ನು ಗುರುತಿಸಿ, ಅವನ್ನು ಪರಿಶೀಲಿಸಿ, ಇಂಥಿಂಥ ಕಾರಣಗಳಿಗಾಗಿ ಇಂಥಿಂಥ ತಪ್ಪುಗಳು ಕಾಣಿಸಿಕೊಂಡಿವೆ ಎಂದು ತೋರಿಸಿಕೊಡುವ ಪ್ರಯತ್ನವನ್ನು 'ದೋಷ ವಿಶ್ಲೇಷಣ' (Error analysis) ಎನ್ನುವರು. ೧೯೫೭ರಲ್ಲಿ ರಾಬರ್ಟ್ ಲ್ಯಾಡೊ ಅವರು ಪ್ರಕಟಿಸಿದ 'Linguistics Across Cultures' ಎಂಬ ಕೃತಿ ವೈದೃಶ್ಯಾತ್ಮಕ ಭಾಷಾವಿಜ್ಞಾನದ ಉಗಮಕ್ಕೆ ಕಾರಣವಾಯಿತು. ಅನ್ಯಭಾಷೆಯ ಕಲಿಕೆಯ ಸಂದರ್ಭದಲ್ಲಿ ಒಬ್ಬ ಬೋಧಕ, ಸಾಮಗ್ರಿಯನ್ನು ಯಾವ ಬಗೆಯಲ್ಲಿ ಅಣಿ ಮಾಡಿಕೊಳ್ಳಬೇಕು? ತಾಯ್ನುಡಿಗಿಂತ ಅದು ಯಾವ ಬಗೆಯಲ್ಲಿ ಭಿನ್ನವಾಗಿದೆ? ಅನ್ಯಭಾಷಾಕಲಿಕೆಗೆ ತಾಯ್ನುಡಿ ಹೇಗೆ ತೊಡಕಾಗುತ್ತದೆ? ಈ ಮೊದಲಾದ ಸಮಸ್ಯೆಗಳ ಕಡೆಗೆ ಗಮನ ಹರಿಸಿದ ಲ್ಯಾಡೊ ಅವರು, ವೈದೃಶ್ಯಾತ್ಮಕವಾಗಿ ಭಾಷಾರಚನೆಯ ಎಲ್ಲ ಘಟಕಗಳನ್ನೂ ಪರಿಶೀಲಿಸುವ ಪರಿಯನ್ನು ಅವರ ಕೃತಿಯಲ್ಲಿ ಮನಗಾಣಿಸಿದ್ದಾರೆ. ಇದೇ ಅಲ್ಲದೆ ಅವರು ಪ್ರಚುರಪಡಿಸಿದ 'ಭಾಷಾವ್ಯತಿಕರಣ ಸಿದ್ಧಾಂತ' (Language Interference Theory) ಭಾಷಾಕಲಿಕೆಯ ದೋಷಗಳನ್ನು ತಪ್ಪುಗಳನ್ನು ಮೊದಲೇ ತಿಳಿಸಿಕೊಡುವಂಥ ಮುನ್ನೆಚ್ಚರಿಕೆ ಕ್ರಮವೆಂದು ಹೆಸರಾಯಿತು.

೬ ಭಾಷಾ ಬೋಧನೆ (Language Teaching)

ಮೌಖಿಕ ಸಂಪರ್ಕಕ್ಕೆ ಭಾಷೆ ಸಾಧನ. ವ್ಯಕ್ತಿಗೆ ತನ್ನ ಔನ್ನತ್ಯಕ್ಕೆ ಸಾಮಾಜಿಕ ಸಂಪರ್ಕ ಅತ್ಯಗತ್ಯ. ಆದ್ದರಿಂದ ಅವನು ಹಲವು ಭಾಷೆಗಳನ್ನು ಕಲಿಯುವುದು ಅನಿವಾರ್ಯ. ಆದುದರಿಂದಲೇ ಮಾನವನಿಗೆ ಮಾತ್ರ ಸೀಮಿತವಾಗಿರುವ ಸಂಪರ್ಕ ಸಾಧನವಾದ ಭಾಷೆ ಅನುವಂಶೀಯವಾಗಿ ಸಾಗುವುದರ ಬದಲು ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ ಸಾಗುತ್ತಿದೆ. ಈ ದೃಷ್ಟಿಯಿಂದ ಭಾಷೆಯನ್ನು ಗಮನಿಸಿದಾಗ ಸ್ವಭಾಷೆ ಮತ್ತು ಅನ್ಯಭಾಷೆ ಎಂಬ ಎರಡು ವರ್ಗಗಳನ್ನು ಗುರುತಿಸಬಹುದು. ವ್ಯಕ್ತಿ ಯಾವ ಸಮಾಜದ ಸದಸ್ಯನಾಗಿರುತ್ತಾನೋ, ಆ ಸಮಾಜ ರೂಪಿಸಿಕೊಂಡ ಭಾಷೆ ಅವನ ಸ್ವಭಾಷೆ. ಇದನ್ನು 'ಪ್ರಥಮ ಭಾಷೆ (ಎಲ್)' ಎನ್ನುವರು. ಹುಟ್ಟಿನಿಂದ, ಹೆತ್ತವರಿಂದ ಕಲಿತುಕೊಂಡು ಬಂದಿರುವ ಭಾಷೆ ಮಾತೃಭಾಷೆ, ಸ್ವಭಾಷೆಗಳೆಲ್ಲ ಮಾತೃಭಾಷೆಗಳಾಗಿರಬೇಕಿಲ್ಲ. ಮಾತೃಭಾಷೆಯ ಜೊತೆಯಲ್ಲಿ ಪರಿಸರದಲ್ಲಿ ಬಳಕೆಯಲ್ಲಿರುವ ಬೇರೆ ಬೇರೆ ಭಾಷೆಗಳನ್ನು ಕಲಿತು, ಅವುಗಳ ಮೂಲಕ ತನ್ನ ವಿಚಾರಗಳನ್ನು ವಿನಿಮಯ ಮಾಡುವ ಸಾಮರ್ಥ್ಯಗಳಿಸಿಕೊಂಡರೆ, ಅವು ಆ ವ್ಯಕ್ತಿಯ ಸ್ವಭಾಷೆಗಳಾಗುವುವು. ಉದಾಹರಣೆಗೆ ಕೊಂಕಣಿ ಭಾಷೆಯನ್ನು ಮಾತೃಭಾಷೆಯನ್ನಾಗುಳ್ಳವರು ಕನ್ನಡ ಮತ್ತು ತುಳು ಭಾಷೆಗಳನ್ನು ಸ್ವಭಾಷೆಗಳನ್ನಾಗಿ ಮಾಡಿಕೊಂಡಿರುವುದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬಹುದು.

ಸ್ವಭಾಷೆ ಹೊರತಾದ ಉಳಿದ ಭಾಷೆ ಅನ್ಯಭಾಷೆ ಇದನ್ನು 'ದ್ವಿತೀಯ ಭಾಷೆ (ಎಲ್ ೨)' ಎನ್ನುವರು. ಇನ್ನೊಂದು ಸಮಾಜದ ಜನರೊಂದಿಗೆ ಸಂಪರ್ಕ ಬೆಳೆಸಲು, ಅನ್ಯಸಂಸ್ಕೃತಿಯನ್ನು ಅರಿಯಲು, ಅನ್ಯಭಾಷೆಯಲ್ಲಿ ಪ್ರಕಟಗೊಂಡ ಸಾಹಿತ್ಯ, ವಿಜ್ಞಾನ ಮತ್ತಿತರ ಕ್ಷೇತ್ರಗಳನ್ನು ತಿಳಿಯಲು ಅನ್ಯಭಾಷೆ ಸಹಾಯಕ. ಅನ್ಯಭಾಷೆಯ ಬೋಧನೆ ಮತ್ತು ಕಲಿಕೆ ಸುಲಭವಾದುದಲ್ಲ. ಆದ್ದರಿಂದ ಒಂದು ನಿರ್ದಿಷ್ಟ ಕಾಲಾವಧಿಯೊಳಗೆ ಭಾಷೆಯ ಅಧ್ಯಾಪನ ಮತ್ತು ಅಧ್ಯಯನದ ಉದ್ದೇಶವನ್ನು ಸಾಧಿಸಲು ಬೇಕಾದ ಸಿದ್ಧಾಂತಗಳನ್ನೂ ತತ್ವಗಳನ್ನೂ ಪದ್ಧತಿಗಳನ್ನೂ ಅಳವಡಿಸಿಕೊಂಡು ಪೂರ್ವಯೋಜಿತ ರೀತಿಯಲ್ಲಿ ಅವನ್ನು ನಡೆಸಬೇಕಾಗುತ್ತದೆ. ಅಭ್ಯರ್ಥಿಯ ವಯಸ್ಸು, ಉದ್ದೇಶ, ವಿದ್ಯಾರ್ಹತೆ, ಮಾನಸಿಕ ದೃಢತೆ, ಪೀಠೋಪಕರಣಗಳ ಲಭ್ಯತೆ, ಅಧ್ಯಾಪಕನ ಸೌಲಭ್ಯ, ಸ್ಥಾನಮಾನ ಮೊದಲಾದ ವಿಚಾರಗಳನ್ನು ಗಮನಿಸಿ, ಅಧ್ಯಾಪನ ತತ್ವಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಬಹುದಾದ ಅವಕಾಶಗಳಿವೆ.

೭ ಭಾಷಾಂತರ (Translation)

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ, ಒಂದು ಕಾಲದ ಭಾಷೆಯಿಂದ ಮತ್ತೊಂದು ಕಾಲದ, ಅದೇ ಭಾಷೆಗೆ ಮಾನಸಿಕವಾಗಿ, ಮೌಖಿಕವಾಗಿ ಅಥವಾ ಬರೆಹ ರೂಪವಾಗಿ, ಮೂಲದ ಭಾವ ಅರ್ಥಗಳನ್ನು ಕೊಂಡೊಯ್ಯುವ ಪ್ರಕ್ರಿಯೆಯನ್ನು 'ಭಾಷಾಂತರ' ಎನ್ನಬಹುದು. ಭಾಷಾಂತರ ಸಾಮಾನ್ಯವಾಗಿ ಎರಡು ಭಾಷೆಗಳ ನಡುವೆ ಮತ್ತು ವಿಶೇಷ ಸಂದರ್ಭಗಳಲ್ಲಿ ಭಾಷೆಯ ಎರಡು ಹಂತಗಳಲ್ಲಿ ಅಥವಾ ಅವಸ್ಥೆಗಳಲ್ಲಿ ನಡೆಯುವ ಕಾರ್ಯ. Translation is the transfer of a text from a source language into a text in a target language, the objectives being a perfect equivalence of meaning between the two texts' ಎಂಬ ಟಾಂಕೆಯವರ ಅಭಿಪ್ರಾಯವನ್ನು ಗಮನಿಸಬಹುದು. ಭಾಷಾಂತರ ಉತ್ತಮವಾಗಿದ್ದರೆ ಸಂವಹನವೂ ಉತ್ತಮವಾಗಿರುತ್ತದೆ. ಭಾಷೆಗಳ ಮರ್ಮವನ್ನು ತಿಳಿದ ವ್ಯಕ್ತಿಯ ಭಾಷಾಂತರ ಕಾರ್ಯ ಶ್ರೇಷ್ಠವಾಗಿರುತ್ತದೆ. ಆದುದರಿಂದ ಭಾಷಾಂತರ ಮಾಡುವ ವ್ಯಕ್ತಿಗೆ ಭಾಷಾವಿಜ್ಞಾನದ ಪರಿಜ್ಞಾನ ಅವಶ್ಯಕ.

೮ ಶೈಲಿ ವಿಜ್ಞಾನ (Stylistics)

ಭಾಷಾವಿಜ್ಞಾನದ ಅನ್ವಯಿಕ ಶಾಖೆಗಳ ಪೈಕಿ ಶೈಲಿವಿಜ್ಞಾನವೂ ಒಂದು. ಸಾಹಿತಿಗಳು, ಸಾಮಾಜಿಕ ಭಾಷಾತಜ್ಞರು ಇತ್ತೀಚಿನ ದಿನಗಳಲ್ಲಿ ಶೈಲಿವಿಜ್ಞಾನಕ್ಕೆ ಹೆಚ್ಚು ಆದ್ಯತೆ ನೀಡಿದ್ದಾರೆ. ವ್ಯಕ್ತಿಯ ಮಾತಿನಲ್ಲಿ ಅಥವಾ ಬರವಣಿಗೆಯಲ್ಲಿ ವಿಶಿಷ್ಟವಾದ ಕೆಲವು ಲಕ್ಷಣಗಳು ಇರುತ್ತವೆ. ಈ ಲಕ್ಷಣಗಳನ್ನು ಸ್ಥೂಲವಾಗಿ 'ಶೈಲಿ' ಎನ್ನುವರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಲಿಖಿತ ಭಾಷಾಸಾಮಗ್ರಿಯ ಪರಿಶೀಲನೆಯಿಂದ ಕೃತಿಕಾರರ ಭಾಷಾಶೈಲಿಯನ್ನು ಕಂಡುಕೊಳ್ಳುವ ವಿಧಾನ. ಸಾಕಷ್ಟು ಬೆಳೆದಿದೆ. ಇದರಿಂದ ಸಾಹಿತ್ಯ ಚರಿತಕಾರರ ಅನೇಕ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಾಗಿದೆ. ಶೈಲಿ (style) ಮತ್ತು ನಮನ (register)

ಎಂಬ ಪದಗಳು ಭಾಷಾಬಳಕೆಯ ಸಂದರ್ಭವನ್ನು ವಿಶ್ಲೇಷಿಸುವಲ್ಲಿ ಕೇಳಿಬರುವ ಮಾತುಗಳು. Situational Linguistic Variety (ಸಾಂದರ್ಭಿಕ ಭಾಷಿಕ ಪ್ರಭೇದ) ಶೈಲಿ ಎನಿಸಿದರೆ, Occupational Linguistic Variety (ವೃತ್ತಿ ಸಂಬಂಧಿ ಭಾಷಿಕ ಪ್ರಭೇದ) ನಮನ ಎನಿಸಿಕೊಳ್ಳುತ್ತದೆ. ಆಡುಮಾತಿಗೂ ಬರೆಹದ ಭಾಷೆಗೂ ಬಹಳ ವ್ಯತ್ಯಾಸವಿದೆ.ಅಂತೆಯೇ ವ್ಯಕ್ತಿಯೋರ್ವ ಸಂದರ್ಭಕ್ಕೆ ಅನುಗುಣವಾಗಿ ತಾನಾಡುವ ಭಾಷೆಯಲ್ಲಿ ಪರಿವರ್ತನೆ ಮಾಡಿಕೊಳ್ಳುತ್ತಾನೆ. ಬರೆಹದ ಬಗೆಯೂ ವಿಷಯಕ್ಕನುಗುಣವಾಗಿ ಬದಲಾಗುತ್ತದೆ. ಟೆನಿಸ್ ಪಂದ್ಯದ ವೀಕ್ಷಕ ವಿವರಣೆಗಾಗಿ ಬಳಸುವ ಭಾಷಾರೂಪವನ್ನು ಪೂಜಾಸಂದರ್ಭದಲ್ಲಿ ಬಳಸುವುದಿಲ್ಲ. ಕಥೆ, ಕವನ, ಕಾದಂಬರಿಗಳ ಬರೆಹಕ್ಕೂ ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಬರೆಹಕ್ಕೂ ಬಹಳ ಅಂತರವಿದೆ. ಏಕೆ ಹೀಗೆ ಎಂಬ ಸಮಸ್ಯೆಗೆ ಯುಕ್ತ ಉತ್ತರ, ಶೈಲಿವಿಜ್ಞಾನ ಅಧ್ಯಯನದಿಂದ ದೊರೆಯುತ್ತದೆ. ಉಚ್ಚಾರಣೆ, ಪಾರಿಭಾಷಿಕ ಪದಪ್ರಯೋಗ ಹಾಗೂ ವಾಕ್ಯರಚನೆಯ ಕ್ರಮ - ಇವನ್ನಾಧರಿಸಿ ಭಾಷಾಶೈಲಿಯ ಭಿನ್ನತೆಯನ್ನು ಗುರುತಿಸಬಹುದು. ಪಠ್ಯವಿಶ್ಲೇಷಣೆ (text analysis) ಇಂದಿನ ದಿನಗಳಲ್ಲಿ ಶೈಲಿವಿಜ್ಞಾನದ ಜನಪ್ರಿಯ ಪ್ರಕಾರವೆನಿಸಿದೆ.

೯ ಜನಪದ ಭಾಷಾವಿಜ್ಞಾನ (Folklinguistics)

ಭಾಷಾವಿಜ್ಞಾನದ ನೆರವಿನಿಂದ ಜಾನಪದ ಅಧ್ಯಯನ ವೈಜ್ಞಾನಿಕ ನಿಲುವನ್ನು ಪಡೆದುಕೊಂಡಿದೆ. ಭಾಷಾವಿಜ್ಞಾನದ ಸಿದ್ಧಾಂತಗಳು, ತತ್ವಗಳು, ಜಾನಪದ ಸಾಮಗ್ರಿಗಳ ವಿಶ್ಲೇಷಣೆಯಲ್ಲಿ ನೆರವಾಗುತ್ತಿವೆ. ಭಾಷಾವಿಜ್ಞಾನದ ಸಂರಚನಾವಾದ (structuralism) ಜಾನಪದ ಅಧ್ಯಯನಕ್ಕೆ ಹೊಸ ಆಯಾಮ ತಂದುಕೊಟ್ಟಿದೆ. ಹೀಗಾಗಿ ಭಾಷಾವಿಜ್ಞಾನ ಮತ್ತು ಜಾನಪದ ಕ್ಷೇತ್ರಗಳೆರಡೂ ಅಂತರಶಿಸ್ತಿನ ಅಧ್ಯಯನಕ್ಕೆ ಉತ್ತಮ ನಿದರ್ಶನಗಳಾಗಿವೆ. ಭಾಷಾವಿಜ್ಞಾನ ಮತ್ತು ಜಾನಪದ ತತ್ವಗಳ ಸಹಯೋಗದಿಂದ 'ಜನಪದ ಭಾಷಾವಿಜ್ಞಾನ' ಮೂಡಿಬಂದಿದೆ. ಮೌಖಿಕ ಪರಂಪರೆಯ ಜನಪದ ಗೀತೆ, ಕಥೆ, ಗಾದೆ, ಒಗಟು, ನಂಬಿಕೆ ಮೊದಲಾದ ಪ್ರಕಾರಗಳನ್ನು ಭಾಷಾವಿಜ್ಞಾನ ತತ್ವಗಳ ಸಹಾಯದಿಂದ ವಿಶ್ಲೇಷಿಸುವ ಪ್ರಯತ್ನ ಸಾಗುತ್ತಿದೆ. ಈ ನಿಟ್ಟಿನಲ್ಲಿ ಅಮೆರಿಕ, ಇಂಗ್ಲೆಂಡ್, ಜರ್ಮನಿ, ಫಿನ್ಲೆಂಡ್, ಭಾರತ ಮೊದಲಾದ ದೇಶಗಳಲ್ಲಿಯ ವಿದ್ವಾಂಸರು ಸಂಶೋಧನೆ ನಡೆಸಿದ್ದಾರೆ.

೧೦ ಗಣಕ ಭಾಷಾವಿಜ್ಞಾನ (Computational Linguistics)

ವೈಜ್ಞಾನಿಕವಾಗಿ ತಾಂತ್ರಿಕವಾಗಿ ಭಾಷಾವಿಜ್ಞಾನ ಕ್ಷೇತ್ರ ಎಷ್ಟು ಉನ್ನತಿಯನ್ನು ಸಾಧಿಸಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಯೆಂದರೆ ಗಣಕ ಭಾಷಾವಿಜ್ಞಾನ. ಕಳೆದ ಶತಮಾನದ ಕೊನೆಯ ದಶಕವನ್ನು 'ಕಂಪ್ಯೂಟರ್ ಯುಗ'ವೆಂದೇ ಗುರುತಿಸಲಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಇಂದು ಗಣಕಯಂತ್ರಗಳು ಅನಿವಾರ್ಯ ಸಾಧನಗಳಾಗಿವೆ. ಮಾನವನ ಬುದ್ಧಿಶಕ್ತಿಗೆ ಪರ್ಯಾಯವಾಗಿ ಇಂದು ಗಣಕಯಂತ್ರ ಕಾರ್ಯನಿರ್ವಹಿಸುತ್ತಿವೆ. ಗಣಕ ಭಾಷಾವಿಜ್ಞಾನ

ಶಾಖೆಯು ಗಣಕ ವಿಜ್ಞಾನ ಮತ್ತು ರಾಚನಿಕ ಭಾಷಾವಿಜ್ಞಾನ ಅಥವಾ ಸಂರಚನಾತ್ಮಕ ಭಾಷಾವಿಜ್ಞಾನಗಳ ಸಹಯೋಗದಿಂದ ಭಾಷಾವಿಜ್ಞಾನ ಕ್ಷೇತ್ರದಲ್ಲಿ ರೂಪುಗೊಂಡಿದೆ. ಗಣಕಯಂತ್ರ ಮೊತ್ತಮೊದಲು ಕೈಗೆತ್ತಿಕೊಂಡ ಭಾಷಾವಿಜ್ಞಾನದ ಸಮಸ್ಯೆಯೆಂದರೆ ಯಂತ್ರಾನುವಾದ (machine translation). ಯಂತ್ರಾನುವಾದದ ಯೋಜನೆಗಳು ಗಣಕ ಭಾಷಾವಿಜ್ಞಾನದ ಬೆಳವಣಿಗೆಗೆ ಕಾರಣವಾದವು. ಹೀಗಾಗಿ computer programming, file manipulation, data encoding and storage, dictionary consultation, syntactic parsing ಮೊದಲಾದ ಚಟುವಟಿಕೆಗಳು ಗಣಕಯಂತ್ರದ ನೆರವಿನಿಂದ ಆರಂಭಗೊಂಡವು. ಇವುಗಳ ಜೊತೆಗೆ classification, indexing abstracting retrieval and dissemination of written documents ಮೊದಲಾದ ವಿಚಾರಗಳ ಬಗೆಗೆ ಸಂಶೋಧನೆಗಳು ಮೊದಲಾದುವು. ಇದರ ಫಲವಾಗಿ ಪಠ್ಯವಿಶ್ಲೇಷಣೆಗೆ ನೆರವಾಗುವ ಪರಿಕರ (tools) ಮತ್ತು ತಂತ್ರಗಳು (techniques) ಇಂದಿನ ದಿನಗಳಲ್ಲಿ ಲಭ್ಯವಾಗುತ್ತಿವೆ. ಪದಸೂಚಿಗಳನ್ನು ತಯಾರಿಸುವಂಥ ಹಲವಾರು computer programmes ನಡೆದಿವೆ. ಗಣಕಯಂತ್ರಗಳು ಪದಕೋಶ, ನಿಘಂಟು ತಯಾರಿಕೆಯಲ್ಲೂ ನೆರವೀಯುತ್ತಿವೆ. ಭಾಷಾಬೋಧನೆಗೆ ಗಣಕ ಭಾಷಾವಿಜ್ಞಾನ ಕ್ಷೇತ್ರವನ್ನು ಬಳಸಿಕೊಳ್ಳುವ ಬಗ್ಗೆ ತೀವ್ರ ಪ್ರಯತ್ನಗಳು ಸಾಗಿವೆ.

ಈವರೆಗೆ ಪ್ರಸ್ತಾಪಿಸಿರುವ ಶಾಖೆಗಳೇ ಅಲ್ಲದೆ ಮಾನವ ಭಾಷಾವಿಜ್ಞಾನ (Anthropological linguistics), ಮಾನವಕುಲ ಭಾಷಾವಿಜ್ಞಾನ (Ethno linguistics), ಗಣಿತೀಯ ಭಾಷಾವಿಜ್ಞಾನ (Mathematical linguistics), ಸಂಖ್ಯಾಶಾಸ್ತ್ರೀಯ ಭಾಷಾವಿಜ್ಞಾನ (Statistical linguistics), ಪ್ರರೂಪ ವಿಜ್ಞಾನ (Typology), ಕ್ಷೇತ್ರ ಭಾಷಾವಿಜ್ಞಾನ (Field linguistics) ಮೊದಲಾದ ಶಾಖೆಗಳೂ ಇವೆ.

ಮುಸ್ಲಿಂ ಜನಪದ ನಂಬಿಕೆಗಳು

ಪರ್ವೀನ್ ಸಲೀಂ ಮಂಗಳೂರು

"ಪ್ರತಿಯೊಂದು ನಾಡಿನ ಜನತೆಯೂ ನೆನಪು ಮಾತುಕತೆ ಮತ್ತು ನಡವಳಿಕೆಯಲ್ಲಿ ಪರಂಪರೆಯಿಂದ ಅನೇಕ ಸಂಗತಿಗಳನ್ನು ಹೊತ್ತು ತರುತ್ತಿರುತ್ತದೆ. ಆಚಾರ, ವಿಚಾರ, ಪದ್ಧತಿ, ಸಾಹಿತ್ಯದ ಬಗೆಗಳು, ಮದ್ದು, ಕ್ರೀಡೆ, ಕಲೆ, ನೃತ್ಯ, ನಾಟಕ, ಅಡುಗೆ, ಉಡುಗೆ-ತೊಡುಗೆ, ಮನರಂಜನಾ ಮಾಧ್ಯಮಗಳು, ಧಾರ್ಮಿಕ ಕ್ರಿಯೆಗಳು, ಜೀವನ ವಿಧಾನ ಮುಂತಾದವುಗಳು ಅಲ್ಲಿ ಸೇರಿರುತ್ತವೆ. ಇವುಗಳನ್ನು ಪೂರ್ಣವಾಗಿ ಒಳಗೊಳ್ಳುವ ಚೌಕಟ್ಟನ್ನು ಜಾನಪದ ಎನ್ನುವ ವಿಶಾಲ ಅರ್ಥದಲ್ಲಿ ಕರೆಯುತ್ತೇವೆ"[೧]

ಇಂದು ಜಾನಪದದ ಅಂಶವಿಲ್ಲದ ಧರ್ಮವೇ ಇಲ್ಲ. ಅವಿನಾಭಾವ ಬಾಂಧವ್ಯದಿಂದ ಬೆಸೆದುಕೊಂಡಿರುವ ಧರ್ಮ ಮತ್ತು ಜಾನಪದಗಳ ನಡುವೆ ಧರ್ಮ ಪ್ರಸಾರದ ಮಾಧ್ಯಮವಾಗಿ ಜಾನಪದ ಕೆಲಸಮಾಡುತ್ತದೆ ಎನ್ನಬಹುದು. ಇಂದು ಬಹುತೇಕ ಜನಪದ ಕಲಾ ಪ್ರಕಾರಗಳು ಜಾತ್ರೆ, ಉರುಸುಗಳಂಥ ಸಂದರ್ಭಗಳಲ್ಲಿ ಅಭಿವ್ಯಕ್ತಿ ಪಡೆಯುವುದೇ ಹೆಚ್ಚು. ಇಸ್ಲಾಂ ಧರ್ಮವೂ ಇದಕ್ಕೆ ಹೊರತಾಗಿಲ್ಲ.

ವಿವಿಧತೆಯಲ್ಲಿ ಏಕತೆಯನ್ನು ಮೈಗೂಡಿಸಿಕೊಂಡಿರುವ ಭಾರತ ಹತ್ತು ಹಲವು ಮತಧರ್ಮಗಳ ನೆಲೆವೀಡು. ಐದು ಸಾವಿರ ವರ್ಷಗಳ ಚರಿತ್ರೆಯನ್ನು ಹೊಂದಿರುವ ಇಸ್ಲಾಂ ಧರ್ಮ ಭಾರತವನ್ನು ಪ್ರವೇಶಿಸಿದ್ದು ಸುಮಾರು ಕ್ರಿ. ಶ. ಏಳನೆಯ ಶತಮಾನದ ಅಂಚಿನಲ್ಲಿ. ಯಾವುದೇ ಚಲನಶೀಲ ಸಮಾಜವಾಗಲಿ ನಿಂತ ನೀರಾಗಲು ಸಾಧ್ಯವಿಲ್ಲ. ಹೊರಗಿನಿಂದ ಬಂದ ಮುಸ್ಲಿಮರು ಇಲ್ಲಿಯ ನೆಲದ ಸಂಸ್ಕೃತಿಯೊಡನೆ ಬೆರೆತುಹೋಗಿ ಶತಮಾನಗಳೇ ಉರುಳಿವೆ. ಭಾಷೆ, ಸಂಸ್ಕೃತಿ, ಆಚಾರ ವಿಚಾರಗಳಲ್ಲಿ ಮುಸ್ಲಿಂ ಸಮುದಾಯ ತನ್ನ ಸಂಪರ್ಕಕ್ಕೆ ಬಂದ ಅನ್ಯ ಸಮುದಾಯಗಳ ಸಮಾಜದ ಸಾಕಷ್ಟು ವಿಚಾರಗಳನ್ನು ಸ್ವೀಕರಿಸಿಕೊಂಡು ತನ್ನದನ್ನಾಗಿಸಿಕೊಂಡಿದೆ. ಕೆಲವು ವಿಚಾರಗಳಲ್ಲಿ ಮಾತ್ರ ತನ್ನ ಸಂಸ್ಕೃತಿಯ ಮೂಲ ಅಂಶಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದೆ. ಪ್ರಪಂಚದ ಇತರ ಕಟ್ಟಾ ಸಂಪ್ರದಾಯವಾದಿ ಮುಸ್ಲಿಮರಿಗಿಂತ ಭಾರತದ ಮುಸ್ಲಿಮರು ಲಿಬರಲ್ ಆಗಿರುವುದು ಸಂತೋಷದ ಸಂಗತಿಯಾಗಿದೆ.

---

೧. ಜನಪದ ಸಾಹಿತ್ಯ : ಕಾಳೇಗೌಡ ನಾಗವಾರ - ೧೫

ರೂಢಿ ಸಂಪ್ರದಾಯಗಳಿಗೆ ಬದ್ಧರಾದ ಮುಸ್ಲಿಮರಲ್ಲಿ ಜನಪದ ಸಾಹಿತ್ಯ ಪ್ರಕಾರದಲ್ಲಿ ಬರುವ ಕಥೆ, ಗಾದೆ, ಒಗಟು, ನಂಬಿಕೆಗಳು ಹೇರಳವಾಗಿವೆ. ಆದರೆ ಹೆಚ್ಚಿನ ಸಂಗ್ರಹ ಕಾರ್ಯ ನಡೆದಿಲ್ಲದಿರುವುದು ಬೇಸರದ ಸಂಗತಿಯಾಗಿದೆ. ಆಧುನಿಕತೆಯ ಬಿರುಗಾಳಿಗೆ ಬಲಿಯಾಗಿ ನಶಿಸಿ ಹೋಗುತ್ತಿರುವ ಜಾನಪದೀಯ ಅಂಶಗಳು ಸಾಕಷ್ಟು ಪ್ರಮಾಣದಲ್ಲಿ ಉಳಿಸಿ ಮುಂದಿನ ತಲೆಮಾರುಗಳಿಗೆ ಪುಸ್ತಕರೂಪದಲ್ಲಾದರೂ ಕಾಯ್ದಿರಿಸಿಕೊಳ್ಳಬೇಕಾದುದು ಅಗತ್ಯದ ಕೆಲಸವಾಗಿದೆ.

ನಂಬಿಕೆಯಿಲ್ಲದ ವ್ಯಕ್ತಿಯೇ ಇಲ್ಲ. ಈ ನಂಬಿಕೆ ಅನಾದಿಕಾಲದಿಂದಲೂ ಮನುಷ್ಯನಲ್ಲಿ ಮನೆ ಮಾಡಿವೆ. "ಆದಿಮಾನವ ನೈಸರ್ಗಿಕ ಚೇಷ್ಟೆಗಳ ಬಗೆಗೆ ತಳೆದ ಮನೋಭಾವವೇ ನಂಬಿಕೆಗಳ ಹಿನ್ನೆಲೆಯಾಗಿದೆ. ಅನೇಕ ಆಕಸ್ಮಿಕ ಅನುಭವಗಳು ನಂಬಿಕೆಗಳ ಉಗಮಕ್ಕೆ" ಕಾರಣ ಎಂದು ನಂಬಿಕೆಗಳ ಬಗ್ಗೆ ಪ್ರೊ. ದೇಜಗೌರವರ ಅಭಿಮತವಾಗಿದೆ. ಅನೇಕ ನಂಬಿಕೆಗಳ ಹುಟ್ಟಿಗೆ ಮೌಢ್ಯ ಕಾರಣವಾದರೂ ಅವುಗಳಿಗೆ ವೈಜ್ಞಾನಿಕ ಕಾರಣಗಳು ಇಲ್ಲದಿಲ್ಲ. ಆದರೆ ಕೆಲವು ನಂಬಿಕೆಗಳು ಅಪಾಯವನ್ನು ಆಹ್ವಾನಿಸುವಂಥವು.

ಮುಸ್ಲಿಮರಲ್ಲಿ ಕಂಡುಬರುವ ನಂಬಿಕೆಗಳಿಗೂ ಇತರರಲ್ಲಿ ಕಂಡು ಬರುವ ನಂಬಿಕೆಗಳಿಗೂ ಸಾಮ್ಯತೆ ಕಂಡುಬಂದರೂ ಕೆಲವೊಂದು ನಂಬಿಕೆಗಳು ಭಿನ್ನವಾಗಿ ಕಂಡುಬರುತ್ತವೆ. ಅವುಗಳನ್ನು ಧಾರ್ಮಿಕ ನಂಬಿಕೆಗಳು, ಗೃಹನಂಬಿಕೆಗಳು, ಪ್ರಾಣಿಗಳಿಗೆ ಸಂಬಂಧಿಸಿದ ನಂಬಿಕೆಗಳು, ಪಕ್ಷಿಗಳಿಗೆ ಸಂಬಂಧಿಸಿದ ನಂಬಿಕೆಗಳು, ಹೆಣ್ಣಿಗೆ ಸಂಬಂಧಿಸಿದ ನಂಬಿಕೆಗಳು, ಕನಸಿಗೆ ಸಂಬಂಧಿಸಿದವು, ದಿನಗಳಿಗೆ ಸಂಬಂಧಿಸಿದವು, ವಸ್ತುಗಳಿಗೆ ಸಂಬಂಧಿಸಿದವು ಮತ್ತು ಸಂಕೀರ್ಣ ನಂಬಿಕೆಗಳೆಂದು ವರ್ಗೀಕರಿಸಿ ಪ್ರಸ್ತುತ ಲೇಖನದಲ್ಲಿ ಅವಲೋಕಿಸಲಾಗಿದೆ.

ಧಾರ್ಮಿಕ ನಂಬಿಕೆಗಳು

೧ ಕಾಬಾ ದಿಕ್ಕಿಗೆ ಕಾಲು ಚಾಚಿ ಮಲಗಬಾರದು : ಯಾಕೆಂದರೆ ಕಾಬಾ ಮುಸ್ಲಿಮರ ಪವಿತ್ರ ಮಂದಿರ 'ಖಿಬ್ಲಾ' ಎಂದು ಕರೆಯುವ ಈ ದಿಕ್ಕಿಗೆ ಕಾಲು ಚಾಚಿ ಮಲಗಿದರೆ ಅಗೌರವ ತೋರಿಸಿದಂತೆ ಎಂಬ ನಂಬಿಕೆಯಿದೆ.

೨ ಮುಸ್ಸಂಜೆಯಲ್ಲಿ ಮಲಗಬಾರದು.

೩ ಮಲಗುವಾಗ ಮುಖ ಪೂರ್ತಿ ಹೊದಿಕೆ ಹೊದ್ದು ಮಲಗಬಾರದು. ಸತ್ತವರನ್ನು ಮುಖ ಪೂರ್ತಿ ಹೊದಿಕೆಯಿಂದ ಮುಚ್ಚುವ ಸಂಪ್ರದಾಯ ಮುಸ್ಲಿಮರಲ್ಲಿ ಇರುವುದರಿಂದ ಜೀವಂತ ವ್ಯಕ್ತಿ ಮುಖವನ್ನು ಪೂರ್ತಿ ಮುಚ್ಚಿಕೊಂಡು ಮಲಗಬಾರದು. ವೈಜ್ಞಾನಿಕ ವಾಗಿ ನೋಡಿದರೆ ನಿದ್ರಿಸುತ್ತಿರುವವನಿಗೆ ಶುದ್ಧಗಾಳಿಯ ಕೊರತೆ ಉಂಟಾಗದಿರಲಿ ಎಂಬುದಾಗಿದೆ.

೪ ಮಲಗಿರುವ ಮಗುವನ್ನು ದಾಟಬಾರದು : ಮಗು ದೇವರ ಪ್ರತಿರೂಪ ಎಂದು ನಂಬುವ ಮುಸ್ಲಿಮರು ದೇವದೂತರು (ಫಿರಿಸ್ತೆ) ಮಕ್ಕಳ ಬಳಿ ಸದಾ ಇರುತ್ತಾರೆ ಎಂದು ಭಾವಿಸುವುದರಿಂದ ಮಕ್ಕಳನ್ನು ದಾಟಿದರೆ ದೇವದೂತರನ್ನು ದಾಟಿದಂತೆ ಎಂಬ ನಂಬಿಕೆ.

೫ ಆಕಳಿಸುವಾಗ ಎತ್ತರ ಸ್ವರದಲ್ಲಿ ಆಕಳಿಸಬಾರದು.
ಇಬ್ಲೀಸ್ (ಕೆಟ್ಟ ಪಿಶಾಚಿ) ಮನುಷ್ಯನ ಬಾಯೊಳಗೆ ಆಕಳಿಕೆ ಮೂಲಕ ಪ್ರವೇಶಿಸುತ್ತದೆ ಎಂದು ನಂಬುವ ಮುಸ್ಲಿಮರು ಆಕಳಿಕೆ ಬಂದಾಗ ಬಾಯಿಗೆ ಕೈ ಅಡ್ಡ ಹಿಡಿದು ಸಣ್ಣಗೆ ಆಕಳಿಸಿ 'ಅಸ್ತಗಫಿರುಲ್ಲಾ' ಎನ್ನುತ್ತಾರೆ. ಇದರಿಂದ ಇಬ್ಲೀಸ್ ಬಾಯೊಳಗೆ ಪ್ರವೇಶಿಸುವುದಿಲ್ಲ ಎನ್ನುತ್ತಾರೆ.

೬ ಊಟ ಮಾಡುವ ಸಂದರ್ಭದಲ್ಲಿ ತಟ್ಟೆಯಲ್ಲಿನ ಅನ್ನವನ್ನು ಒಂದು ಅಗುಳು ಬಿಡದೆ ಉಣ್ಣ ಬೇಕು. 'ರಿಝುಕ್' ಎಂದು ಕರೆಯುವ ಅನ್ನಾಹಾರವು ಪವಿತ್ರವಾದುದು ಎಂಬ ನಂಬಿಕೆಯುಳ್ಳ ಮುಸ್ಲಿಮರು ಅದನ್ನು ಹಾಳುಮಾಡಬಾರದು ಎನ್ನುತ್ತಾರೆ. ಪ್ರತೀ ಒಂದು ಅಗುಳಿಗೂ ಸಾರ್ಥಕತೆಯ ಹಂಬಲವಿರುವುದರಿಂದ ಅಕಸ್ಮಾತ್ ಹಾಳಾದರೆ ವ್ಯರ್ಥವಾದರೆ ಅದು ಶಪಿಸುತ್ತದೆ ಎಂದು ನಂಬುತ್ತಾರೆ.

೭ ಊದುಕಡ್ಡಿಯನ್ನು ಅಥವಾ ಬಾಳೆಹಣ್ಣಿಗೆ ಚುಚ್ಚಿಡಬಾರದು. ಇದು ಶ್ರಾದ್ಧ ಸಂದರ್ಭದಲ್ಲಿ ಹೊರತು ಪಡಿಸಿ ಬೇರೆ ಸಂದರ್ಭದಲ್ಲಿ ನಿಷಿದ್ಧ.

೮ ಮಲಗಿರುವ ಮಗುವನ್ನು ಮುದ್ದಿಸುವುದಾಗಲಿ, ಬಟ್ಟೆ ತೆಗೆಯುವುದಾಗಲಿ, ಅಥವಾ ತೊಡಿಸುವುದಾಗಲಿ, ಉಗುರು ಕತ್ತರಿಸುವುದಾಗಲಿ ಮಾಡಕೂಡದು, ಇವು ಸತ್ತ ವ್ಯಕ್ತಿಗೆ ಮಾಡುವ ವಿಧಿಗಳಾಗಿವೆ. ವಾಸ್ತವದಲ್ಲಿ ಇದರಿಂದ ಗಾಢ ನಿದ್ದೆಯಲ್ಲಿರುವ ಮಗುವಿಗೆ ನಿದ್ರಾಭಂಗವಾಗುತ್ತದೆ ಎಂಬ ಆಶಯವೇ ಪ್ರಧಾನವಾಗಿದೆ.

೯ ಪೊರಕೆ ಮುಟ್ಟಿದ ಕೈಯಲ್ಲಿ ಮಗುವನ್ನಾಗಲೀ ಯಾವುದೇ ವಸ್ತುವನ್ನಾಗಲೀ ಮುಟ್ಟ ಬಾರದು. ಪೊರಕೆಯಲ್ಲಿ 'ಇಬ್ಲೀಸ್' ಇರುತ್ತದೆ ಎಂಬ ನಂಬಿಕೆಯಿದೆ.

೧೦ ನೀರೊಲೆಯ ಹಂಡೆಯನ್ನು ಖಾಲಿ ಬಿಡಬಾರದು; ಹಂಡೆಯಲ್ಲಿನ ನೀರನ್ನು ಸಂಪೂರ್ಣವಾಗಿ ಖಾಲಿಮಾಡಿ ಸ್ನಾನ ಮಾಡಕೂಡದು; ನೀರೊಲೆಯಲ್ಲಿ ಒಂಟಿ ಕಟ್ಟಿಗೆ ಇರಕೂಡದು; ಚಾಪೆಯನ್ನು ಸುತ್ತಿ ನೆಟ್ಟಗೆ ನಿಲ್ಲಿಸಬಾರದು; ಒಂದು ಮನೆಯನ್ನು ಇಬ್ಬರು ಸೇರಿ ಗುಡಿಸಬಾರದು - ಇವೆಲ್ಲವೂ ಸತ್ತ ಮನೆಯ ಲಕ್ಷಣಗಳಾಗಿವೆ.

೧೧ ರಾತ್ರಿ ನಿದ್ರಿಸುವಾಗ ಕೋಣೆಯನ್ನು ಕತ್ತಲು ಮಾಡಿ ಮಲಗಬಾರದು. ಇದು ಗೋರಿಯಲ್ಲಿ ಮಲಗುವವರಿಗೆ ಸಮ ಎಂದು ನಂಬುತ್ತಾರೆ.

೧೨ ಸ್ನಾನ ಮಾಡಿದ ಬಳಿಕ ಹಾಗೆಯೇ ಏನನ್ನೂ ತಿನ್ನದೆ ಕುಡಿಯದೆ ಮನೆಯ ಹೊಸ್ತಿಲು ದಾಟಬಾರದು. ಹೀಗೆ ಹೊಸ್ತಿಲು ದಾಟುವವರು ಸತ್ತವರಿಗೆ ಸಮ.

೧೩ ಪೊರಕೆ ಕಡ್ಡಿಯಲ್ಲಿ ಹೊಡೆಯಬಾರದು.

ಗೃಹಕ್ಕೆ ಸಂಬಂಧಿಸಿದ ನಂಬಿಕೆಗಳು

೧ ಮನೆಯೊಳಗೆ ಖಾಲಿ ಕೊಡ ಇಡಬಾರದು. ಇದು ಅಪಶಕುನದ ಸಂಕೇತ.

೨ ಬಾಗಿಲ ಚಿಲಕ ಬಡಿದರೆ ಮನೆಯಲ್ಲಿ ಜಗಳವಾಗುತ್ತದೆ.

೩ ಮನೆಯೊಳಗೆ ಉಗುರು ಕತ್ತರಿಸಿದರೆ ದರಿದ್ರ ಬರುತ್ತದೆ.

೪ ಮನೆಯೊಳಗೆ ಪೊರಕೆ ಮತ್ತು ಚಪ್ಪಲಿ ಒಟ್ಟಿಗಿಡಬಾರದು.

೫ ಮನೆಯ ಜಂತಿಯಲ್ಲಿ ಗುಬ್ಬಚ್ಚಿ ಮನೆ ಕಟ್ಟಿದರೆ ಅದು ಶುಭದ ಸಂಕೇತ.

೬ ನಮಾಜಿನ ಕರೆ ಕೊಡುವಾಗ (ಅಝಾ ಕೂಗುವಾಗ) ಮನೆ ಬಾಗಿಲು ಮುಚ್ಚಬೇಕು. ಹೊರಗಡೆ ಸುಳಿದಾಡುತ್ತಿರುವ ಪಿಶಾಚಿಗಳು 'ಅಲ್ಲಾ' ಎಂದು ಕೇಳುತ್ತಲೆ ಸಿಕ್ಕ ಸಿಕ್ಕ ಮನೆ ಪ್ರವೇಶಿಸುತ್ತವೆ ಎಂದು ನಂಬುತ್ತಾರೆ.

೭ ಅಕ್ಕಿ ಮನೆಯ ಅಭಿವೃದ್ಧಿ (ಬರ್ಕತ್) ಸಂಕೇತ ಎಂದು ಭಾವಿಸುವ ಮುಸ್ಲಿಮರು ಪರರ ಮನೆಗೆ ಅಕ್ಕಿಯನ್ನು ಸಾಲವಾಗಿ ಕೊಡುವುದಿಲ್ಲ. ಆದರೆ ದಾನ ಮಾಡುತ್ತಾರೆ.

೮ ಮನೆಯ ಕಿಟಕಿ ಬಾಗಿಲು ಖಿಬ್ಲಾ (ಪಶ್ಚಿಮ) ದಿಕ್ಕಿಗಿದ್ದರೆ ಶುಭ ಲಕ್ಷಣ.

೯ ಮುಸ್ಸಂಜೆಯಲ್ಲಿ ಮನೆಕಸ ಗುಡಿಸಬಾರದು ದರಿದ್ರ ಬರುತ್ತದೆ.

೧೦ ಮನೆ ಹೊಸ್ತಿಲು ಒಳಗಡೆ ನಿಂತು ಹಣವನ್ನು ಆಚೆ ಇರುವವರಿಗೆ ಕೊಡಬಾರದು. ಹಣ ತೆಗೆದುಕೊಂಡವರಿಗೆ ಅಪಶಕುನ.

ವಸ್ತುಗಳಿಗೆ ಸಂಬಂಧಿಸಿದ ನಂಬಿಕೆಗಳು

೧ ಗಾಜಿನ ವಸ್ತುಗಳು ಕೈತಪ್ಪಿ ಬಿದ್ದು ಒಡೆದರೆ ಮುಂದೆ ಆಗಲಿದ್ದ ಅಪಶಕುನವೊಂದು ನಿವಾರಣೆ ಆದಂತೆ.

೨ ಹೊಸಕತ್ತಿ ತಂದರೆ ಅದನ್ನು ಹಾಗೆಯೇ ಉಪಯೋಗಿಸದೆ ಕತ್ತಿಯ ತುದಿಯನ್ನು ನೆಲಕ್ಕೆ ಮೂರು ಬಾರಿ ಹೊಡೆಯಬೇಕು.

೩ ಊಟದ ತಟ್ಟೆಯನ್ನು; ಮೊರವನ್ನು ಕಾಲಿನಿಂದ ಒದೆಯಬಾರದು.

೪ ಓದುವ ಪುಸ್ತಕಗಳನ್ನು ಸುಡಬಾರದು.

ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ನಂಬಿಕೆಗಳು

೧ ಮೂರು ಗಂಡುಮಕ್ಕಳ ಬಳಿಕ ಹುಟ್ಟಿದ ಹೆಣ್ಣುಮಗುವನ್ನು ಸಾಮಾನ್ಯವಾಗಿ ಸೊಸೆಯನ್ನಾಗಿ ಮಾಡಿಕೊಳ್ಳುವುದಿಲ್ಲ. ಅಂತಹವರು ಸೊಸೆಯಾಗಿ ಬಂದ ಮನೆಗೆ ಅನಿಷ್ಟ ಎಂಬ ನಂಬಿಕೆಯಿದೆ.

೨ ಹೆಣ್ಣುಮಕ್ಕಳ ಕಾಲುಬೆರಳಿನ ತೋರುಬೆರಳು ಹೆಬ್ಬೆರಳಿಗಿಂತ ಉದ್ದ ಇದ್ದರೆ ಆಕೆ ಜೋರು ಸ್ವಭಾವದವಳೆಂದು ಭಾವನೆಯಿದೆ.

೩ ಹೆಣ್ಣುಮಕ್ಕಳ ಹಣೆ ಅಗಲ ಇದ್ದರೆ ಅದೃಷ್ಟದ ಸಂಕೇತ.

೪ ಹೆಣ್ಣುಮಕ್ಕಳು ಕಾಯಿಬೆಲ್ಲ ಸೇರಿಸಿ ತಿನ್ನಬಾರದು.

೫ ಹೆಣ್ಣುಮಕ್ಕಳು ಎತ್ತರ ಸ್ವರದಲ್ಲಿ ಮಾತನಾಡಬಾರದು ಮತ್ತು ನಗಬಾರದು.

೬ ಹೆಣ್ಣುಮಕ್ಕಳು ಕಾಲನ್ನು ಸದ್ದುಮಾಡಿ ನಡೆಯಬಾರದು.

೭ ಹೆಣ್ಣುಮಕ್ಕಳು ಕುರ್ಚಿಯಲ್ಲಿ ಕೂತಿರುವಾಗ ತೊಡೆಗಳನ್ನು ಅಲುಗಾಡಿಸಬಾರದು.

೮ ಮದುವೆಹೆಣ್ಣಿಗೆ ಶಾಸ್ತ್ರದ ಮಡಿನೀರು ಹಾಕಿದ ಮೇಲೆ ಆಕೆಯನ್ನು ಹೊರಗಿನವರು ಮುಟ್ಟಬಾರದು.

೯ ಊಟಕ್ಕೆ ಕುಳಿತುಕೊಳ್ಳುವಾಗ ಹೆಣ್ಣುಮಕ್ಕಳು ಮಂಡಿಯನ್ನು ಮುಚ್ಚಬೇಕು.

೧೦ ಬಸುರಿಹೆಣ್ಣಿನ ಆಸೆಗಳು ಬಾಕಿ ಇದ್ದರೆ ಆಕೆಯ ಹೆರಿಗೆ ಕಷ್ಟವಾಗುತ್ತದೆ.

೧೧ ಬಸುರಿ, ಬಾಣಂತಿ, ಋತುಮತಿಯಾದವರು ಮುಸ್ಸಂಜೆಯಲ್ಲಿ ತಿರುಗಾಡಬಾರದು.

೧೨ ಬಸುರಿ ಅಂಟಿಕೊಂಡಿರುವ ಜೋಡಿ ಬಾಳೆಹಣ್ಣು ತಿನ್ನಬಾರದು.

ವಾರದ ದಿನಗಳಿಗೆ ಸಂಬಂಧಿಸಿದಂತೆ

೧ ಮದುವೆ ಹೆಣ್ಣನ್ನು ಅತ್ತೆಮನೆಯಿಂದ ತವರಿಗೆ ಮಂಗಳವಾರ ಕಳುಹಿಸಿಕೊಡಬಾರದು.

೨ ಮಂಗಳವಾರ ಹುಟ್ಟಿದ ಮಗು ಮನೆಗೆ ಒಳ್ಳೆಯದು.

೩ ರಂಜಾನ್ ಹಬ್ಬ ಮೂರು ವರ್ಷವೂ ಎಡೆಬಿಡದೆ ಶುಕ್ರವಾರ ಬಂದರೆ ಅದು ಅನಿಷ್ಟದ ಸಂಕೇತ.

೪ ಶುಕ್ರವಾರ ಸತ್ತವರಿಗೆ ಸ್ವರ್ಗ ಸಿಗುತ್ತದೆ.

೫ ಮಂಗಳವಾರ ನಾವು ತೊಟ್ಟಿದ್ದ ಹಳೆ ಬಟ್ಟೆಗಳನ್ನು ದಾನ ಮಾಡಬಾರದು.

೬ ಮಂಗಳವಾರ ಕ್ಷೌರ ಮಾಡಿಸಬಾರದು.

ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ನಂಬಿಕೆಗಳು

೧ ಹಂದಿಯನ್ನು ಕಣ್ಣೆತ್ತಿ ನೋಡಬಾರದು.

೨ ಓತಿಕ್ಯಾತ, ಗೂಬೆ ಅಪಶಕುನದ ಸಂಕೇತ.

೩ ನಾಯಿ ಯಾವ ದಿಕ್ಕಿಗೆ ಮುಖ ಇಟ್ಟು ಊಳಿಡುತ್ತದೆಯೋ ಆ ದಿಕ್ಕಿನಿಂದ ಸಾವಿನ ಸುದ್ದಿ ಬರುತ್ತದೆ ಎಂಬ ನಂಬಿಕೆಯಿದೆ.

೪ ಮುಸ್ಸಂಜೆಯಲ್ಲಿ ನಾಯಿ ಊಳಿಟ್ಟರೆ ದೆವ್ವ ಪಿಶಾಚಿಗಳು ಅದರ ಕಣ್ಣಿಗೆ ಗೋಚರಿಸುತ್ತವೆ ಎಂಬ ನಂಬಿಕೆಯಿದೆ.

೫ ಕೊತ್ತಿ (ಬೆಕ್ಕು) ಯಾರ ಮನೆ ಬಳಿ ಕಚ್ಚಾಡುತ್ತದೆಯೋ ಆ ಮನೆಯಲ್ಲಿ ಜಗಳವಾಗುತ್ತದೆ ಎಂಬ ನಂಬಿಕೆಯಿದೆ.

೬ ಹಲ್ಲಿ ಹೆಗಲ ಮೇಲೆ ಬೀಳಬಾರದು.

೭ ಬೆಕ್ಕನ್ನು ಕೊಲ್ಲಬಾರದು.

೮ ಜೇಡವನ್ನು ಕೊಲ್ಲಬಾರದು.

೯ ಕಾಗೆ ಮನೆಯೊಳಗೆ ಪ್ರವೇಶಿಸಬಾರದು.

೧೦ ಕಾಗೆ ತಲೆಗೆ ಕುಕ್ಕಿದರೆ ಶತ್ರುಗಳಿದ್ದಾರೆ ಎಂಬ ಸೂಚನೆ.

೧೧ ಹಲ್ಲಿ ಮನೆ ಜಂತಿಯಲ್ಲಿ ಲೊಚಗುಟ್ಟಿದರೆ ನಮ್ಮ ಬಗ್ಗೆ ಚಾಡಿಮಾತುಗಳು ನಡೆಯುತ್ತಿವೆ ಎಂದು ನಂಬಿಕೆ.

ಕನಸಿಗೆ ಸಂಬಂಧಿಸಿದಂತೆ ನಂಬಿಕೆಗಳು

೧ ಕನಸಿನಲ್ಲಿ ಹಾವು ಕಾಣಿಸಿಕೊಂಡರೆ ಹರಕೆ ಬಾಕಿಯಿದೆ ಎಂಬ ನಂಬಿಕೆ.

೨ ಕನಸಿನಲ್ಲಿ ಮಾಂಸ ತಿನ್ನಬಾರದು.

೩ ಕನಸಿನಲ್ಲಿ ತೆಂಗಿನ ಮರ, ನೀರು ಕಂಡರೆ ಶುಭದ ಸಂಕೇತ.

೪ ಕನಸಿನಲ್ಲಿ ಸಾವಿನ ದರ್ಶನವಾದರೆ ನನಸಿನಲ್ಲಿ ಹುಟ್ಟಿದ ಸುದ್ದಿ ಬರುತ್ತದೆ.

೫ ಕನಸಿನಲ್ಲಿ ಮದುವೆ ಸಮಾರಂಭ ನಡೆದರೆ ನನಸಲ್ಲಿ ಸಾವಿನ ಸುದ್ದಿ ಬರುತ್ತದೆ.

೬ ಕನಸಿನಲ್ಲಿ ಮಣ್ಣು ನೋಡಿದರೂ ಸಾವಿನ ಸುದ್ದಿ ಬರುತ್ತದೆ.

ಆಹಾರಕ್ಕೆ ಸಂಬಂಧಿಸಿದ ನಂಬಿಕೆಗಳು

೧ ಅನ್ನವನ್ನು ತುಳಿಯಬಾರದು.

೨ ಊಟದಲ್ಲಿ ಗಂಡಸರಿಗೆ ಕಲ್ಲು, ಕೂದಲು ಸಿಗಬಾರದು.

೩ ತುಂಬಿದ ಪಾತ್ರೆಯಲ್ಲಿನ ಅನ್ನವನ್ನು ಹೆಂಡತಿಯಾದವಳು ಮೊದಲು ಉಣ್ಣದೆ, ಗಂಡನ ಹೆಸರಲ್ಲಿ ಒಂದು ತಟ್ಟೆ ತೆಗೆದಿಟ್ಟು ಉಣ್ಣಬೇಕು.

೪ ಅನ್ನದ ಪಾತ್ರೆಯನ್ನು ರಾತ್ರಿಯೇ ಖಾಲಿ ಮಾಡಿ ತೊಳೆದಿಡಬಾರದು.

೫ ಅಕ್ಕಿ ಮತ್ತು ಹಾಲನ್ನು ಅಳೆಯುವಾಗ ಮೋಸ ಮಾಡಬಾರದು.

೬ ಊಟವಾದ ಬಳಿಕ ಮೈಮುರಿಯಬಾರದು.

೭ ಮುಂಜಾನೆ ಎಂಜಲು ಮಾಡದ ದೋಸೆಯನ್ನು ಮನೆಮಂದಿಯ ತಲೆ ನಿವಾಳಿಸಿ ಕಾಗೆಗಳಿಗೆ ಹಾಕಿದರೆ ದರಿದ್ರ ಹೊರಟು ಹೋಗುತ್ತದೆ.

೮ ಅನ್ನಕ್ಕೆ ಅಕ್ಕಿ ತೊಳೆದು ಹಾಕುವಾಗ ಅಕ್ಕಿ ಕೆಳಗೆ ಬಿದ್ದರೆ ಯಾರೋ ಹಸಿದಿದ್ದಾರೆ ಎಂಬ ನಂಬಿಕೆಯಿದೆ.

೯ ಹಸಿದು ಬಂದವನಿಗೆ ಅನ್ನ ಹಾಕಿದರೆ ಪುಣ್ಯ ಬರುತ್ತದೆ.

೧೦ ಊಟ ಮಾಡಲು ಕೂತಾಗ ಯಾರಾದರೂ ಬಂದು ಕರೆದರೆ ಎದ್ದು ಬರಬಾರದು. ನಾವು ಬಿಟ್ಟು ಹೋದ ಅನ್ನವನ್ನು 'ಇಬ್ಲೀಸ್' ತಿನ್ನುತ್ತದೆ.

೧೧ ತುತ್ತನ್ನು ತೂಕ ಮಾಡಬಾರದು.

೧೨ ತೋರುಬೆರಳು ಬಿಟ್ಟು ಊಟ ಮಾಡಬಾರದು.

ಶಾರೀರಿಕ ಅಂಗಗಳಿಗೆ ಸಂಬಂಧಿಸಿದ ನಂಬಿಕೆಗಳು

೧ ಮೂಗು ತುರಿಸುತ್ತಿದ್ದರೆ ಯಾರೋ ನಮ್ಮನ್ನು ಬೈಯುತ್ತಿದ್ದಾರೆ ಎಂಬ ನಂಬಿಕೆ.

೨ ಆಕಳಿಕೆ ಬಂದರೆ ನಮ್ಮ ಬಗ್ಗೆ ಯಾರೋ ಮಾತನಾಡುತ್ತಿದ್ದಾರೆಂದು ನಂಬುತ್ತಾರೆ.

೩ ಏನನ್ನಾದರೂ ತಿನ್ನುವಾಗ ಕೆಮ್ಮು ಬಂದರೆ ನಮ್ಮನ್ನು ಯಾರೋ ನೆನಪಿಸುತ್ತಿದ್ದಾರೆಂಬ ನಂಬಿಕೆಯಿದೆ.

೪ ತಲೆಯ ಮೇಲಿಂದ ದೀಪ ಹಾಯಿಸಬಾರದು.

೫ ಉದುರಿದ ಹಲ್ಲನ್ನು ತೆಂಗಿನ ಮರದ ಬುಡಕ್ಕೆ ಹಾಕಬೇಕು ಅಥವಾ ಮನೆಯ ಚಪ್ಪರದ ಮೇಲೆ ಬಿಸಾಕಬೇಕು. ಹಾಗೆ ಮಾಡದಿದ್ದಲ್ಲಿ ಹಲ್ಲು ಮತ್ತೆ ಬರುವುದಿಲ್ಲ.

೬ ತುಟಿಯ ಮೇಲ್ಭಾಗ ತುರಿಸಿದರೆ ಯಾರೋ ಪುರುಷ ಅತಿಥಿ ಮನೆಗೆ ಆಗಮಿಸುತ್ತಾರೆಂದು ಅರ್ಥ.

೭ ಹೊಸ್ತಿಲಲ್ಲಿ ಒಂದೂವರೆ ಕಾಲಲ್ಲಿ ನಿಲ್ಲಬಾರದು.

೮ ಬಲಗೈ ತುರಿಸಿದರೆ ಲಕ್ಷ್ಮೀ(ಹಣ) ಕೈ ಸೇರುತ್ತದೆ.

೯ ಉಗುರನ್ನು ಬಾಯಲ್ಲಿ ಕಚ್ಚಬಾರದು.

೧೦ ಮುಖಕ್ಕೆ ಅರಸಿನ ಹಚ್ಚಿ ಹೊರಗೆ ಬರಬಾರದು.

೧೧ ಕಾಲಿನ (ಪಾದದಡಿ) ತುರಿಸಿದರೆ ಪ್ರಯಾಣ ಮಾಡುವ ಸಂದರ್ಭ ಬರುತ್ತದೆ.

೧೨ ನಾಲಗೆಯ ಮೇಲೆ ಮಚ್ಚೆ ಇರುವವರು ಶಾಪ ಕೊಡಬಾರದು.

೧೩ ಕಣ್ಣಿನ ರೆಪ್ಪೆ(ಎಡ) ಹಾರಿದರೆ ಅಳುವ ಸಂದರ್ಭ ಬರುತ್ತದೆ ಎಂದೂ ಬಲ ರೆಪ್ಪೆ ಹಾರಿದರೆ ಯಾರನ್ನೋ ನೋಡುವ ಸಂದರ್ಭ ಬರುತ್ತದೆ.

೧೪ ಹುಬ್ಬುಗಳು ತುರಿಸಿದರೆ ದರಿದ್ರ ಬರುತ್ತದೆ.

೧೫ ಎಡ ಮತ್ತು ಬಲ ಭುಜದಲ್ಲಿ 'ಫಿರಿಸ್ತೆ' ದೇವಧೂತರು ಇದ್ದಾರೆಂದು ಇವರು ಒಳಿತು ಕೆಡುಕನ್ನು ಪಟ್ಟಿ ಮಾಡುವರೆಂಬ ನಂಬಿಕೆಯಿದೆ.

ಇತರೆ ನಂಬಿಕೆಗಳು

೧ ಹಾಲುಣಿಸುವ ತಾಯಿ ಹೊರಗೆ ಹೋಗಿ ಬಂದಾಗ ಮಗುವಿಗೆ ಹಾಲುಣಿಸುವ ಮುನ್ನ ಹಾಲನ್ನು ಗೋಡೆಗೆ ಹಿಂಡಿ ಆಮೇಲೆ ಕುಡಿಸಬೇಕು.

೨ ತಾಯಿಯ ಹಾಲಿನ ಋಣವನ್ನು ಮಕ್ಕಳು ಆಕೆ ಸತ್ತಾಗ ಆ ಋಣದಿಂದ ಮುಕ್ತಮಾಡು ಎಂದು ಕೇಳಿದಾಗ ಮಾತ್ರ ಮಕ್ಕಳು ತಾಯಿಯ ಹಾಲಿನ ಋಣದಿಂದ ಮುಕ್ತರೆಂಬ ನಂಬಿಕೆಯಿದೆ.

೩ ತಂದ ಹೊಸ ಬಟ್ಟೆಯನ್ನು ಹಾಗೇ ತೊಡದೆ ಮೊದಲಿಗೆ ಎರಡು ಹನಿ ನೀರು ಚಿಮುಕಿಸಿ ತೊಡಬೇಕು.

೪ ಮನೆಯೊಳಗೆ ನೆಟಿಕೆ ಮುರಿಯಬಾರದು.

೫ ರಾತ್ರಿ ಹೊತ್ತು ತಲೆ ಬಾಚಬಾರದು.

೬ ರಾತ್ರಿ ಹೊತ್ತು ಕನ್ನಡಿ ನೋಡಬಾರದು.

೭ ತೆಂಗಿನಕಾಯಿಯ ಕಣ್ಣನ್ನು ತೂತುಮಾಡಿ ನೀರು ಕುಡಿಯಬಾರದು.

೮ ಮಾಂಸದ ಸಾರನ್ನು ಇನ್ನೊಬ್ಬರ ಮನೆಗೆ ಕಳುಹಿಸುವಾಗ ಅದರ ಜೊತೆಗೆ ಅರಸಿನ ಕೊನೆ ಉಪ್ಪಿನಹರಳು ಮೆಣಸಿನಕಾಯಿ ಇಟ್ಟು ಕಳುಹಿಸಬೇಕು.

೯ ಉಪ್ಪನ್ನು ಸಾಲವಾಗಿ ಪಡೆಯಬಾರದು.

೧೦ ವಿವಾಹಿತ ಹೆಣ್ಣು ಋತುಮತಿಯಾದವಳೊಂದಿಗೆ (ಏಳುದಿವಸ) ಮತ್ತು ಬಾಣಂತಿ (ನಲ್ವತ್ತು ದಿವಸ) ಯೊಂದಿಗೆ ಗಂಡನಾದವನು ಸಂಭೋಗ ನಡೆಸಬಾರದು.

೧೧ ಹಗಲಲ್ಲಿ ದಂಪತಿಗಳು ಸಂಭೋಗ ನಡೆಸಬಾರದು ಹಾಗೇನಾದರೂ ಆದರೆ ಹುಟ್ಟುವ ಮಕ್ಕಳು ಅಂಗವಿಕಲರಾಗುತ್ತಾರೆ ಎಂಬ ನಂಬಿಕೆಯಿದೆ.

೧೨ ಸಂಭೋಗ ನಡೆಸಿದ ದಂಪತಿಗಳು ಮುಂಜಾನೆ ತಲೆ ಮೇಲಿಂದ ಹಕ್ಕಿಗಳು ಹಾರುವ ಮುನ್ನ ಕಡ್ಡಾಯ ಸ್ನಾನ (ಗುಸಲ್ ಸ್ನಾನ) ಮಾಡಬೇಕು.

೧೩ ಕನಸಿನಲ್ಲಿ ಸ್ಖಲನವಾದರೂ ಕಡ್ಡಾಯ ಸ್ನಾನ ಮಾಡಬೇಕು.

೧೪ ವಜೂ ಮಾಡದೆ ಖುರಾನ್ ಸ್ಪರ್ಶಮಾಡಬಾರದು.

೧೫ ದರ್ಗಾಕ್ಕೆ ಭೇಟಿ ಕೊಟ್ಟ ಮೇಲೆ ಬೆನ್ನು ಹಾಕಿ ಹಿಂದಿರುಗಬಾರದು.

೧೬ ಮದುವೆ ಹೆಣ್ಣಿನ ತಲೆಯ ಮಲ್ಲಿಗೆಯನ್ನು ಕನ್ಯೆಯರು ಮುಡಿದರೆ ಬೇಗ ಮದುವೆ ಆಗುತ್ತದೆ.

೧೭ ವಿವಾಹಿತೆಯ ತಲೆಯಲ್ಲಿ ಮಲ್ಲಿಗೆ ಹೂ ಬೇಗ ಬಾಡಿದರೆ ಆಕೆಯ ಅತ್ತೆ ಜೋರಿನ ಸ್ವಭಾವದವಳೆಂಬ ನಂಬಿಕೆಯಿದೆ.

೧೮ ಬೆಳಿಗ್ಗೆ ಎದ್ದ ಕೂಡಲೆ ತೆಂಗಿನ ಮರ ನೋಡಿದರೆ ಶುಭ ಸಂಕೇತ.

೧೯ ನಿದ್ದೆಯಿಂದ ಎದ್ದ ಮೇಲೆ ಮತ್ತೆ ಮಲಗಬಾರದು.

೨೦ ಸೆಗಣಿಯನ್ನು ತುಳಿಯಬಾರದು.

೨೧ ಗಂಡನ ಹೆಸರ್ಹಿಡಿಧು ಕರೆಯಬಾರದು.

ಒಟ್ಟನಲ್ಲಿ ಮುಸ್ಲಿಂ ಜನಪದ ನಂಬಿಕೆಗಳ ಹಿಂದೆ ಮೌಢ್ಯತೆ ಹಾಗು ವೈಜ್ಞಾನಿಕತೆ ಸಮ ಸಮವಾಗಿ ಕಂಡುಬರುತ್ತದೆ. ಬೇರೆ ಬೇರೆ ಪ್ರದೇಶಗಳಿಂದ ಆಗಮಿಸಿ ನೆಲೆಸಿದ ಮುಸ್ಲಿಂ ಜನಪದ ನಂಬಿಕೆಗಳ ಮೇಲೆ ಹಿಂದೂ ಜನಪದ ನಂಬಿಕೆಗಳ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ.

ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರು

ಏ. ಪ್ರಸನ್ನ ಕುಮಾರ್

ಭಾರತದ ಬಹುತೇಕ ಮಹಾರಾಜರು ಮನುವಾದಿ ಶ್ರೇಣೀಕೃತ ವ್ಯವಸ್ಥೆಯೊಳಗಡೆಯೇ ರಾಜ್ಯಭಾರವನ್ನು ನಡೆಸುತ್ತಿದ್ದರು. ಈ ವ್ಯತ್ಯಾಸವನ್ನು ಸಮಾನತೆಯ ಕಡೆಗೆ ಚಲಿಸುವಂತೆ ಮಾಡಲು ಯಾರೂ ಪ್ರಯತ್ನಿಸಲಿಲ್ಲ. ಬ್ರಿಟಿಷರು ಭಾರತಕ್ಕೆ ಆಗಮಿಸಿದ ಬಳಿಕವೂ ತಮ್ಮ ಅಧಿಕಾರಕ್ಕಾಗಿ ಈ ರಾಜರು ಬ್ರಿಟಿಷರ ವಿರುದ್ಧ ಹೋರಾಡಿದರೇ ಹೊರತು ಸಮಾನತೆಯ ಸಮಾಜವನ್ನು ಸ್ಥಾಪಿಸಲಿಕ್ಕಲ್ಲ. ಆದರೆ ಮೈಸೂರು ಪ್ರಾಂತ್ಯದ ಮಹಾರಾಜರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಇದಕ್ಕೆ ಹೊರತಾಗಿದ್ದಾರೆ. ಇದೇ ರೀತಿಯ ಮತ್ತೊಬ್ಬ ಮಹಾರಾಜರೆಂದರೆ ಕೊಲ್ಲಾಪುರದ ದೊರೆ ಶಾಹುಮಹಾರಾಜರು. ಇವರು ಮನುವಾದಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು, ಈ ವ್ಯವಸ್ಥೆಯಲ್ಲಿ ತಳಕ್ಕೆ ತುಳಿಯಲ್ಪಟ್ಟಿದ್ದ ಅಸ್ಪೃಶ್ಯರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರನ್ನು ಮೇಲೆತ್ತಲು ತಮ್ಮ ಜೀವನವನ್ನು ಮುಡಪಾಗಿಟ್ಟಿದ್ದಾರೆ.

ಭಾರತ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಮೈಸೂರು ರಾಜ್ಯದಲ್ಲಿ ೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಈ ಬಗೆಯ ಸಭೆಗಳು ಇತರ ಸಂಸ್ಥಾನಗಳಲ್ಲಿ ಸ್ಥಾಪಿಸಲು ಕಾರಣಕರ್ತರು ಮೈಸೂರಿನ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಮತ್ತು ಮಹಾರಾಣಿ ಶ್ರೀಮತಿ ಕೆಂಪನಂಜಮ್ಮಣ್ಣಿಯವರ ಗರ್ಭದಲ್ಲಿ ದಿನಾಂಕ ೦೪-೦೬-೧೮೮೪ರಂದು ನಾಲ್ವಡಿ ಕೃಷ್ಣರಾಜ ಒಡೆಯರು ಜನಿಸಿದರು. ಇವರ ನಂತರ ಮೂವರು ತಂಗಿಯರು ಮತ್ತು ಒಬ್ಬ ತಮ್ಮನು ಜನಿಸಿದರು. ಇವರ ವಿದ್ಯಾಭ್ಯಾಸಕ್ಕೆ ರಾಯಲ್ ಸ್ಕೂಲ್ ಎಂಬ ಪ್ರತ್ಯೇಕ ಪಾಠಶಾಲೆಯನ್ನು ಆರಂಭಿಸಿ ಪಾಠ ಹೇಳಲು ಅಂದಿನ ಪ್ರಸಿದ್ಧ ವಿದ್ವಾಂಸರನ್ನು ನೇಮಿಸಲಾಯಿತು. ಶಿಕ್ಷಣದ ಜೊತೆಗೆ ಕುದುರೆ ಸವಾರಿ, ಕ್ರೀಡೆ, ಅಂಗಸಾಧನೆ, ಚಿತ್ರಕಲೆ ಮತ್ತು ಸಂಗೀತ ಇವುಗಳನ್ನು ಹೇಳಿಕೊಡಲಾಯಿತು. ಆಗ ಸರ್ ಮಿರ್ಜಾ ಇಸ್ಮಾಯಿಲ್‌ರವರೂ ಇವರ ಸಹಪಾಠಿಯಾಗಿದ್ದರು. ಇಂಗ್ಲಿಷ್, ಉರ್ದು, ಪಾರ್ಸಿ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ರಾಜಕುಮಾರರು ಪಾಂಡಿತ್ಯಗಳಿಸಿದರು. ಬಾಲ್ಯದಲ್ಲೇ ಶಿಕ್ಷಣ ದೊರೆತದ್ದರಿಂದ ತಮ್ಮ ಜೀವನದುದ್ದಕ್ಕೂ ವೈಜ್ಞಾನಿಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡರು.

ತಂದೆ ಶ್ರೀಚಾಮರಾಜೇಂದ್ರ ಒಡೆಯರು ತಮ್ಮ ಉತ್ತರ ಭಾರತದ ಪ್ರವಾಸದಲ್ಲಿದ್ದಾಗ ಗಂಟಲು ಬೇನೆ ಉಂಟಾಗಿ ೧೮೯೪ರಲ್ಲಿ ಕಲ್ಕತ್ತದಲ್ಲಿ ಮರಣಹೊಂದಿದರು.

ಆಗ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ೧೦ ವರ್ಷ ವಯಸ್ಸು. ಸಂಪ್ರದಾಯದಂತೆ ೧೮೯೫ ಫೆಬ್ರುವರಿ ೧ ರಂದು ವೈಭವದಿಂದ ಪಟ್ಟಾಭಿಷೇಕ ನೆರವೇರಿತು. ಅಂದಿನ ವೈಸ್‌ರಾಯ್ ಎಲ್ಗಿನ್‌ರವರು ಇಂಡಿಯಾ ಸರ್ಕಾರದ ಆದೇಶದಂತೆ ಶ್ರೀ ಕೃಷ್ಣರಾಜ ಒಡೆಯರು ಪ್ರಾಪ್ತವಯಸ್ಸಿಗೆ ಬರುವವರೆಗೆ ಅವರು ತಾಯಿ ಶ್ರೀಮತಿ ಕೆಂಪನಂಜಮ್ಮಣ್ಣಿಯವರಿಗೆ ಮೈಸೂರು ಸಂಸ್ಥಾನದ ರೀಜಂಟರಾಗಿ ಅಧಿಕಾರ ವಹಿಸಿಕೊಟ್ಟರು. ಯುವರಾಜರಿಗೆ ೧೨ ವರ್ಷವಾದಾಗ ಅವರಿಗೆ ರಾಜೋಚಿತವಾದ ಉನ್ನತ ಶಿಕ್ಷಣವನ್ನು ಒದಗಿಸಲೆಂದು ಸರ್. ಎಂ. ಫ್ರೇಜರ್‌ರವರನ್ನು ಗೌರ್ನರ್ ಯುವರಾಜರ ಟ್ಯೂಟರ್ ಆಗಿಯೂ ಸರ್ಕಾರ ನೇಮಿಸಿತು. ಸರ್. ಫ್ರೇಜರ್ ಉತ್ತಮೋತ್ತಮ ಶಿಕ್ಷಣದ ಜೊತೆಗೆ ಪ್ರಾಪಂಚಿಕ ಅನುಭವ ದೊರೆಯಲೆಂದು ಇಂಡಿಯಾದ ಅನೇಕ ಪ್ರಾಂತ್ಯಗಳಿಗೆ ಕರೆದೊಯ್ದು ಹಲವಾರು ಗಣ್ಯ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟರು.

ಹೀಗೆ ರಾಜೋಚಿತ ಶಿಕ್ಷಣ ಮತ್ತು ಪ್ರಾಪಂಚಿಕ ಅನುಭವ ಪಡೆದ ನಾಲ್ವಡಿಯವರು ರಾಜ್ಯಾಧಿಕಾರ ಸ್ವೀಕರಿಸುವ ಹೊತ್ತಿಗೆ ಸಮಗ್ರವಾದ ಸ್ವತಂತ್ರ ಚಿಂತನೆಯುಳ್ಳ ಸಮರ್ಥವಾದ ವ್ಯಕ್ತಿಯಾಗಿ ರೂಪಗೊಂಡಿದ್ದರು. ೧೯೦೦ರ ಜೂನ್ ೬ ರಂದು ೧೬ ವರ್ಷದವರಾಗಿದ್ದಾಗ ಕಾಥೇವಾಡ ಸಂಸ್ಥಾನದ ವಾಣರಾಜ ವಂಶದ ರಾಣಾ ಶ್ರೀ ವಿಜಯನರಸಿಂಹರವರ ಪುತ್ರಿ ಪ್ರತಾಪ ಕುಮಾರಿ ದೇವಿಯವರೊಡನೆ ಅತ್ಯಂತ ವಿಜೃಂಭಣೆಯಿಂದ ಜಗನ್ಮೋಹಿನಿ ಅರಮನೆಯಲ್ಲಿ ವಿವಾಹವಾದರು. ಅನಂತರ ೧೯೦೨ ಆಗಸ್ಟ್ ೮ ರಂದು ೧೮ ವರ್ಷದವರಾದಾಗ, ಅಂದಿನ ಭಾರತದ ವೈಸ್‌ರಾಯ್ ಆಗಿದ್ದ ಲಾರ್ಡ್ ಕರ್ಜನ್‌ರವರು ಜಗನ್ಮೋಹನ ಅರಮನೆಯಲ್ಲಿ ನಡೆದ ಸುಂದರ ಸಮಾರಂಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಮೈಸೂರು ಪ್ರಾಂತ್ಯದ ಆಡಳಿತಾಧಿಕಾರವನ್ನು ವಹಿಸಿಕೊಟ್ಟರು.

ಮಹಾರಾಜರು ಅಧಿಕಾರವಹಿಸಿಕೊಂಡ ನಂತರ ತುಂಬಾ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಡಳಿತವಹಿಸಿಕೊಂಡ ಮೊದಲ ವರ್ಷದಲ್ಲೇ ಸರ್ಕಾರದ ಅಧಿಕಾರಕ್ಕೆ ಸಂಬಂಧಪಟ್ಟ ೯೦೦ ಪತ್ರಗಳಿಗೆ ತೀರ್ಪನ್ನು ಕೊಟ್ಟು ಆಜ್ಞೆಮಾಡಿದ್ದರು. ಅಗತ್ಯಬಿದ್ದಾಗ ರಾತ್ರಿ ೮-೯ ಗಂಟೆವರೆಗೂ ಕಛೇರಿ ಕೆಲಸ ನಿರ್ವಹಿಸುತ್ತಿದ್ದರು. ಕರ್ತವ್ಯ ನಿಷ್ಠೆಯಲ್ಲಿ ಮಂತ್ರಿಗಳು ಅಧಿಕಾರ ವರ್ಗದವರಿಗೆ ಮಾರ್ಗದರ್ಶಕರಾಗಿದ್ದರು. ೧೯೧೩ರಲ್ಲಿ ಬ್ರಿಟಿಷ್ ರೆಸಿಡೆಂಟ್‌ರಾಗಿದ್ದ ಸರ್ ಹೂಡ್ಸಾಲಿಯವರೊಡನೆ ಚರ್ಚಿಸಿ ಹೊಸ ಒಪ್ಪಂದ ಮಾಡಿಕೊಳ್ಳಲು ತಿರ್ಮಾನಿಸಿದರು. ಈ ಒಪ್ಪಂದದ ಪ್ರಕಾರ ಬ್ರಿಟಿಷ್ ಸರ್ಕಾರ ಮೈಸೂರಿನ ಮಹಾರಾಜರ ಆಂತರಿಕ ಆಡಳಿತದಲ್ಲಿ ಸ್ವಾತಂತ್ರ್ಯ ನೀಡುವುದಲ್ಲದೆ ಬ್ರಿಟಿಷ್ ಪ್ರಭುತ್ವವು ಅದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಭರವಸೆ ನೀಡಿತು.

೧೮೮೧ರಲ್ಲಿ ಜಾರಿಯಾಗಿದ್ದ ಪ್ರಜಾಪ್ರತಿನಿಧಿ ಸಭೆಯನ್ನು ವಿಸ್ತರಿಸುವುದರ ಮೂಲಕ ಹೆಚ್ಚು ಪ್ರಜಾಪ್ರತಿನಿಧಿಗಳು ಅಧಿಕಾರದಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಯಿತು.

ಈ ಸಭೆಯ ಅಧಿವೇಶನ ನಡೆಯುವ ಮೊದಲು ಪ್ರತಿಯೊಬ್ಬ ಸದಸ್ಯರಿಗೂ ಆಯವ್ಯಯದ ಕರಡು ಪತ್ರವನ್ನು ಒದಗಿಸುವ ಏರ್ಪಾಡಾಯಿತು. ಅಷ್ಟೇ ಅಲ್ಲದೆ ಮಹಾರಾಜರು ತಮ್ಮ ಸಂಸ್ಕಾರಕ್ಕೆ ಎಷ್ಟು ಹಣ ತೆಗೆದುಕೊಳ್ಳಬೇಕೆಂಬುದನ್ನು ಆಯವ್ಯಯದ ಪಟ್ಟಿಯಲ್ಲಿ ಸೇರಿಸಿ ಪ್ರತಿನಿಧಿ ಸಭೆಯಲ್ಲಿ ಅನುಮೋದನೆ ಪಡೆಯುತ್ತಿದ್ದರು. ಇಂಥ ಕ್ರಮವನ್ನು ಅನುಸರಿಸಿದ ಮೊತ್ತಮೊದಲ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರು. ಪ್ರತಿನಿಧಿ ಸಭೆಯ ಸದಸ್ಯರನ್ನು ಚುನಾಯಿಸಲು ಮತದಾರನಾಗಬೇಕಾದರೆ ೩೦೦ ರಿಂದ ೫೦೦ ರೂ. ನಷ್ಟು ಭೂಕಂದಾಯವನ್ನು ಪಾವತಿಸುವವರಿಗೆ ಮಾತ್ರ ಅವಕಾಶವಿತ್ತು. ಈ ಮೊತ್ತವನ್ನು ರೂ. ೫೦ಕ್ಕೆ ಇಳಿಸಿ ಮತದಾನದಲ್ಲಿ ಎಲ್ಲಾ ಸಮುದಾಯದ ಮತದಾರರು ಮತ್ತು ಪ್ರತಿನಿಧಿಗಳು ಭಾಗವಹಿಸುವ ಅವಕಾಶ ನಿರ್ಣಯವಾಯಿತು ಮತ್ತು ಶಾಸನ ರಚನೆಯ ಕಾರ್ಯಕ್ಕೆ ಹೆಚ್ಚಿನ ಪರಿಶೀಲನೆ ಮತ್ತು ಚಿಂತನೆಯ ಅಗತ್ಯವನ್ನು ಪರಿಗಣಿಸಿದ ಮಹಾರಾಜರು ೧೯೦೭ರಲ್ಲಿ ನ್ಯಾಯ ವಿಧೇಯಕ ಸಭೆಯನ್ನು ರಚಿಸಿ ೨/೫ ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಅಧಿಕಾರೇತರರು ಸದಸ್ಯರಾಗುವಂತೆ ಮಾಡಿದರು.

ಇದೇ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಜಾರಿಗೊಳಿಸಿದ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯು ಎಲ್ಲಾ ಸಮುದಾಯಗಳಲ್ಲಿಯೂ ಆಧುನಿಕ ಪ್ರಜ್ಞೆಯನ್ನು ಮೂಡಿಸತೊಡಗಿತ್ತು. ಪ್ರಜಾಪ್ರತಿನಿಧಿ ಸಭೆಯಂಥ ಹೊಸ ರಾಜಕೀಯ ಬೆಳವಣಿಗೆಯಿಂದ ಬ್ರಾಹ್ಮಣೇತರ ಸಂಘಟನೆಗಳು ರೂಪುಗೊಳ್ಳಲು ಪ್ರಾರಂಭವಾಯಿತು. ಮೈಸೂರು ಸಂಸ್ಥಾನದ ಆಡಳಿತದಲ್ಲಿ ಬ್ರಾಹ್ಮಣರೇ ತುಂಬಿದ್ದು ಅವರ ಏಕಸ್ವಾಮ್ಯವನ್ನು ಮನಗಂಡ ಇತರರು ೧೯೦೪ರಲ್ಲಿ ವೀರಶೈವ ಸಭಾ, ೧೯೦೬ರಲ್ಲಿ ಒಕ್ಕಲಿಗರ ಸಂಘ ಮತ್ತು ೧೯೧೭ರಲ್ಲಿ ಕೇಂದ್ರೀಯ ಮಹಮ್ಮದೀಯ ಸಂಘಗಳನ್ನು ಸ್ಥಾಪಿಸಿಕೊಂಡರು. ಈ ಬ್ರಾಹ್ಮಣೇತರ ಸಂಘಟನೆಗಳಿಂದ ಅಂದಿನ ಬ್ರಾಹ್ಮಣ ಬನಿಯಾಗಳ ಪಕ್ಷವಾಗಿದ್ದ ಕಾಂಗ್ರೆಸ್ ದಿಗಿಲುಗೊಂಡು "ಇಂಥ ಸಾಮಾಜಿಕ ಗುಂಪುಗಳಿಂದ ಅನಾರೋಗ್ಯಕರವಾದ ಸ್ಪರ್ಧೆ ಮತ್ತು ಸಂಘರ್ಷ ಏರ್ಪಟ್ಟು ಸಾಮಾಜಿಕ ಅಶಾಂತಿ ಉಂಟಾಗುತ್ತದೆ" ಎಂದು ಅಪಪ್ರಚಾರ ಮಾಡತೊಡಗಿತು.

ಮದ್ರಾಸ್‌ನಲ್ಲಿ ಬ್ರಾಹ್ಮಣೇತರ ಚಳವಳಿಯ ನಾಯಕರಾಗಿದ್ದ ಸಿ. ಆರ್. ರೆಡ್ಡಿಯವರು ೧೯೧೭ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಇವರ ಪ್ರಭಾವದಿಂದಾಗಿ ಮೈಸೂರಿನಲ್ಲಿ ಬ್ರಾಹ್ಮಣೇತರ ಚಳವಳಿ ಪ್ರಾರಂಭವಾಯಿತು. ಮೈಸೂರು ಸ್ಟಾರ್‌ನಂಥ ವೃತ್ತಪತ್ರಿಕೆಗಳು ಮತ್ತು ಪ್ರಜಾಪ್ರತಿನಿಧಿ ಸಭೆಗಳ ಮೂಲಕ ಸರ್ಕಾರಿ ಸೇವೆಯಲ್ಲಿ ಬ್ರಾಹ್ಮಣೇತರರಿಗೆ ಸ್ಥಾನ ಕೇಳಲು ಮುಂದಾದವು. ಲಿಂಗಾಯಿತ ಜಾತಿಗೆ ಸೇರಿದ್ದ ಶ್ರೀ ಎಂ. ಬಸವಯ್ಯನವರು ನ್ಯಾಯ ವಿಧೇಯಕ ಸಭೆಯ ಸದಸ್ಯರಾಗಿದ್ದು ಆ ಸಭೆಯ ಮುಂದೆ ಪುರಸಭೆಗಳ ಚುನಾಯಿತ ಸದಸ್ಯರ ಸ್ಥಾನಗಳಲ್ಲಿ ವಿವಿಧ ಹಿಂದುಳಿದ ಕೋಮುಗಳಿಗೆ ಮೀಸಲಾತಿ ನೀಡಬೇಕು ಎಂಬ ನಿರ್ಣಯ ಮತ್ತು ಹಿಂದುಳಿದವರ

ವಿದ್ಯಾಭ್ಯಾಸಕ್ಕೆ ೧ ಲಕ್ಷ ರೂ. ಗಳನ್ನು ಮೀಸಲಿಡಬೇಕು ಎಂಬ ನಿರ್ಣಯ ಮಂಡಿಸಿದರು. ಆದರೆ ಈ ನಿರ್ಣಯ ಸಭೆಯಲ್ಲಿ ಬಿದ್ದು ಹೋದರೂ ಮಹಾರಾಜರು ಈ ಹೊಸ ಬೇಡಿಕೆಯ ಅಂತರಾಳವನ್ನು ಅರಿತು ಹಿಂದುಳಿದವರ ವಿದ್ಯಾಭ್ಯಾಸಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟರು. ನಂತರ ಬಸವಯ್ಯನವರು ಧೃತಿಗೆಡದೆ ಅನೇಕ ಹಿಂದುಳಿದ ನಾಯಕರುಗಳನ್ನು ಸೇರಿಸಿ ಪ್ರಜಾಮಿತ್ರ ಮಂಡಳಿಯ ಶಾಖೆಯನ್ನು ಮೈಸೂರಿನಲ್ಲಿ ಪ್ರಾರಂಭಿಸಿದರು. ಹೊಸ ಪಕ್ಷದ ಎಲ್ಲಾ ನಾಯಕರು ಸೇರಿ ಹಿಂದುಳಿದ ವರ್ಗಗಳಿಗೆ ಎಲ್ಲಾ ರಂಗಗಳಲ್ಲೂ ಮೀಸಲಾತಿ ನೀಡಬೇಕು ಎಂದು ಮನವಿ ಸಲ್ಲಿಸಿದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಈ ಮನವಿಯನ್ನು ಸ್ವೀಕರಿಸಿ "ರಾಜ್ಯದ ಸರ್ಕಾರಿ ಉದ್ಯೋಗಗಳಲ್ಲಿ ನಮ್ಮ ಪ್ರಜೆಗಳಲ್ಲಿರುವ ಎಲ್ಲಾ ಪಂಗಡದವರೂ ಅವರವರು ನ್ಯಾಯವಾಗಿ ಎಷ್ಟು ಜನವಿರಬೇಕೋ ಅಷ್ಟು ಜನರು ಇರುವಂತೆ ನೋಡಿಕೊಳ್ಳುವುದರಲ್ಲಿ ನಾವು ಮನಃಪೂರ್ವಕವಾಗಿ ಪ್ರಯತ್ನಪಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಹಿಂದುಳಿದ ಪಂಗಡದವರಿಗೆ ಪ್ರೋತ್ಸಾಹವನ್ನು ಕೊಡಲು ನಮ್ಮ ಸರ್ಕಾರದವರು ಸರ್ವಸಾಹಸ ಮಾಡುತ್ತಿರುವರು. ಈ ವಿಧವಾದ ರಾಜಧರ್ಮವನ್ನು ಮುಂದೆ ಮತ್ತಷ್ಟು ನಿಶ್ಚಲವಾಗಿ ಪರಿಪಾಲಿಸುತ್ತ ಬರುವೆವೆಂಬ ವಿಷಯವನ್ನು ನೀವು ದೃಢವಾಗಿ ನಂಬಬಹುದು" ಎಂದರು. ಹಿಂದುಳಿದ ಪಂಗಡದವರಿಗೆ ತಕ್ಕ ಪ್ರೋತ್ಸಾಹವನ್ನು ಕೊಡುವುದೇ "ರಾಜಧರ್ಮ" ಎಂದ ಮಹಾರಾಜ ನಮ್ಮ ಕನ್ನಡದ ನೆಲದವರೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದನ್ನು ಆಗಿನ ದಿವಾನರು ತೀವ್ರವಾಗಿ ವಿರೋಧಿಸುತ್ತಿದ್ದರು. ವ್ಯಕ್ತಿಯ ಸಾಮರ್ಥ್ಯ ಮತ್ತು ಅರ್ಹತೆಯ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಬೇಕು ಎಂಬುದು ವಿಶ್ವೇಶ್ವರಯ್ಯನವರ ವಾದ. ಈ ವಾದವನ್ನು ಮಹಾರಾಜರು ಸಂಪೂರ್ಣವಾಗಿ ತಳ್ಳಿ ಹಾಕುತ್ತ "ಬ್ರಾಹ್ಮಣೇತರರನ್ನು ಸರ್ಕಾರಿ ಸೇವೆಗೆ ಸೇರಿಸಿಕೊಳ್ಳುವುದರಿಂದ ಸಾಮರ್ಥ್ಯವನ್ನು ಕಡೆಗಣಿಸುತ್ತಿದ್ದೇವೆ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಆದ್ದರಿಂದ ನಾವು ಅನುಸರಿಸುತ್ತಿರುವ ಕ್ರಮ ನಮಗೆ ಸರಿಯೆನಿಸಿದೆ. ನಾವಿದನ್ನು ಮುಂದುವರಿಸುತ್ತಿದ್ದೇವೆ" ಎಂಬ ಸ್ಪಷ್ಟ ತೀರ್ಮಾನ ನೀಡಿದರು. ಮಹಾರಾಜರು ಹೀಗೆ ಎಷ್ಟೋ ಬಾರಿ ಆಗಿನ ದಿವಾನರ ತೀರ್ಮಾನಗಳನ್ನು ಕಡೆಗಣಿಸಿ ಹಿಂದುಳಿದ ವರ್ಗಗಳ ಹಿತಾಸಕ್ತಿಯನ್ನು ಕಾಪಾಡಿದ್ದಾರೆ.

ಹಿಂದುಳಿದ ವರ್ಗಗಳಿಗೆ ಕಾನೂನುಬದ್ಧವಾಗಿ ಸರ್ಕಾರಿ ಸೇವೆಯಲ್ಲಿ ಮೀಸಲಾತಿ ಒದಗಿಸುವುದು ಸೂಕ್ತ ಎಂಬ ಅಂತಿಮ ತೀರ್ಮಾನಕ್ಕೆ ಬಂದ ನಾಲ್ವಡಿ ಕೃಷ್ಣರಾಜ ಒಡೆಯರು ಅಂದಿನ ಮೈಸೂರು ಮುಖ್ಯ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಸರ್. ಲೆಸ್ಲೆಮಿಲ್ಲರ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ರಚಿಸಿ ಆಯೋಗವು ಸರ್ಕಾರಿ ಸೇವೆಯಲ್ಲಿ ಬ್ರಾಹ್ಮಣ ಸಮುದಾಯ ಯಥೇಚ್ಛವಾಗಿದ್ದು ಇತರ ಹಿಂದುಳಿದ

ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಉದ್ಯೋಗವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಆಯೋಗವು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಲಾಯಿತು. ಹಿಂದುಳಿದ ಸಮುದಾಯಗಳಿಗೆ ಸರ್ಕಾರ ವಿಶೇಷ ಸವಲತ್ತುಗಳನ್ನು ನೀಡದಿದ್ದರೆ ಅವರು ಮೇಲ್ಜಾತಿಗಳೊಡನೆ ಸ್ಪರ್ಧಿಸಲು ಸಾಧ್ಯವಿಲ್ಲ ಎಂಬ ಸಾಮಾಜಿಕ ನ್ಯಾಯಕ್ಕೆ ಮಹಾರಾಜರು ಬದ್ಧರಾಗಿದ್ದರು. ಆದರೆ ಆಗಿನ ದಿವಾನ್ ವಿಶ್ವೇಶ್ವರಯ್ಯನವರು ಜಾತಿಯ ಆಧಾರಿತ ಮೀಸಲಾತಿ ನೀಡುವುದರಿಂದ ಪ್ರತಿಭೆಗೆ ಧಕ್ಕೆ ಉಂಟಾಗುತ್ತದೆ. ಆಡಳಿತದಲ್ಲಿ ದಕ್ಷತೆ ಹಾಳಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ವಾದ ಮಾಡಿದರು. ಇದಕ್ಕೆ ಕಿವಿಗೊಡದ ಮಹಾರಾಜರು ನಿಮ್ಮ ವಾದ ಸರಿಯಿಲ್ಲ ಹಿಂದುಳಿದವರ ಅಭಿವೃದ್ಧಿಗೆ ನೀವು ಅಡ್ಡಿಯಾಗಬಾರದು ಎಂದು ಹಿತವಚನ ಹೇಳಿದರು. ಮೀಸಲಾತಿ ಸಂಬಂಧದಲ್ಲಿ ಆಗಿನ ದಿವಾನರು ಪದೆ ಪದೇ ಬರೆಯುತ್ತಿದ್ದ ಪತ್ರಗಳಿಂದ ರೋಸಿ ಹೋದ ಮಹಾರಾಜರು ಅಂತಿಮವಾಗಿ ರಾಜೀನಾಮೆ ಸಲ್ಲಿಸಲು ಸೂಚಿಸಿದರು. ಡಿಸೆಂಬರ್ ೯, ೧೯೧೮ರಲ್ಲಿ ಆಗಿನ ದಿವಾನರಾದ ವಿಶ್ವೇಶ್ವರಯ್ಯನವರು ಸಲ್ಲಿಸಿದ ರಾಜೀನಾಮೆಯನ್ನು ಮಹಾರಾಜರು ಸ್ವೀಕರಿಸಿದರು. ಸಾಮಾಜಿಕ ಪರಿವರ್ತನೆ ವಿಚಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು ಎಂಥ ಅಚಲ ನಿಲುವು ತಾಳಿದ್ದರು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ನಂತರ ದಿವಾನ್ ಹುದ್ದೆಗೆ ೧೯೧೯ರಲ್ಲಿ ಸರ್ದಾರ್ ಎಂ. ಕಾಂತೇರಾಜ ಅರಸ್ ಅವರನ್ನು ನೇಮಕ ಮಾಡಲಾಯಿತು. ೧೯೨೨ರಲ್ಲಿ ಅನಾರೋಗ್ಯ ನಿಮಿತ್ತ ಅವರು ನಿವೃತ್ತರಾದಾಗ ಆಲ್ಬಿಯನ್ ರಾಜಕುಮಾರ ಬ್ಯಾನರ್ಜಿಯವರನ್ನು ದಿವಾನರಾಗಿ ನೇಮಿಸಲಾಯಿತು.

ದಕ್ಷಿಣ ಭಾರತದಾದ್ಯಂತ ಹುಟ್ಟಿಕೊಂಡಿದ್ದ ಬ್ರಾಹ್ಮಣೇತರ ಚಳವಳಿಯಿಂದಾಗಿ ಬ್ರಾಹ್ಮಣ, ಬನಿಯಾಗಳ ಸಂಸ್ಥೆಯಾಗಿದ್ದ ಕಾಂಗ್ರೆಸ್ ದುರ್ಬಲವಾಗಿತ್ತು. ೧೯೧೯ರಲ್ಲಿ ರಾಜಕಾರಣ ಪ್ರವೇಶಿಸಿದ ಎಂ. ಕೆ. ಗಾಂಧೀಜಿ ಬ್ರಾಹ್ಮಣೇತರ ಚಳವಳಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಎಲ್ಲಾ ವರ್ಗದವರಿಗೂ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಕೊಡಲು ತೀರ್ಮಾನಿಸಿದರು. ೧೯೨೨ರ ವೇಳೆಗೆ ಕಾಂಗ್ರೆಸ್ ಚಹರೆ ಸಂಪೂರ್ಣ ಬದಲಾಯಿತು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರನ್ನು ಆಹ್ವಾನಿಸಲಾಗಿತ್ತು. ಮೈಸೂರು ಪ್ರಾಂತ್ಯದಲ್ಲಿ ಹುಟ್ಟಿಕೊಂಡಿದ್ದ ಬ್ರಾಹ್ಮಣೇತರ ಚಳವಳಿಯನ್ನು ಹತ್ತಿಕ್ಕಲು ಬ್ರಾಹ್ಮಣವಾದಿಗಳು ಕಾಂಗ್ರೆಸ್‌ನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಲು ತೀರ್ಮಾನಿಸಿದರು.

ಇದೇ ಸಮಯದಲ್ಲಿ ೧೯೨೬ರಲ್ಲಿ ಸರ್ ಮಿರ್ಜಾ‌ಇಸ್ಮಾಯಿಲ್‌ರವರು ದಿವಾನರಾಗಿ ನೇಮಕವಾದರು. ಇದನ್ನು ಸಹಿಸದ ಬ್ರಾಹ್ಮಣರು ಮಹಾರಾಜರಿಗೆ ಮತ್ತು ದಿವಾನರಿಗೆ ಕೆಟ್ಟ ಹೆಸರು ತರಲು ವ್ಯವಸ್ಥಿತ ಸಂಚಿಗಾಗಿ ಕಾಯುತ್ತಿದ್ದರು. ಬ್ರಾಹ್ಮಣೇತರ ಚಳವಳಿಯ ಮುಂಚೂಣಿಯಲ್ಲಿದ್ದ ಹಿಂದುಳಿದ ಜಾತಿಗಳ ಮತ್ತು ಮುಸಲ್ಮಾನರ ನಡುವೆ ಒಡಕುಂಟು

ಮಾಡಲು ಸಮಯ ಕಾಯುತ್ತಿದ್ದರು. ೧೯೨೮ರ ಸುಮಾರಿನಲ್ಲಿ ಬೆಂಗಳೂರಿನ ಸುಲ್ತಾನ್ ಪೇಟೆಯಲ್ಲಿ ಮಸೀದಿಯ ಪಕ್ಕದ ಸರ್ಕಾರಿ ಶಾಲೆಯ ಆವರಣದಲ್ಲಿ ಇದ್ದಕ್ಕಿದ್ದಂತೆ ಒಂದು ಗಣಪತಿ ವಿಗ್ರಹ ಸಿಕ್ಕಿತು (ಅಯೋಧ್ಯೆಯ ಮಸೀದಿಯಲ್ಲಿ ರಾಮನು ಹುಟ್ಟಿದ ಹಾಗೆ) ಅಲ್ಲಿ ಪೂಜೆಗಳ ಆರ್ಭಟ ನಡೆಸಲು ಪ್ರಾರಂಭವಾಯಿತು. ಮುಸಲ್ಮಾನರೇ ಹೆಚ್ಚಾಗಿರುವ ಈ ಪ್ರದೇಶದಲ್ಲಿ ಹಿಂದೂ ದೇವಾಲಯ ನಿರ್ಮಾಣವಾದರೆ ಅಶಾಂತಿ ಉಂಟಾಗಬಹುದೆಂಬ ಶಿಫಾರಸ್ಸನ್ನು ಉಪಯೋಗಿಸಿ ಪ್ರಜಾಪ್ರತಿನಿಧಿ ಸಭೆ ಸದಸ್ಯರಾದ ಅಬ್ಬಾಸ್ ಆಲಿಖಾನ್‌ರವರು ದೇವಾಲಯ ನಿರ್ಮಾಣ ಕಾರ್ಯವನ್ನು ನಿಲ್ಲಿಸಿದರು. ಇದನ್ನು ಕಾಯುತ್ತಿದ್ದ ಬ್ರಾಹ್ಮಣ ಪತ್ರಿಕೆಗಳಾದ 'ವೀರ ಕೇಸರಿ', 'ವಿಶ್ವ ಕರ್ನಾಟಕ' ಮತ್ತು 'ನವಜೀವನ' ಪತ್ರಿಕೆಗಳು ಗಣೇಶನ ಮೂರ್ತಿ ಕಾಣೆಯಾಗಿದೆ ಎಂದು ಪುಕಾರೆಬ್ಬಿಸಿ ಅದನ್ನು ಮತ್ತೆ ತಂದಿಡುವಂತೆ ಗಲಭೆ ಎಬ್ಬಿಸಿದವು. ಇದರಿಂದ ಹಿಂದೂ ಮುಸ್ಲಿಂ ಗಲಾಟೆಗಳಾಗಿ ಪೋಲಿಸರು ನಿಯಂತ್ರಿಸಲು ಗೋಲಿಬಾರ್ ಮಾಡಿದಾಗ ಅನೇಕರಿಗೆ ಗಾಯಗಳಾದವು. ಇದಕ್ಕೆಲ್ಲ ದಿವಾನ್ ಮಿರ್ಜಾ ಇಸ್ಮಾಯಿಲ್ ಕಾರಣವೆಂದು ಬ್ರಾಹ್ಮಣರು ಅಪಪ್ರಚಾರ ಮಾಡಿದರು. ಈ ಘಟನೆಯ ಬಗ್ಗೆ ತನಿಖೆ ನಡೆಸಲು ಜನತೆ ಆಗ್ರಹಿಸಿತು. ಕಡೆಗೆ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಸಮಿತಿಯು ಅಧ್ಯಯನ ನಡೆಸಿ ಇದಕ್ಕೆಲ್ಲ ಸರ್ಕಾರಿಯಂತ್ರದ ಕುಸಿತವೇ ಕಾರಣ. ಆದ್ದರಿಂದ ದಿವಾನ್ ಹುದ್ದೆಯನ್ನು ರದ್ದುಪಡಿಸಬೇಕು ಎಂದು ಶಿಫಾರಸ್ಸು ಮಾಡಿತು. ಇದು ವಿಶ್ವೇಶ್ವರಯ್ಯನವರ ತಲೆ! ಆದರೆ ಮಹಾರಾಜರು ಇದನ್ನು ಪೂರ್ವಾಗ್ರಹಪೀಡಿತವೆಂದು ಈ ವರದಿಯನ್ನು ನಿರಾಕರಿಸಿದರು. ಗಣಪತಿ ಗಲಭೆಯಿಂದಾಗಿ ಕಾಂಗ್ರೆಸ್ ಚಳವಳಿಗೆ ಒಂದು ಹೊಸ ಆಯಾಮ ದೊರಕಿತು. ಹಿಂದೂ ಮುಸ್ಲಿಂ ಗಲಭೆಗಳಿಂದಾಗಿ ಬ್ರಾಹ್ಮಣೇತರ ಗುಂಪಿನಲ್ಲಿದ್ದ ಮುಸಲ್ಮಾನರು ತಾವು ಪ್ರತ್ಯೇಕ ಗುಂಪಾಗಿ ಉಳಿಯಲು ಯೋಚನೆ ಮಾಡಿದರು. ಇದರಿಂದ ಬ್ರಾಹ್ಮಣರ ಒಡೆದು ಆಳುವ ಪಿತೂರಿ ಯಶಸ್ವಿಯಾಯಿತು. ಆದಾಗ್ಯೂ ಮಹಾರಾಜರು ಧೃತಿಗೆಡದೆ ತಮ್ಮ ಪ್ರಗತಿಪರ ಕೆಲಸಗಳನ್ನು ಮುಂದುವರಿಸಿದರು.

ಈ ಗಣಪತಿ ಗಲಭೆಗಳ ನಂತರ ಮೌನವಾಗಿದ್ದ 'ಪ್ರಜಾಮಿತ್ರ ಮಂಡಳಿ' ೧೯೩೦ರಲ್ಲಿ ಪ್ರಜಾಪಕ್ಷ ಸ್ಥಾಪನೆಯಾದಾಗ ಅದರಲ್ಲಿ ಲೀನವಾಗಿ ತದನಂತರ ಅದು ಸಂಯುಕ್ತ ಪ್ರಜಾಪಕ್ಷವಾಯಿತು. ಆ ಕಾಲಕ್ಕೆ ಕಾಂಗ್ರೆಸ್‌ಗಿಂತಲು ಬಲಾಢ್ಯವಾಗಿದ್ದ ಸಂಯುಕ್ತ ಪ್ರಜಾಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಬ್ರಾಹ್ಮಣರು ಪ್ರಯತ್ನಗಳನ್ನು ನಡೆಸಿ ಬ್ರಿಟಿಷರ ವಿರುದ್ಧ ಹೋರಾಡಲು ಎಲ್ಲಾ ಪ್ರಾಂತೀಯ ಪಕ್ಷಗಳು ಒಂದೇ ನೆರಳಿನ ಕೆಳಗೆ ಬರುವುದು ಸೂಕ್ತ ಎಂದು ಕಾಂಗ್ರೆಸ್‌ನ ಬ್ರಾಹ್ಮಣ ನಾಯಕರು ಬ್ರಾಹ್ಮಣೇತರ ಮುಖಂಡರ ಮನವೊಲಿಸುವಲ್ಲಿ ಯಶಸ್ವಿಯಾದರು. ಇದರ ಪರಿಣಾಮ ಅಕ್ಟೋಬರ್ ೬ ೧೯೩೭ರಲ್ಲಿ ಬಿ. ಎನ್. ಗುಪ್ತ, ಕೆ. ಸಿ. ರೆಡ್ಡಿ, ಎಚ್. ಸಿ. ದಾಸಪ್ಪ ಮುಂತಾದವರ ಸಮ್ಮುಖದಲ್ಲಿ ಸಂಯುಕ್ತ ಪ್ರಜಾಪಕ್ಷವು ಕಾಂಗ್ರೆಸ್‌ನಲ್ಲಿ ಲೀನವಾಯಿತು. ಮದ್ದೂರಿನ ಶ್ರೀನಿವಾಸ

ಅಯ್ಯಂಗಾರ್‌ರವರು ಬ್ರಾಹ್ಮಣೇತರ ನಾಯಕರಿಗೆ ಮತ್ತು ೫೦೦ ಜನ ಕಾರ್ಯಕರ್ತರಿಗೆ ಕಾಂಗ್ರೆಸ್ ಟೋಪಿ ಹಾಕಿ ಸ್ವಾಗತಿಸಿದರು. ಮಹಾರಾಜರು ಯಾವ ಶೂದ್ರ ಅತಿ ಶೂದ್ರ ಸಮೂಹಗಳಿಗೆ ಅಧಿಕಾರದಲ್ಲಿ ಪಾಲು ನೀಡಿ ಮೇಲಕ್ಕೆ ತರಬೇಕು ಎಂದು ಪ್ರಯತ್ನಿಸಿದರೋ ಅವರೇ ಕಾಂಗ್ರೆಸ್ ಬ್ರಾಹ್ಮಣರ ಅಡಿಯಾಳುಗಳಾಗಿ ಮಹಾರಾಜ ಮತ್ತು ದಿವಾನರ ವಿರುದ್ಧ ಕತ್ತಿ ಮಸೆಯಲು ಪ್ರಾರಂಭಿಸಿದರು.

೧೯೩೮ರಲ್ಲಿ ಗುಜರಾತ್‌ನ ಹರಿಪುರದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಮೈಸೂರಿನ ಶೂದ್ರ ಕಾಂಗ್ರೆಸ್ ನಾಯಕರಾದ ಕೆ. ಚೆಂಗಲ್‌ರಾಯ ರೆಡ್ಡಿ, ಟಿ. ಸಿದ್ದಲಿಂಗಯ್ಯ, ಕೆ. ಹನುಮಂತಯ್ಯ ಮುಂತಾದವರು ಭಾಗವಹಿಸಿ ರಾಷ್ಟ್ರೀಯ ಕಾಂಗ್ರೆಸ್ ದೇಶೀಯ ಸಂಸ್ಥಾನಗಳ ಚಳವಳಿಗಳಿಗೆ ಬೆಂಬಲ ನೀಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದ ಕಾಂಗ್ರೆಸ್ ತೆಗೆದುಕೊಂಡ ತೀರ್ಮಾನಗಳನ್ನು ಗಮನಿಸಿದರೆ ಇದು ಬ್ರಿಟಿಷರನ್ನು ವಿರೋಧಿಸುವುದಕ್ಕಿಂತಲೂ ಹೆಚ್ಚಾಗಿ ಭಾರತೀಯ ಸಂಸ್ಥಾನಗಳ ಅದರಲ್ಲೂ ಮೈಸೂರು ಸಂಸ್ಥಾನದ ವಿರುದ್ಧ ತೆಗೆದುಕೊಂಡ ತೀರ್ಮಾನ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ಮೈಸೂರು ಕಾಂಗ್ರೆಸ್ಸಿಗರಿಗೆ ಹೊಸ ಹುರುಪು ಬಂದಿತು. ಮೈಸೂರಿನ ರಾಜಕೀಯ ವಿದ್ಯಮಾನಗಳ ಬಗ್ಗೆ ನಿಗಾವಹಿಸಲು ಕಾಂಗ್ರೆಸ್ ಪಕ್ಷವು ಪ್ರಕಾಶಂ ಎಂಬ ಬ್ರಾಹ್ಮಣನನ್ನು ನೇಮಿಸಿತು. ಒಟ್ಟಾರೆ ಇವೆಲ್ಲಾ ಬೆಳವಣಿಗೆಗಳು ನಾಲ್ವಡಿ ಕೃಷ್ಣರಾಜ ಒಡೆಯರ ಸಾಮಾಜಿಕ ಪರಿವರ್ತನ ಚಳವಳಿಯನ್ನು ಹತ್ತಿಕ್ಕಲು ಮತ್ತು ಹಿಂದುಳಿದ ಜಾತಿಗಳ ಸ್ವತಂತ್ರ ರಾಜಕೀಯ ಪ್ರಜ್ಞೆಯನ್ನು ನಾಶಮಾಡಲು ಬ್ರಾಹ್ಮಣವಾದಿಗಳು ನಡೆಸಿದ ಪಿತೂರಿಗಳಾಗಿದ್ದವು.

ಈ ಅಧಿವೇಶನದಿಂದ ಪ್ರಚೋದಿತರಾದ ಮೈಸೂರು ಕಾಂಗ್ರೆಸ್‌ನವರು ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಕನಸನ್ನು ನನಸಾಗಿಸಲು ಒಂದು ರಾಷ್ಟ್ರೀಯ ಅಧಿವೇಶನವನ್ನು ನಡೆಸಲು ನಿರ್ಧರಿಸಿದರು. ಅದರಂತೆ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಶಿವಪುರ ಧ್ವಜ ಸತ್ಯಾಗ್ರಹ ನಡೆಸುವ ಸಲುವಾಗಿ ಕಾಂಗ್ರೆಸ್ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯ ಮತ್ತು ಭೂಪಾಳಂ ಚಂದ್ರಶೇಖರಯ್ಯನವರು ಗಾಂಧೀಜಿಯನ್ನು ಒರಿಸ್ಸಾದ ಡೆಲಾಂಗಿನಲ್ಲಿ ಭೇಟಿ ಮಾಡಿದರು. ಆಗ ಗಾಂಧೀಜಿಯು ಬಹಳ ಬುದ್ಧಿವಂತಿಕೆಯಿಂದ ಮಾತನಾಡುವಾಗ ಮಹಾರಾಜರನ್ನು ಉರುಳಿಸುವ, ದಿವಾನರನ್ನು ವಜಾಮಾಡುವಷ್ಟು ಶಕ್ತಿ ನಿಮಗಿದೆಯೇ? ಎನ್ನುತ್ತಾರೆ. ಇದರರ್ಥ ಅವರನ್ನು ವಜಾಗೊಳಿಸಬೇಕೆಂಬುದೇ ಅಲ್ಲವೇ? ಗಾಂಧೀಜಿಯ ಈ ಸಂದರ್ಶನದಿಂದ ಉತ್ತೇಜಿತರಾದ ಸಿದ್ದಲಿಂಗಯ್ಯ ಮೈಸೂರಿನ ಎಲ್ಲಾ ಮುಖಂಡರ ಸಭೆ ಸೇರಿಸಿ ದಿನಾಂಕ ೧೦-೦೪-೧೯೩೮ರಂದು ಸತ್ಯಾಗ್ರಹವನ್ನು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾಮ್ಯಾಜಿಸ್ಟ್ರೇಟರು ಕಾಂಗ್ರೆಸ್ ಧ್ವಜಾರೋಹಣ ಮಾಡುವುದರಿಂದ ಪ್ರತ್ಯೇಕ ಧ್ವಜವುಳ್ಳ ಮೈಸೂರು ಮಹಾರಾಜರ ಸಾರ್ವಭೌಮ ಅಧಿಕಾರಕ್ಕೆ ಧಕ್ಕೆ ಉಂಟಾಗುತ್ತದೆ ಮತ್ತು ಇದು ಕಾನೂನು ಬಾಹಿರ ಎಂದು

ತಿಳಿಸಿದರು. ಆದಾಗಿಯೂ ೧೧-೦೪-೧೯೩೮ರಂದು ಧ್ವಜಾರೋಹಣ ಪ್ರಾರಂಭವಾಯಿತು. ಪೊಲೀಸರು ಮಹಾರಾಜರ ಆಜ್ಞೆಯಂತೆ ಜನರ ಮೇಲೆ ಉಗ್ರಕ್ರಮ ಕೈಗೊಳ್ಳದಂತೆ ಧ್ವಜಾರೋಹಣ ಮಾಡಿದ ಎಲ್ಲಾ ನಾಯಕರನ್ನು ಬಂಧಿಸಲಾಯಿತು. ಈ ಸಂದರ್ಭದಲ್ಲಿ ಪೊಲೀಸರು ಗೋಲಿಬಾರ್ ಮಾಡಬಹುದು ಎಂಬ ಜನರ ನಂಬಿಕೆ ಸುಳ್ಳಾಯಿತು.

ಶಿವಪುರ ಧ್ವಜಸತ್ಯಾಗ್ರಹ ಒಟ್ಟು ನಡಾವಳಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ನಿಜಕ್ಕೂ ಸ್ವಾತಂತ್ರ್ಯ ಚಳವಳಿಯಾಗಿರದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮಿರ್ಜಾಇಸ್ಮಾಯಿಲ್‌ರವರನ್ನು ಪದಚ್ಯುತಿಗೊಳಿಸಲು ಬ್ರಾಹ್ಮಣವಾದಿಗಳು ಹೂಡಿದ ಸಂಚು ಎಂಬುದು ಸ್ಪಷ್ಟವಾಗುತ್ತದೆ. ಕೃಷ್ಣರಾಜ ಒಡೆಯರನ್ನು 'ರಾಜರ್ಷಿ' ಎಂದು, ಮೈಸೂರನ್ನು 'ರಾಮರಾಜ್ಯ'ವೆಂದು ವರ್ಣಿಸಿದ ಗಾಂಧೀಜಿಗೆ ಮೈಸೂರು ಸಂಸ್ಥಾನದ ಮೇಲೆ ಇದ್ದಕ್ಕಿದ್ದಂತೆ ದ್ವೇಷ ಹುಟ್ಟಿದ್ದು ಯಾಕೆ? ಇದಕ್ಕೆಲ್ಲ ಉತ್ತರ ಸ್ಪಷ್ಟ. ಬ್ರಾಹ್ಮಣ ಬನಿಯಾಗಳ ಏಕಸ್ವಾಮ್ಯಕ್ಕೆ ಧಕ್ಕೆ ಬಂದ ಕೂಡಲೇ ಅವರ ಸಮುದಾಯದ ಸಮಸ್ಯೆಯನ್ನು ಇಡೀ ಸಮಾಜದ ಸಮಸ್ಯೆ ಎಂಬಂತೆ ಬಿಂಬಿಸಿ ಗೊಂದಲ ಸೃಷ್ಟಿ ಮಾಡಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವುದೇ ಆಗಿದೆ.

ಬ್ರಾಹ್ಮಣವಾದಿಗಳ ಕುತಂತ್ರಗಳಿಗೆ ಬೆಂಬಲ ನೀಡಿದ ಬ್ರಾಹ್ಮಣೇತರ ನಾಯಕರನ್ನು ಮಾತ್ರ ಚರಿತ್ರೆ ಎಂದೆಂದಿಗೂ ಕ್ಷಮಿಸಲಾರದು. ಮಹಾರಾಜರ ಬೆಂಬಲ ಮತ್ತು ಸಹಾಯ ಪಡೆದು ಬ್ರಾಹ್ಮಣೇತರ ಚಳವಳಿಯನ್ನು ಹುಟ್ಟುಹಾಕಿ ಮೇಲಕ್ಕೆ ಬಂದ ಶೂದ್ರಜಾತಿಗಳ ಮುಖಂಡರುಗಳು ಬ್ರಾಹ್ಮಣವಾದಿ ಕಾಂಗ್ರೆಸ್ ಜೊತೆ ಕೈಜೋಡಿಸಿ ಮಹಾರಾಜರ ಬೆನ್ನಿಗೆ ಚೂರಿ ಹಾಕಿದ್ದು ಬಲು ದೊಡ್ಡ ಮೋಸ. ಶಿವಪುರ ಧ್ವಜ ಸತ್ಯಾಗ್ರಹವನ್ನು ಕಾಂಗ್ರೆಸ್‌ನವರು ಸುಮಾರು ಒಂದು ತಿಂಗಳ ಕಾಲ ನಿರಂತರವಾಗಿ ಮುಂದುವರೆಸಿದರು. ಕಾನೂನು ಉಲ್ಲಂಘನೆ ಮಾಡಿದ ಕಾರಣಕ್ಕೆ ಕಾಂಗ್ರೆಸ್ ಮುಖಂಡರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಯಿತು. ಶಿವಪುರ ಧ್ವಜ ಸತ್ಯಾಗ್ರಹದ ಯಶಸ್ಸಿನಿಂದ ಉತ್ತೇಜಿತರಾದ ಕಾಂಗ್ರೆಸ್ಸಿಗರು ಮೈಸೂರು ಪ್ರಾಂತ್ಯದ ಎಲ್ಲೆಡೆ ಧ್ವಜ ದಿನಾಚರಣೆ ನಡೆಸುವ ಮೂಲಕ ಮಹಾರಾಜರು ಮತ್ತು ದಿವಾನರ ವಿರುದ್ಧ ವ್ಯಾಪಕ ಅಪಪ್ರಚಾರ ಮಾಡಿದರು. ಇದೇ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವಿಧುರಾಶ್ವತ್ಥದಲ್ಲಿ ಧ್ವಜಾ ಸತ್ಯಾಗ್ರಹ ನಡೆಸಲು ತೀರ್ಮಾನಿಸಿ ಅಲ್ಲಿಯೂ ಅನಗತ್ಯ ಗಲಭೆ ಸೃಷ್ಟಿಸಿದರು. ಪರಿಸ್ಥಿತಿ ಕೈ ಮೀರುವುದನ್ನು ಗಮನಿಸಿದ ಪೊಲೀಸರು ಗೋಲಿಬಾರ್ ಮಾಡಿದಾಗ ಮುಗ್ಧ ಜನತೆ ಗೋಲಿಬಾರ್‌ಗೆ ಬಲಿಯಾದರು. ಇದಕ್ಕೆಲ್ಲ ಮಹಾರಾಜರು ಮತ್ತು ದಿವಾನರು ಕಾರಣ ಎಂದು ಅಪಪ್ರಚಾರ ಮಾಡಲಾಯಿತು. ಗಾಂಧೀಜಿ ಆಗ ಪತ್ರಿಕಾ ಹೇಳಿಕೆ ನೀಡಿ "ನಾನು ಶ್ರೀಮಾನ್ ಮಹಾರಾಜರವರಿಗೂ ಮತ್ತು ಅವರ ಸಲಹೆಗಾರರಾದ ಸರ್. ಮಿರ್ಜಾರವರಿಗೂ ಸೂಚಿಸ ಬಯಸುವುದೇನೆಂದರೆ ಈಗ ಮೈಸೂರಿನಲ್ಲಿರುವ ನಿರಂಕುಶ ಪ್ರಭುತ್ವ ತಪ್ಪಿಸಿ ಪ್ರಜಾಪ್ರತಿನಿಧಿಗಳನ್ನು ರಾಜ್ಯಾಡಳಿತಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು" ಎಂದರು. ಒಟ್ಟಾರೆ ವಿಧುರಾಶ್ವತ್ಥದ ಘಟನೆಯನ್ನು ಕಾಂಗ್ರೆಸ್‌ನವರು ತಮ್ಮ ಸ್ವಾರ್ಥಕ್ಕೆ

ಬಳಸಿಕೊಂಡು ಪ್ರಚಾರ ಗಿಟ್ಟಿಸಿಕೊಂಡರು. ಬ್ರಾಹ್ಮಣವಾದಿಗಳ ಕುತಂತ್ರ ಕಾಂಗ್ರೆಸ್ಸಿಗರ ಪುಂಡಾಟಿಕೆ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಮನಃಶಾಂತಿಯನ್ನು ಕದಡಿತು. ಯಾವ ಸಮುದಾಯಗಳ ಸಾಮಾಜಿಕ ರಾಜಕೀಯ ಸಮಾನತೆಗಾಗಿ ಹಗಲಿರುಳು ಚಿಂತಿಸುತ್ತಿದ್ದರೋ, ಆ ಜನರೇ ಮಹಾರಾಜರಿಂದ ದೂರಸರಿದಿದ್ದರು.

ಮಹಾರಾಜರ ತಮ್ಮ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್‌ರವರು ಕಟ್ಟಾ ಪುರೋಹಿತಶಾಹಿ ವಿರೋಧಿಯಾಗಿದ್ದು. ಅಸ್ಪೃಶ್ಯತೆ ಮತ್ತು ಜಾತೀಯತೆಯನ್ನು ಉಗ್ರವಾಗಿ ವಿರೋಧಿಸುತ್ತಿದ್ದರು. ಯುವರಾಜರು ಡಿಸೆಂಬರ್ ೨೭, ೧೯೧೪ರಂದು ಮದರಾಸಿನಲ್ಲಿ ಭಾರತೀಯ ಸಾಮಾಜಿಕ ಸಮ್ಮೇಳನದಲ್ಲಿ ಮಾತನಾಡುತ್ತ "ಸಮಾಜದಲ್ಲಿ ಕೆಲವರೇ ವಿದ್ಯಾವಂತರಾದರೆ ಸಾಲದು, ಅಸ್ಪೃಶ್ಯರು ಮಹಿಳೆಯರು ವಿದ್ಯಾವಂತರಾಗಬೇಕು, ಅಸ್ಪೃಶ್ಯರಿಗೆ ವಿದ್ಯಾಭ್ಯಾಸ, ಸರ್ಕಾರಿ ನೌಕರಿ ಜೊತೆಗೆ ಅವರು ಆತ್ಮಗೌರವದಿಂದ ಬದುಕುವಂತಹ ಪರಿಸರ ನಿರ್ಮಾಣವಾಗಬೇಕು. ಅಸ್ಪೃಶ್ಯತೆಯ ಕಳಂಕವನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು ಎಂದರು" ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಬೆಂಗಾವಲಾಗಿ ಸ್ಫೂರ್ತಿಯಾಗಿದ್ದರು. ಇಂಥ ಯುವರಾಜರು ೧೯೪೦ ಮಾರ್ಚ್ ೯ರಂದು ಅಕಾಲ ಮರಣಕ್ಕೆ ತುತ್ತಾದರು. ಪ್ರೀತಿಯ ಸೋದರರನ ದುಃಖ ಮತ್ತು ಸಾಮಾಜಿಕ, ರಾಜಕೀಯ ಒತ್ತಡಗಳು ಮಹಾರಾಜರ ಅನಾರೋಗ್ಯಕ್ಕೆ ಕಾರಣವಾದವು. ಜುಲೈ ೩೧, ೧೯೪೦ರಂದು ತೀವ್ರ ಹೃದಯಾಘಾತಕ್ಕೆ ಒಳಗಾದ 'ರಾಜರ್ಷಿ', ಪ್ರಜಾಚಿಂತಕ, ಸಾಮಾಜಿಕ ಪರಿವರ್ತನೆಯ ರೂವಾರಿ ನಾಲ್ವಡಿ ಕೃಷ್ಣರಾಜ ಒಡೆಯರ ಪವಿತ್ರ ಚೇತನ ೧೯೪೦ ಆಗಸ್ಟ್ ೩ ರಂದು ಅವರ ದೇಹವನ್ನು ಬಿಟ್ಟು ಅಗಲಿತು. ಲಕ್ಷಾಂತರ ಶೋಷಿತ ಜನರು ಮಹಾರಾಜರ ಪಾರ್ಥಿವ ಶರೀರಕ್ಕೆ ಅಶ್ರುತರ್ಪಣ ಸಲ್ಲಿಸಿದರು. ದೇಶವಿದೇಶಗಳ ಗಣ್ಯರು ಬ್ರಿಟಿಷ್ ಅಧಿಕಾರಿಗಳು ಈ ರಾಜಯೋಗಿ ಕರ್ಮಯೋಗಿಯ ಪರಿನಿಬ್ಬಾಣದಿಂದಾಗಿ ಜಗತ್ತು ಒಬ್ಬ ಮಹಾನ್ ಸಾಧಕನನ್ನು ಕಳೆದುಕೊಂಡಿದೆ ಎಂದು ಕೊಂಡಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಶೋಷಿತ ವರ್ಗಗಳ ಬದುಕಿನಲ್ಲಿ ಎಂದೆಂದಿಗೂ ಧ್ರುವತಾರೆಯಾಗಿ ಉಳಿದರು.

ಮನೆಯ ಭಾಷೆ ಮತ್ತು ಶೈಕ್ಷಣಿಕ ಭಾಷೆ

ಡಾ. ಎಲ್. ಮಂಜುಳಾಕ್ಷಿ

ಟಿ. ಪಿ. ಕೈಲಾಸಂ ಅವರು "ಮಕ್ಕಳ ಶಾಲೆ ಮನೇಲಲ್ವೆ" ಎಂದಿದ್ದಾರೆ. "ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು" - ಎಂಬುದು ಎಲ್ಲರಿಗೂ ತಿಳಿದಿರುವಂಥದೇ. ಈ ಹೇಳಿಕೆಗಳು ಮಗುವಿಗೆ ಭಾಷಾಕಲಿಕೆಯ ಪ್ರಾರಂಭದಲ್ಲಿ ಮನೆಯೇ ಮೂಲ ಎಂಬುದನ್ನು ತಿಳಿಸುವಂಥವು. ಈ ಹಿನ್ನೆಲೆಯಲ್ಲಿ ಮಗು ಭಾಷೆಯನ್ನು ಕಲಿಯುವಾಗ ಮನೆಯ ಭಾಷೆ (Home Language) ಕಲಿಕೆಯಲ್ಲಿ ಮನೆಯ ವಾತಾವರಣ ಮತ್ತು ಶೈಕ್ಷಣಿಕ ಭಾಷಾ (School Language) ಕಲಿಕೆಯಲ್ಲಿ ಶಾಲೆಯ ವಾತಾವರಣ ಹೇಗೆ ಮಗುವಿನ ಮೇಲೆ ಪ್ರಭಾವ ಬೀರುತ್ತದೆ ಎಂಬುದು ಮುಖ್ಯ ಪ್ರಶ್ನೆ.

ಮಕ್ಕಳಿಗೆ ಪ್ರಾಥಮಿಕ ವಿದ್ಯಾಭ್ಯಾಸವು ಅತಿಮುಖ್ಯ. ಇದು ಉತ್ತಮ ತಳಹದಿಯ ಮೇಲೆ ರೂಪಿತವಾಗಿ ಪರಿಣಾಮಕಾರಿಯಾಗಬೇಕು. ಏಕೆಂದರೆ ಪ್ರಾಥಮಿಕ ಶಿಕ್ಷಣವು ಮೂಲತಃ ಭಾಷಾ ಶಿಕ್ಷಣ. ಶಾಲೆಗೆ ಮಕ್ಕಳು ಭಾಷೆ ಕಲಿಯಲು ಬರಬೇಕಾದರೆ ಅವರಿಗೆ ಮನೆಯಲ್ಲಾಡುವ ಭಾಷೆ ಮಾತನಾಡಲು ಮತ್ತು ಅರ್ಥ ಮಾಡಿಕೊಳ್ಳಲು ಬರುತ್ತದೆ. ಹಿರಿಯರು ಆಡುವ ಭಾಷೆಯನ್ನು ಆಲಿಸಿ, ವಿಷಯಗಳನ್ನು ಅವರಿಂದ ಗ್ರಹಿಸಿ ಮಕ್ಕಳು ಮಾತಿನ ರೂಪದಲ್ಲಿ ತಮ್ಮ ಭಾವನೆಗಳನ್ನು ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ. ತಾವು ಆಡುವ ಭಾಷೆ ಸರಿಯೋ, ತಪ್ಪೋ ಎನ್ನುವುದು ಅವರಿಗೆ ಗೊತ್ತಿರುವುದಿಲ್ಲ. ಹಿರಿಯರು ಹೇಳಿಕೊಟ್ಟಂತೆ ಅನುಕರಣೆ ಮಾಡುತ್ತಾರೆ. ಭಾಷಾ ಲಿಪಿಯ ಪರಿಚಯವಿರುವುದಿಲ್ಲ. ವಸ್ತುಗಳ ಆಕಾರ, ಸ್ವರೂಪ ನೋಡಿ ಅಥವಾ ಅನುಭವಿಸಿ ಹಿರಿಯರನ್ನು ಅನುಕರಣೆ ಮಾಡಿ ಅಥವಾ ಅವರಿಂದ ವಿವರಣೆ ಪಡೆದು ಅವುಗಳ ಹೆಸರು, ಕಾರ್ಯವನ್ನು ಅರ್ಥೈಸುತ್ತಾರೆ. ಹಿರಿಯರು ತಪ್ಪಾಗಿ ಉಚ್ಚರಿಸಿದರೆ, ಅರ್ಥೈಸಿದರೆ ಮಕ್ಕಳು ಕೂಡ ಅವರಂತೆಯೇ ತಪ್ಪಾಗಿ ಉಚ್ಚರಿಸುತ್ತಾರೆ, ಅರ್ಥೈಸುತ್ತಾರೆ. ಆದರೆ ಶಾಲೆಯಲ್ಲಿ ಅಕ್ಷರಗಳ ಪರಿಚಯ ಮಾಡಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಚಿತ್ರಭಾಷೆಗೆ ಹೆಚ್ಚು ಒತ್ತು ಕೊಡಲಾಗುತ್ತದೆ. ಏಕೆಂದರೆ ಮನೆಯಲ್ಲಾಡುವ ಭಾಷೆಗೂ ಶಾಲೆಯಲ್ಲಿ ಕಲಿಯುವ ಭಾಷೆಗೂ ಸಂಪರ್ಕ ಮತ್ತು ಸಾದೃಶ್ಯ ಮುಖ್ಯ.

ಮಕ್ಕಳ ಭಾಷಾಸಾಮರ್ಥ್ಯವನ್ನು ಸರಿಯಾಗಿ ಮತ್ತು ಸಂಪೂರ್ಣವಾಗಿ ಶಿಕ್ಷಕರು ಉಪಯೋಗಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಮಕ್ಕಳಿಗೆ ಶಿಕ್ಷಣದಲ್ಲಿ ನಿರಾಸಕ್ತಿ ಉಂಟಾಗುತ್ತದೆ ಚಿತ್ರರೂಪದಲ್ಲಿ ಅವರಿಗೆ ಭಾಷಾ ಪರಿಚಯ, ಬರೆಯುವಿಕೆ ಮತ್ತು ಓದುವಿಕೆಯನ್ನು

ಕಲಿಸಬೇಕು. ಗೊತ್ತಿರುವ ವಿಷಯದಿಂದ ಎಂದರೆ ಮನೆಯಲ್ಲಾಡುವ ಭಾಷಾ ವಿಷಯದಿಂದ, ಗೊತ್ತಿಲ್ಲದ ವಿಷಯಕ್ಕೆ ಎಂದರೆ ಶಾಲೆಯಲ್ಲಿ ಕಲಿಯುವ ಭಾಷಾ ವಿಷಯಕ್ಕೆ ಅವರನ್ನೂ ಕೊಂಡೊಯ್ಯಬೇಕು. ಅವರ ಕಲಿಕೆಯಲ್ಲಿ ಕಂಡುಬರುವ ತಪ್ಪುಗಳು ಮತ್ತು ನ್ಯೂನತೆಗಳನ್ನು ತಿದ್ದಬೇಕು. ಭಾಷಾ ಶಿಕ್ಷಣದಲ್ಲಿ ಮಕ್ಕಳಿಗೆ ಗ್ರಹಿಸುವ ಮತ್ತು ಸ್ಮರಿಸುವ ಶಕ್ತಿ ಇನ್ನೂ ಬೆಳೆದಿರುವುದಿಲ್ಲ. ಆದುದರಿಂದ ಒಂದು ವಿಷಯ ಅಥವಾ ವಾಕ್ಯವನ್ನು ಹತ್ತಾರು ಬಾರಿ ಬಾಯಿಂದ ಜೋರಾಗಿ ಹೇಳಿಸಿ ಮನದಟ್ಟು ಮಾಡಿಕೊಡಬೇಕು. ತಪ್ಪುಗಳು ಕಂಡು ಬಂದಾಗ ತಿದ್ದಬೇಕು ಮತ್ತು ಪುನರಾವರ್ತನೆಯಾಗುವಂತೆ ಮಾಡಬೇಕು.

ಮಕ್ಕಳು ಮನೆಯಲ್ಲಿ ಆಡುವ ಭಾಷೆಯೂ, ಸಮಾಜದಲ್ಲಿ ಆಡುವ ಭಾಷೆಯೂ ಒಂದೇ. ಇದರಲ್ಲಿ ಮನೆಯ ವಾತಾವರಣ, ತಂದೆ-ತಾಯಿಯ ವಿದ್ಯಾಭ್ಯಾಸದ ಮಟ್ಟ, ಸಾಂಸ್ಕೃತಿಕ ಮತ್ತು ಆರ್ಥಿಕ ಹಿನ್ನೆಲೆಯ ಪ್ರಭಾವ ಪ್ರಮುಖ ಪಾತ್ರವಹಿಸುತ್ತವೆ. ಶಾಲೆಯಲ್ಲಿ ಕೊಡುವ ಶಿಕ್ಷಣವು ಮೊದಲ ಹಂತದಲ್ಲಿ ಲಿಪಿ ಮೂಲಕ ಭಾಷೆಯನ್ನು ಓದುವುದು ಮತ್ತು ಬರೆಯುವುದನ್ನೂ ಕಲಿಸುತ್ತದೆ. ಕ್ರಮೇಣ ಲಿಪಿಯ ಉಚ್ಚಾರ, ವ್ಯಾಕರಣ ಮತ್ತು ಬರವಣಿಗೆಯ ಶುದ್ಧತೆ ಮುಂತಾದ ವಿಷಯಗಳ ಮೇಲೆ ಶಿಕ್ಷಣ ನೀಡಲಾಗುತ್ತದೆ.

ಮನೆಯಲ್ಲಿ ಶಿಶುವು ಮಾತು ಕಲಿಯುವ ಮೊದಲೇ ಗ್ರಹಣ ಶಕ್ತಿ ಬೆಳೆದಿರುತ್ತದೆ. ಪದಗಳನ್ನು ಕೇಳಿ ಅದರಂತೆ ವರ್ತಿಸುತ್ತದೆ. ೫ ರಿಂದ ೬ನೇ ವರ್ಷದ ವೇಳೆಗೆ ಹೇಳಿದ ವಿಷಯಗಳನ್ನು ಗ್ರಹಿಸಲು ಮತ್ತು ಅರ್ಥಮಾಡಿಕೊಳ್ಳಲು ಸಮರ್ಥವಾಗುತ್ತದೆ. ಶಿಶುವು ಕೇವಲ ಪದಗಳನ್ನು ಕೇಳಿ ವಿಷಯ ಗ್ರಹಿಸುವುದಕ್ಕಿಂತ ಸುಲಭವಾಗಿ ಚಿತ್ರಗಳನ್ನು ನೋಡಿ ಮತ್ತು ನಾವು ಮಾಡುವ ಸಂಜ್ಞೆಗಳನ್ನು ಗಮನಿಸಿ ವಿಷಯವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳುತ್ತದೆ. ಕ್ರಮೇಣ ಇತರರನ್ನು ಅನುಕರಿಸಿ ಪದಗಳ ಉಚ್ಚಾರಣೆಯನ್ನು ತಿಳಿಯುತ್ತದೆ ಮತ್ತು ಅದರಂತೆ ಉಚ್ಚರಿಸುತ್ತದೆ. ಮುಂದೆ ಶಿಶುವು ದೊಡ್ಡದಾಗಿ ತಿಳಿವಳಿಕೆ ಬರುವ ವಯಸ್ಸಿಗೆ ಬಂದ ನಂತರ ಶಾಲೆಯಲ್ಲಿ ವಾಕ್ಯಗಳನ್ನು ರಚಿಸುವುದು ಮತ್ತು ಪದಗಳನ್ನು ಸರಿಯಾಗಿ ಉಚ್ಚರಿಸುವುದನ್ನು ಕಲಿಯುತ್ತದೆ. ಮನೆಯಲ್ಲಾಡುವ ಭಾಷೆ ಕೇವಲ ಅನುಕರಣೆ ಮತ್ತು ಅಭ್ಯಾಸ ಬಲದಿಂದ ಮಾತ್ರ. ಆದರೆ ಶಾಲೆಯಲ್ಲಿ ಭಾಷೆಯನ್ನು ಕಲಿಯುವಾಗ ಶಿಶುವು ವ್ಯಾಕರಣ, ವಾಕ್ಯರಚನೆ ಮತ್ತು ಸರಿಯಾದ ಪದಗಳನ್ನು ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸುವುದನ್ನು ಕಲಿಯುತ್ತದೆ. ಮನೆಯಲ್ಲಾಡುವ ಭಾಷೆ ಕೇವಲ ಶ್ರುತಿ ಮತ್ತು ಪುನರುಚ್ಚಾರದಿಂದ ಕೂಡಿರುತ್ತದೆ. ಆದರೆ ಶಾಲೆಯಲ್ಲಿ ಕಲಿಯುವ ಭಾಷೆ ಬರವಣಿಗೆಯಿಂದ ಕೂಡಿರುತ್ತದೆ. ಆದುದರಿಂದ ಶಾಲಾ ಬೋಧನೆಯಲ್ಲಿ ಲಿಪಿ ಮತ್ತು ಅಕ್ಷರಗಳ ಬರವಣಿಗೆಗೆ ಮಹತ್ವ ಕೊಡಲಾಗುತ್ತದೆ.

ಶಾಲಾ ಭಾಷೆ ಕಲಿಕೆಯಲ್ಲಿ ಶಿಶುವಿನ ವಯಸ್ಸಿಗನುಗುಣವಾಗಿ ಮತ್ತು ಹಂತ ಹಂತವಾಗಿ ಬೋಧನೆಯನ್ನು ಅದಕ್ಕಾಗಿ ಶಿಕ್ಷಣತಜ್ಞರು ಬರೆದ ಪುಸ್ತಕಗಳ ಮೂಲಕ

ಕಲಿಸಲಾಗುತ್ತದೆ. ಶಾಲಾ ಭಾಷಾ ಬೋಧನೆಯಲ್ಲಿ ಅನೇಕ ಉಪಕರಣಗಳನ್ನು ಮತ್ತು ಬೋಧನಾ ಸಾಮಗ್ರಿಗಳನ್ನು ಉಪಯೋಗಿಸಲಾಗುತ್ತದೆ. ಇವುಗಳ ಮೂಲಕ ಶಿಶುವು ತನ್ನ ಭಾಷಾ ಸಾಮರ್ಥ್ಯ ಮತ್ತು ಗ್ರಹಣ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ.

ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಮನೆಯ ಭಾಷೆ ಮನೆಗೆ, ಶಾಲೆಯ ಭಾಷೆ ಶಾಲೆಗೆ ಎಂಬಂತೆ ಆಗಬಾರದು. ಎರಡಕ್ಕೂ ಸಂಬಂಧ ಮತ್ತು ಸಂಪರ್ಕ ಕಲ್ಪಿಸಿದರೆ ಮಾತ್ರ ಶಿಶುವಿನ ವಿದ್ಯಾಭ್ಯಾಸ ಅರ್ಥಪೂರ್ಣ ಮತ್ತು ಉಪಯುಕ್ತ.

ಶಾಲೆಯಲ್ಲಿ ಭಾಷೆಯ ಕಲಿಕೆ ನಾಲ್ಕು ಘಟ್ಟಗಳಲ್ಲಿ ಬೆಳೆಯುತ್ತದೆ.

೧ ಗ್ರಹಿಕೆ

೨ ಶಬ್ದಕೋಶ ರಚನೆ

೩. ವಾಕ್ಯರಚನೆ ಮತ್ತು

೪ ಸರಿಯಾದ ಉಚ್ಚಾರಣೆ

ಶಿಶುವು ಪದಗಳನ್ನು ಉಪಯೋಗಿಸುವುದಕ್ಕೂ ಮುನ್ನವೇ ಅದರ ಗ್ರಹಣಶಕ್ತಿ ಬೆಳೆದಿರುತ್ತದೆ. ಮಾತನಾಡುವುದಕ್ಕಿಂತ ಹೆಚ್ಚು ಪದಗಳನ್ನು ಗ್ರಹಿಸಬಲ್ಲದಾಗಿರುತ್ತದೆ. ಯಾವ ಭಾಷೆಯನ್ನಾಗಲಿ ಕಲಿಯುವ ಕ್ರಿಯೆಗಿಂತ ಅದರ ಗ್ರಹಿಕೆ ಮುಖ್ಯವಾದುದು. ಕೇವಲ ಪದಗಳ ಉಚ್ಚಾರಣೆಗಿಂತ, ಅವುಗಳ ಅರ್ಥವನ್ನು ಶಿಶು ಗ್ರಹಿಸುವಂತೆ ಸಂಜ್ಞೆಗಳನ್ನು ಮಾಡುವುದರಿಂದ ಅರ್ಥವನ್ನು ಶಿಶುವು ಸುಲಭವಾಗಿಯೂ ಶೀಘ್ರವಾಗಿಯೂ ಗ್ರಹಿಸುತ್ತದೆ.

ಒಂದು ಶಿಶುವಿನ ಶಬ್ದಕೋಶದ ಮಟ್ಟವು ಶಿಶುವಿನ ಬುದ್ಧಿ ಮತ್ತು ಪ್ರೇರಕ ಶಕ್ತಿಗಳಿಂದ ಕೂಡಿರುತ್ತದೆ. ಶಾಲೆಗಳಲ್ಲಿ ರೇಡಿಯೋ, ದೂರದರ್ಶನ ಮತ್ತು ಚಲನಚಿತ್ರಗಳ ಬಳಕೆಯಿಂದ ಶಿಶುವಿನ ಶಬ್ದಕೋಶವನ್ನು ಹೆಚ್ಚಿಸಬಹುದು.

ಆರಂಭದಲ್ಲಿ ಶಿಶುವು ಎರಡು ಅಥವಾ ಮೂರು ಪದಗಳ ವಾಕ್ಯಗಳನ್ನು ರಚಿಸುವ ಸಾಮರ್ಥ್ಯ ಪಡೆದಿರುತ್ತದೆ. ಕ್ರಮೇಣ ಹೆಚ್ಚು ಪದಗಳಿಂದ ಕೂಡಿದ ಉದ್ದವಾದ ವಾಕ್ಯಗಳನ್ನು ರಚಿಸಲು ಕಲಿಯುತ್ತದೆ.

ಶಿಶುವು ಇತರರು ಪದಗಳನ್ನು ಉಚ್ಚರಿಸುವುದನ್ನೂ ಕೇಳಿಕೊಂಡು ಅದನ್ನು ಅನುಕರಣೆ ಮಾಡುತ್ತದೆ. ಸರಿಯಾದ ಮತ್ತು ಶುದ್ಧವಾದ ಉಚ್ಚಾರಣೆಗೆ ಮೂಲ ಪ್ರೇರಕವಾದುದು ಸೂಕ್ತ ತರಬೇತಿ ಮತ್ತು ಪ್ರೇರಣೆ.

ಸಮೂಹ ಮಾಧ್ಯಮಗಳ ಮೂಲಕ ಶಾಲೆಗಳಲ್ಲಿ ಮಕ್ಕಳಿಗೆ ಭಾಷೆಯನ್ನು ಬಹಳ ಪರಿಣಾಮಕಾರಿಯಾಗಿ ಕಲಿಸಬಹುದು. ಸಮೂಹ ಮಾಧ್ಯಮಗಳೆಂದರೆ ಪಠ್ಯಪುಸ್ತಕಗಳು, ಚಿತ್ರಗಳು, ವಿಡಿಯೋ, ಉಜ್ಜೀವಿತ ಚಿತ್ರಗಳು, ಶಬ್ದ ಮತ್ತು ಧ್ವನಿ ಇವು ಭಾಷಾ ಕಲಿಕೆಗೆ ಪೂರಕ.

ಮಕ್ಕಳು ಮನೆಯಲ್ಲಿ ಆಡುವ ಭಾಷೆಗೂ ಶಾಲೆಯಲ್ಲಿ ಕಲಿಯುವ ಭಾಷೆಗೂ ಸಂಪರ್ಕ ಕಲ್ಪಿಸಬೇಕಾದರೆ ಅವರು ಮನೆಯಲ್ಲಿ ಆಡುವ ಭಾಷೆಯಲ್ಲಿ ಓದುವುದನ್ನೂ ಬರೆಯುವುದನ್ನೂ ಆರಂಭದಿಂದ ಕಲಿಸಬೇಕು. ಆಡು ಭಾಷೆಯನ್ನು ಮಕ್ಕಳು ವ್ಯವಸ್ಥಿತವಾಗಿ ಮತ್ತು ವ್ಯಾಕರಣಬದ್ಧವಾಗಿ ಓದುವುದು ಮತ್ತು ಬರೆಯುವುದನ್ನು ಚೆನ್ನಾಗಿ ಕಲಿಯುತ್ತಾರೆ. ಕ್ರಮೇಣ ಮಕ್ಕಳಿಗೆ ತರಬೇತಿಯನ್ನು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ಶಾಲೆಯ ಭಾಷೆಯಲ್ಲಿ ಕೊಡಲು ಸಾಧ್ಯವಾಗುತ್ತದೆ.

ಹೀಗೆ ಪ್ರಥಮದಲ್ಲಿ ಮಕ್ಕಳು ವ್ಯವಸ್ಥಿತವಾಗಿ ಹಾಗೂ ಕ್ರಮಬದ್ಧವಾಗಿ ಒಂದು ಭಾಷೆಯನ್ನು ಕಲಿಯಬೇಕಾದ ಮನೆಯ ವಾತಾವರಣ ಹೇಗೆ ಮುಖ್ಯವೊ ಹಾಗೇ ಶಾಲೆಯ ಪರಿಸಂವೂ ಅಷ್ಟೇ ಪ್ರಮುಖವಾಗಿರುತ್ತದೆ. ಈ ಎರಡು ವಾತಾವರಣಗಳು ಮಗುವಿನ ಭಾಷಾ ಕಲಿಕೆಗೆ ಸುಶಿಕ್ಷಿತವಾಗಿದ್ದಾಗ ಅದು ಬೇಗ ತನ್ನ ಭಾಷೆಯನ್ನು ಕಲಿಯುವುದೇ ಅಲ್ಲದೆ ಆ ಭಾಷೆಯ ಮೇಲೆ ಪ್ರೌಢಿಮೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಕಾರಣ ಒಂದು ಮಗು ತನ್ನ ಬುದ್ಧಿ ವಿಕಾಸಕ್ಕೆ ಹಾಗೂ ಸಮಾಜದಲ್ಲಿ ಸುಸಂಸ್ಕೃತನಾಗಿ ಬೆಳೆಯಲು ಮೂಲಕಾರಣ ಭಾಷೆ. ಇದೇ ಅದರ ಅಡಿಪಾಯ ಕೂಡ. ಆದ್ದರಿಂದ ಮಗುವಿಗೆ ಬೆಳವಣಿಗೆಯಲ್ಲಿಯೇ ಅದಕ್ಕೆ ವ್ಯವಸ್ಥಿತವಾಗಿ ಭಾಷಾಜ್ಞಾನ ಬೆಳೆಸಿದರೆ ಸಮಾಜದಲ್ಲಿ ಅದು ವ್ಯವಸ್ಥಿತವಾಗಿ ಬಾಳಲು ಸಾಧ್ಯವಾಗುತ್ತದೆ. ಆದ್ದರಿಂದ ಮಗುವಿನ ಭಾಷಾ ಕಲಿಕೆಯಲ್ಲಿ ಈ ಎರಡೂ ಪರಿಸರದ ಪಾತ್ರವು ತುಂಬ ಮುಖ್ಯ. ಒಂದು ಇನ್ನೊಂದನ್ನು ಅವಲಂಬಿಸಿರುವುದರಿಂದ ಎರಡೂ ಕಡೆ ಅನುಕೂಲಕರವಾದ ಹಾಗೂ ಭಾಷಾ ಕಲಿಕೆಗೆ ಸುಲಭವಾದ ವಾತಾವರಣ ಮುಖ್ಯ. ಹೀಗಿದ್ದಾಗ ಮಗು ತನ್ನ ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳುವಲ್ಲಿ ಯಾವುದೇ ಸಂಶಯವಿಲ್ಲ.

ಗಾನಪ್ಪನಹಟ್ಟಿ ಗೊಲ್ಲರ ಮರಣ ಸಂಪ್ರದಾಯ

ವಿ. ವಿಜಯಮ್ಮ

ಮಾನವನಿಗೆ ಹುಟ್ಟು ಮತ್ತು ಸಾವು ಎಂಬುದು ಸೃಷ್ಟಿಯ ಸಹಜ ಪ್ರಕ್ರಿಯೆಗಳಾಗಿವೆ. ಹಾಗೇ ಪ್ರಪಂಚದ ಮೇಲೆ ಜನಿಸಿದಂತಹ ಯಾವ ಜೀವಿಗಾಗಲೀ ಅದಕ್ಕೊಂದು ಅಂತ್ಯ ಇದ್ದೇ ಇರುತ್ತದೆ. ಪ್ರಾಣಿಗಿಂತ ಮನುಷ್ಯ ಎಲ್ಲಾ ವಿಧದಲ್ಲೂ ಭಿನ್ನವಾಗಿರುವುದರಿಂದ ಮನುಷ್ಯನು ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಕ್ರಿಯೆಗಳನ್ನು ಗುರುತಿಸಿರುವುದನ್ನು ನಾವು ನೋಡಬಹುದು. ಒಂದು ಮಗು ತಾಯಿಯ ಹೊಟ್ಟೆಯಲ್ಲಿ ಇದ್ದಾಗ ಅದು ತಾಯಿಯ ಗರ್ಭದಿಂದ ಹೊರ ಬಂದಾಗ, ಹಾಗೇ ಯೌವನಕ್ಕೆ ಬಂದಾಗ, ಹಾಗೇ ಅವನು ಸತ್ತಾಗಲೂ ಅವನಿಗೆ ಅಂತಿಮ ನಮನವನ್ನು ಸಲ್ಲಿಸಲು ಶವಸಂಸ್ಕಾರ ಕ್ರಿಯೆಯನ್ನು ಮಾಡುವರು. ಈ ಕ್ರಿಯೆ ಒಬ್ಬ ವ್ಯಕ್ತಿಯ ಹುಟ್ಟಿನಷ್ಟೇ ಪ್ರಮುಖವಾದಂತಹ ಅಂತಿಮ ಘಟ್ಟ ಎನ್ನಬಹುದು.

ಗೊಲ್ಲ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ಮರಣ ಹೊಂದಿದ ತಕ್ಷಣ ಮನೆಯಿಂದ ಹೊಸ್ತಿಲ ಹೊರಗೆ ಕರಿ ಕಂಬಳಿ ಜಾಡಿ (ಗದ್ದಿಗೆ) ಹಾಸಿ ಸತ್ತಂತ ವ್ಯಕ್ತಿಯನ್ನು ಪೂರ್ವ-ಪಶ್ಚಿಮವಾಗಿ ಜಾಡಿಯ ಮೇಲೆ ಮಲಗಿಸುತ್ತಾರೆ. ಅನಂತರ ತಲೆಯ ಹಿಂಭಾಗಕ್ಕೆ ಒಂದು ಮಗಿಯಲ್ಲಿ ನೀರನ್ನು ತುಂಬಿಟ್ಟು ಹಾಗೇ ಒಂದು ತೆಂಗಿನಕಾಯಿ, ಒಂದು ವಿಭೂತಿ, ಒಂದು ಲೋಟದಲ್ಲಿ ಅಕ್ಕಿ, ಹಾಗೆ ಸಗಣಿ ಉಂಡೆ ಮಾಡಿ ಅದರ ಮೇಲೆ ಮಣ್ಣಿನ ದೀಪವನ್ನು ಹಚ್ಚಿ ಇಡುತ್ತಾರೆ. ರಾತ್ರಿಯ ವೇಳೆ ಸತ್ತಿದ್ದರೆ ಆ ರಾತ್ರಿಯೆಲ್ಲಾ ಭಜನೆ, ಪೂಜೆ, ಪುರಸ್ಕಾರಗಳಿಂದ, ದೇವರ ಪ್ರಾರ್ಥನೆಗಳಿಂದ ಕಾಲಹರಣ ಮಾಡುತ್ತಾರೆ. ಕಾರಣ ಸತ್ತಂತ ವ್ಯಕ್ತಿಯನ್ನು ಒಂಟಿಯಾಗಿ ಬಿಟ್ಟು ಮಲಗಿದರೆ ಸತ್ತಂತ ವ್ಯಕ್ತಿ ದೆವ್ವವಾಗುವುದೆಂಬ ನಂಬಿಕೆಯಿಂದ ಆ ರಾತ್ರಿ ಇಡೀ ಮಲಗದೆ ಮನೆಯ ಮುಂದೆ ಬೆಳಕಿಗಾಗಿ ಸಗಣಿಯ ಕುಳ್ಳಿಗೆ (ಬೆರಣಿ) ಬೆಂಕಿ ಹಾಕಿ ಎದ್ದು ಕುಳಿತುಕೊಂಡು ಕಾಲ ಕಳೆಯುತ್ತಾರೆ. ಅವನು ಸತ್ತ ತಕ್ಷಣ ಅವನಿಗೆ ಸೇರಿದ ಬಂಧು-ಬಾಂಧವರಿಗೆ ರಕ್ತ ಸಂಬಂಧಿಗಳಿಗೆ ಸುದ್ದಿಯನ್ನು ತಿಳಿಸಲು ಹರಿಜನರ ಒಬ್ಬ ವ್ಯಕ್ತಿಯನ್ನು ಕಳುಹಿಸುವರು. ಸಾವಿನ ಸುದ್ದಿಯನ್ನು ತೆಗೆದುಕೊಂಡು ಹೋದ ವ್ಯಕ್ತಿಗೆ ಬಂಧುಗಳು ದಾರಿ ಖರ್ಚು, ದವಸ, ಧಾನ್ಯ, ಊಟ ಕೊಟ್ಟು ಕಳುಹಿಸುವ ಪ್ರತೀತಿಯಿದೆ. ಅಲ್ಲದೆ ಬಂಧು-ಬಾಂಧವರು ರಕ್ತಸಂಬಂಧಿಗಳು ಬರುವವರೆಗೂ ಶವವನ್ನು ಹೂಳುವುದಿಲ್ಲ. ಬಂಧುಗಳೆಲ್ಲ ಆಗಮಿಸಿದ ನಂತರ ಶವಕ್ಕೆ ಸ್ನಾನ ಮಾಡಿಸಿ ಈ ಮೊದಲೇ ಕರಿಕಂಬಳಿ ಜಾಡಿಯನ್ನು ಹಾಸಿ ಅದಕ್ಕೆ ಪೂಜೆ ಮಾಡಿ ಅದರ ಮೇಲೆ ಸ್ನಾನ ಮಾಡಿಸಿದಂತಹ ಹೆಣವನ್ನು ಹಿಡಿಯುತ್ತಾರೆ. ಬಳಿಕ ಶವಕ್ಕೆ ಐದು ಮೀಟರ್ ಉದ್ದದ ಬಿಳಿಯ ಹೊಸ ಬಟ್ಟೆಯನ್ನು ಹೊದಿಸುತ್ತಾರೆ. ತಲೆಗೆ ರುಮಾಲು

ಸುತ್ತಿ, ಹಣೆಗೆ ವಿಭೂತಿಯಿಟ್ಟು ಅದರ ಮೇಲೆ ಕುಂಕುಮ ಇಡುತ್ತಾರೆ. ಕಣ್ಣುಗಳಿಗೆ ಅಕ್ಕಿಯನ್ನು ಹಾಕುತ್ತಾರೆ. ಎಲೆ-ಅಡಿಕೆಯನ್ನು ಕುಟ್ಟಿ ಬಾಯಿಗೆ ತುಂಬುವರು. ಏಕೆಂದರೆ ಸಾಯುವ ಸಮಯದಲ್ಲಿ ಅವನು ಕಣ್ಣು ಹಾಗೂ ಬಾಯಿಯನ್ನು ಬಿಟ್ಟುಕೊಂಡು ಸತ್ತಿದ್ದರೆ ಅದನ್ನು ನೋಡಿ ಹೆದರಿಕೊಳ್ಳುವ ಸಂಭವವಿರುತ್ತದೆ ಎಂದು ಹಾಗೇ ಮಾಡುತ್ತಾರೆ. ಹೆಣಕ್ಕೆ ಹೂಗಳಿಂದ ಶೃಂಗರಿಸಿ ಬಂದಂತಹ ಬಂಧುಗಳೆಲ್ಲ ಪೂಜೆಯನ್ನು ಮಾಡಿ ಅಂತಿಮ ನಮನವನ್ನು ಸಲ್ಲಿಸುತ್ತಾರೆ. ಇದಾದ ಬಳಿಕ ಹೆಣವನ್ನು ಸ್ಮಶಾನಕ್ಕೆ ಸಾಗಿಸಲು ಚಟ್ಟ (ಹೆಣವನ್ನು ಹೊತ್ತು ಹೋಗುವ ಸಾಧನ) ವನ್ನು ತಯಾರಿಸುತ್ತಾರೆ. ಅದಕ್ಕೆ ಬೇಕಾಗುವ ವಸ್ತುಗಳೆಂದರೆ ಐದು ಕಳ್ಳಿಗಳ (ಗೂಟ) ಎರಡು ಹಸಿ ತೆಂಗಿನ ಗರಿ ಹಾಕಿ ಚಟ್ಟವನ್ನು ಸಿದ್ಧಪಡಿಸುವರು. ಗುರುಹಿರಿಯರು ಸತ್ತ ವ್ಯಕ್ತಿಯ ಸಂಬಂಧಿಗಳು ಹೆಣಕ್ಕೆ ಕಾಯಿ ಹೊಡೆದು ಪೂಜೆ ಮಾಡಿ ಅದರ ಕಾಲಿಗೆ ನಮಸ್ಕರಿಸಿ, ಅನಂತರ ಅದನ್ನು ಎತ್ತಿ ಚಟ್ಟದ ಮೇಲೆ ಮಲಗಿಸುವರು. ದೇವರ ಪ್ರಾರ್ಥನೆಯೊಂದಿಗೆ ಹೆಣವನ್ನು ನಾಲ್ಕು ಜನ ಹೊತ್ತಿಕೊಂಡು ಹೋಗುತ್ತಾರೆ. ಪ್ರಾರಂಭದಲ್ಲಿ ಸತ್ತವನ ಮಕ್ಕಳು ಭುಜವನ್ನು ಕೊಡಬೇಕು. ಹೆಣವನ್ನು ಸ್ಮಶಾನಕ್ಕೆ ಕೊಂಡೊಯ್ಯುವಾಗ ದಾರಿಯ ಮಧ್ಯದಲ್ಲಿ ವೀಳ್ಯೆದೆಲೆ, ಮಂಡಕ್ಕಿ ಉಳ್ಳಂತವರು ಚಿಲ್ಲರೆ ಬಿಡಿಗಾಸನ್ನು ಶವದ ಮೇಲೆ ತೂರುತ್ತಾ ಮುನ್ನಡೆಯುತ್ತಾರೆ. ಸ್ಮಶಾನ ಮುಟ್ಟುವುದಕ್ಕೆ ಮಧ್ಯದಲ್ಲಿ ಮೂರು ಹತ್ತಿರ ನಿಲ್ಲಿಸುತ್ತಾರೆ. ಕಾರಣ ಮುಂದಿನವರು ಹಿಂದಕ್ಕೆ, ಹಿಂದಿನವರು ಮುಂದಕ್ಕೂ ಹೆಗಲನ್ನ ಬದಲಾಯಿಸಬೇಕು ಎಂಬ ನಂಬಿಕೆ ನಡೆದುಕೊಂಡು ಬಂದಿದೆ. ಇದರಲ್ಲಿ ಕೆಲವು ಮನೆತನದವರು ಚಟ್ಟವನ್ನು ಕಟ್ಟದೆ ಜಾಡಿಯ ಮೇಲೆ ಮಲಗಿಸಿದಂತಹ ಹೆಣವನ್ನು ಹಾಗೇ ಹಿಡಿದುಕೊಂಡು ಹೋಗುವ ರೂಢಿಯು ಸಹ ಇದೆ. ಈ ಮೊದಲೇ ಹೆಣವನ್ನು ಹೂಳುವ ಜಾಗದಲ್ಲಿ ಗುಂಡಿಯನ್ನು ತೋಡಲು ಹರಿಜನರನ್ನು ಕಳುಹಿಸುತ್ತಾರೆ. ಅಕಸ್ಮಾತ್ ಆ ಊರಲ್ಲಿ ಹರಿಜನರು ಇಲ್ಲದಿದ್ದಾಗ ಸತ್ತ ವ್ಯಕ್ತಿಯ ಸಂಬಂಧಿಗಳೇ ಗುಂಡಿಯನ್ನು ತೋಡುವರು. ಸುಮಾರು ೬ಅಡಿ ಉದ್ದ, ೨ವರೆ ಅಡಿ ಅಗಲ, ೩ಅಡಿ ಆಳದ ಗುಂಡಿಯನ್ನು ತೆಗೆದು ಅದರ ತಳಕ್ಕೆ ತಂಕಟ ಸೊಪ್ಪು ಹಾಕಿ ಅದನ್ನು ಸಿದ್ಧಗೊಳಿಸುತ್ತಾರೆ. ತಂಕಟ ಸೊಪ್ಪು ಎಂದು ಅಡವಿಗೊಲ್ಲರು ಇಟ್ಟ ಹೆಸರಿನ ಗಿಡ ೩ ಅಡಿ ಎತ್ತರದ ಒಂದು ಸಸ್ಯ ಜಾತಿಯದು.

ಗುಂಡಿಯ ಹತ್ತಿರ ಹೊತ್ತು ತಂದ ಹೆಣವನ್ನು ಇಳುಹಿಸಿ ಮತ್ತೆ ಪೂಜೆಯನ್ನು ಮಾಡಿದ ನಂತರ ಗುಂಡಿಯನ್ನು ಪೂಜಿಸಿ ಹೊದಿಸಿದ ಬಟ್ಟೆಯನ್ನು ತೆಗೆದು ಬೆತ್ತಲೆಯಾಗಿ ಗುಂಡಿಯೊಳಗಿಟ್ಟು ಮೊದಲಿಗೆ ಹೆಣದ ಮೇಲೆ ತಂಕಟ ಸೊಪ್ಪನ್ನು ಹೊದಿಸಿ ಹಾಗೇ ತಲೆಯ ಕಡೆ ಒಂದು ಒಣಗಿದ ತೆಂಗಿನ ಕಾಯಿಯನ್ನು ಇಟ್ಟು ಬಂದಂತವರೆಲ್ಲ ೩ ಬೊಗಸೆ ಮಣ್ಣನ್ನು ಪಾದದ ಕಡೆಯಿಂದ ಹಾಕುತ್ತಾ ಬಂದು ಎಲ್ಲರೂ ಮಣ್ಣನ್ನು ಕೊಟ್ಟು ನಂತರ ಚಲಿಕೆಯಿಂದ (ಗುದ್ದಲಿ) ಸಂಪೂರ್ಣವಾಗಿ ಮಣ್ಣನ್ನು ಎಳೆದು ಗುಂಡಿಯನ್ನು ಮುಚ್ಚಿ ಕಟ್ಟೆಯೋಪಾದಿಯಲ್ಲಿ ಗುಡ್ಡೆಯನ್ನು ನಿರ್ಮಿಸುತ್ತಾರೆ (ಸಮಾಧಿ). ಬಳಿಕ ಹೆಣದ ಮೇಲೆ ಇದ್ದು, ತೆಗೆದು ಹಾಕಿದಂತಹ ಹೂವನ್ನು ಗುಡ್ಡೆಯ ಮೇಲೆ ಹಾಕುತ್ತಾರೆ. ಸತ್ತ ವ್ಯಕ್ತಿಯ ಮೊಮ್ಮಗ ಅಥವಾ ಮಗಳ

ಮಗನ ಭುಜದ ಮೇಲೆ ನೀರು ತುಂಬಿದ ಮಗಿಯನ್ನಿಟ್ಟು ಅವನನ್ನು ಸಮಾಧಿಯ ಸುತ್ತ ೩ ಸುತ್ತು ತಿರುಗಿಸುತ್ತಾರೆ. ಅವನು ಒಂದೊಂದು ಸುತ್ತು ತಿರುಗುತ್ತಾ ಇದ್ದಾಗೇ ಆ ಮಗಿಯನ್ನು ಕಲ್ಲಿನಿಂದ ಕುಕ್ಕುತ್ತಾರೆ. ಹೀಗೆ ಮೂರು ಬಾರಿ ಮಾಡಿದ ನಂತರ ಕೊನೆಯ ಸುತ್ತಿನಲ್ಲಿ ಅವನು ಗುಡ್ಡೆಯನ್ನು ಸುತ್ತಿ ಅದನ್ನು ಶವದ ತಲೆಯ ಕಡೆಗೆ ನಿಂತು ಹಿಂದಿನಿಂದ ಎತ್ತಿಹಾಕಿ ಅವನು ಮುಂದಕ್ಕೆ ಹೋಗುತ್ತಾನೆ. ಈ ಕ್ರಮವನ್ನು 'ತಲೆದೀಯುವುದು' ಎಂಬ ಹೆಸರಿನಿಂದ ಕರೆಯಲಾಗಿದೆ. ತದನಂತರ ಗುಡ್ಡೆಗೆ ಮತ್ತೊಮ್ಮೆ ಪೂಜಿಸಿ ಅದರ ಮೇಲೆ ಕಳ್ಳೆ (ಮುಳ್ಳು)ಯನ್ನು ಬಡಿದು ಅದು ಗಾಳಿಗೆ ಹೋಗದಹಾಗೆ ಆ ಕಳ್ಳೆಯ ಮೇಲೆ ಒಂದು ದೊಡ್ಡ ಬಂಡೆಯನ್ನು ಹೇರುತ್ತಾರೆ. ಇದಕ್ಕೆ ೨ ಕಾರಣಗಳಿವೆ. (೧) ನಾಯಿ-ನರಿ ಆ ಗುಡ್ಡೆಯನ್ನು ಕೀಳಬಾರದೆಂದು (೨) ಸತ್ತ ವ್ಯಕ್ತಿಯು ದೆವ್ವವಾಗುತ್ತದೆ ಎಂಬ ನಂಬಿಕೆಯಿರುವುದರಿಂದ ಅದು ಹೊರಗೆ ಬರದ ಹಾಗೇ ಕಳ್ಳೆಯನ್ನು ಬಡಿದು ಬಂಡೆಯನ್ನು ಏರುವಂತಹ ರೂಢಿಯಿದೆ. ಹೀಗೆ ಹೆಣವನ್ನು ಊಳಿದ ಮೇಲೆ ಅವರಿಗೆ ಹೊಡೆದ ಕಾಯಿಯನ್ನು, ಹಸಿ ಹಿಟ್ಟಿನಿಂದ ಮಾಡಿದ ತಂಬಿಟ್ಟನ್ನು ತಿಂದು ಕೈಕಾಲು ಮುಖ ತೊಳೆದು ಎಲೆ-ಅಡಿಕೆಯನ್ನು ಸಂಬಂಧಿಕರಿಗೆ ಕೊಟ್ಟು, ನಮ್ಮ ಸಂಬಂಧ ಸತ್ತ ವ್ಯಕ್ತಿಯೊಂದಿಗೆ ಕೊನೆಗೊಳ್ಳದೆ ಮುಂದುವರೆಯುತ್ತಾ ಹೋಗಲಿ ಎಂಬ ನಂಬಿಕೆಯಿಂದ ತಾಂಬೂಲವನ್ನು ಹಂಚಿ ಎಲ್ಲರೂ ಮನೆಗೆ ಹಿಂದಿರುಗುವರು. ಇಲ್ಲಿ ಗಮನಿಸಬೇಕಾದ ವಿಶಿಷ್ಟ ಸಂಗತಿ ಎಂದರೆ ಸತ್ತ ವ್ಯಕ್ತಿಯ ಹೆಂಡತಿಯು ಮುತ್ತೈದೆ ಲಕ್ಷಣಗಳುಳ್ಳ ವಸ್ತುಗಳನ್ನು ತೆಗೆಯದೆ ಇರುವುದು. ಇದಕ್ಕೆ ಕಾರಣವೆಂದರೆ, ಈ ಜನರು ಶ್ರೀಕೃಷ್ಣನನ್ನು ತಮ್ಮ ಗಂಡನೆಂದು ತಿಳಿದಿರುವುದರಿಂದ ತಾಳಿ, ಬಳೆ, ಕಾಲುಂಗುರ, ಕುಂಕುಮ, ಹೂ ಮೊದಲಾದ ಮುತ್ತೈದೆಗೆ ಇರುವ ವಸ್ತುಗಳನ್ನು ತೆಗೆಯದೆ ಸದಾ ಕಾಲ ತಾವು ಸಾಯುವವರೆಗೂ ಹಾಕಿಕೊಂಡು ಇರುವುದನ್ನು ನೋಡಬಹುದು.

ಇತ್ತಕಡೆ ಅಂದರೆ ಸತ್ತ ವ್ಯಕ್ತಿಯ ಮನೆಯಲ್ಲಿ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದ ತಕ್ಷಣ ಮನೆಯಲ್ಲಿ ಯಾವುದೇ ನೀರಾಗಲೀ ಆಹಾರವಾಗಲೀ ಇಲ್ಲದಂತೆ ಖಾಲಿ ಮಾಡಿ, ಮನೆಯಲ್ಲಿನ ಕಸ ತೆಗೆದು, ತೊಳೆದು ಮನೆಯ ಮುಂದಿನ ಅಂಗಳಕ್ಕೆ ಸಗಣಿ ನೀರು ಹಾಕಿ ರಂಗವಲ್ಲಿಯನ್ನು ಬಿಟ್ಟು ಒಂದು ತುಂಬಿದ ಗಡಿಗೆಯಲ್ಲಿ ನೀರನ್ನು ಹೊರಗಡೆ ಇಡುತ್ತಾರೆ. ಹಾಗೇ ಒಳಗೆ ಸಗಣಿ ಉಂಡೆ ಮಾಡಿ ಅದರ ಮೇಲೆ ಮಣ್ಣಿನ ದೀಪವನ್ನು ಹಚ್ಚಿ ಇಡುತ್ತಾರೆ. ಶವವನ್ನು ಹೂತ ಬಳಿಕ ಮಣ್ಣಿಗೆ ಹೋದವರೆಲ್ಲ ಒಂದು ಗರಿಕೆ ಪಾಸೆ (ಎಸಳು) ಯನ್ನು ಕಿತ್ತುಕೊಂಡು ಕೈಯಲ್ಲಿ ಹಿಡಿದು ಹೊರಗೆ ಇಟ್ಟು ನೀರನ್ನು ಸ್ವಲ್ಪ ತಲೆಗೆ ಚಿಮುಕಿಸಿಕೊಂಡು ಒಳಗಡೆ ಉರಿಯುತ್ತಿರುವ ದೀಪದ ಹತ್ತಿರ ತಾವು ತಂದಂತಹ ಗರಿಕೆಯ ಪಾಸೆಯನ್ನು ಇಟ್ಟು ಅದಕ್ಕೆ ಕೈ ಮುಗಿದು ಹೊರ ಬರುತ್ತಾರೆ. ಮಣ್ಣಿಗೆ ಹೋದವರೆಲ್ಲ ಈ ರೀತಿ ಮಾಡುವರು. ಈ ಕಾರ್ಯಕ್ರಮ ಮುಗಿದ ಮೇಲೆ ಸತ್ತ ವ್ಯಕ್ತಿಗೆ ಅಣ್ಣ ತಮ್ಮಂದಿರು

ಆಗುವವರು ಅಲ್ಲಿಯೇ ಉಳಿಯುತ್ತಾರೆ. ಅವನಿಗೆ ನೆಂಟರು ಆಗಿರುವವರು ಅವರ ಊರಿಗೆ ಹೋಗುತ್ತಾರೆ. ಕಾರಣ ಸತ್ತ ವ್ಯಕ್ತಿಯ ಮನೆಯಲ್ಲಿ ಅಂದು ರಾತ್ರಿ ಹಚ್ಚಿದ ದೀಪವನ್ನು ನೋಡಬಾರದೆಂಬ ನಂಬಿಕೆಯಿಂದ ಹೀಗೆ ಮಾಡುವರು.

ವ್ಯಕ್ತಿ ಸತ್ತ ಮೂರು ದಿನಕ್ಕೆ ದಿವಸದ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ. ಈ ಜಾತಿಯಲ್ಲಿ ಎಲ್ಲಾ ಜಾತಿಗಳಲ್ಲಿದ್ದಂತೆ ಮೂರು ದಿನಕ್ಕೊಂದು ಅಥವಾ ಹನ್ನೊಂದು ಅಥವಾ ಹದಿನಾರು ದಿನಕ್ಕೊಂದು ಹೀಗೆ ಎರಡು ದಿವಸವನ್ನು ಮಾಡುವುದಿಲ್ಲ. ಅವನು ಸತ್ತ ಮೂರನೇ ದಿನಕ್ಕೆ ಮಾಡುವ ದಿವಸವೇ ಅಂತಿಮವಾಗಿರುತ್ತದೆ. ಆ ಮೂರು ದಿನದೊಳಗಾಗಿ ಮನೆಯ ಗೋಡೆಯನ್ನೆಲ್ಲಾ ಸುಣ್ಣದಿಂದ ಬಳಿದು, ನೆಲವನ್ನು ಸಾರಿಸಿ, ಅಂಗಳಕ್ಕೆ ಸಗಣಿ ನೀರು ಹಾಕಿ ಮನೆಯ ಮಂದಿಯೆಲ್ಲಾ ಸ್ನಾನ ಮಾಡಿ ಶುಚಿಯಾದ ಮೇಲೆ ಅಗಸರು ಬಂದು ಗೋಮೂತ್ರವನ್ನು ಮನೆಯ ಸುತ್ತ, ಮನೆಯ ಒಳಗೆ ಎಲ್ಲಾ ಕಡೆ ಬೇವಿನ ಎಸಳಿನಿಂದ ಹಾಕಿ ಮನೆಯನ್ನು ಶುದ್ಧಿಗೊಳಿಸಿ ಅಂಟು-ಮುಂಟು ಆಗಿದ್ದನ್ನು ಇದನ್ನು ಸಿಂಪಡಿಸುವುದರ ಮೂಲಕ ಪವಿತ್ರಗೊಳಿಸುವರು. ಅನಂತರ ಒಂದುಕಾಲುರೂಪಾಯಿಯನ್ನು ತೆಗೆದುಕೊಂಡು ಅಂಗಡಿಗೆ ಹೋಗಿ, ಅಕ್ಕಿ, ಉಪ್ಪು, ಮೆಣಸಿನಕಾಯಿ, ಬೇಳೆಕಾಳು, ಹುಣಸೆಹಣ್ಣು ಈ ಐದು ಪದಾರ್ಥಗಳನ್ನು ತಂದು ಮಡಿಯಿಂದ ಹೊರಗಡೆ ಮೂರು ಕಲ್ಲನ್ನು ಇಟ್ಟು ಇದರ ಮೇಲೆ ಎಡೆಯನ್ನು ತಯಾರಿಸುವರು. ತಲೆ ತಿವಿದ ವ್ಯಕ್ತಿಗೆ ತಲೆ (ಬೋಳಿಸಿ) ಬೋಳ ಮಾಡಿ ಅವನ ಕೈಯಲ್ಲಿ ಎಡೆಯನ್ನು ಕೊಟ್ಟು ಸತ್ತ ವ್ಯಕ್ತಿಯ ಗುಡ್ಡೆಯ ಬಳಿ ತೆಗೆದುಕೊಂಡು ಹೋಗುವರು. ಆ ಗುಡ್ಡೆಯ ಸುತ್ತ ಒಂದು ತುಂಬಿದ ಗಡಿಗೆಯಿಂದ ನೀರನ್ನು ತಂದು ಅದಕ್ಕೆ ಹಾಕಿ ತಂಪು ಮಾಡಿ ತಾವು ತೆಗೆದುಕೊಂಡುಹೋದ ಎಡೆಯನ್ನು ಬಾಳೆಯ ಎಲೆಯ ಮೇಲೆ ಹಾಕಿ ಪೂಜಿಸಿ ಅಲ್ಲಿ ಹೋದವರೆಲ್ಲ ಗುಡ್ಡೆಗೆ ಹಾಲು-ತುಪ್ಪವನ್ನು ಬಿಡುವರು. ಬಳಿಕ ಅಲ್ಲಿ ಇಟ್ಟ ಎಡೆಯನ್ನು ತೆಗೆದುಕೊಂಡು ಹೋಗಿ ಒಂದು ಹಸಿರು ಗಿಡದ ಹತ್ತಿರ ಕಂಚಿನ ಗಂಗಳದಲ್ಲಿ ಅನ್ನ ಹಾಕಿ ಅದರ ಮೇಲೆ ಹಾಲು ಅಥವಾ ಮೊಸರು ಹಾಕಿ ಅಲ್ಲಿಟ್ಟು ಸುಮಾರು ಹತ್ತು ಅಡಿ ದೂರ ಬಂದು ನಿಲ್ಲುವರು. ಕಾರಣ ಯಾವುದಾದರೂ ಕಾಗೆ ಅಥವಾ ಪಕ್ಷಿಗಳು ಅದನ್ನು ತಿನ್ನಲಿ ಎಂದು ಹಾಗೆ ಮಾಡುವರು. ಆ ಎಡೆಯನ್ನು ಕಾಗೆ ತಿಂದರೆ ಸತ್ತ ವ್ಯಕ್ತಿ ಒಳ್ಳೆಯವನೆಂದು ತಾನು ಬದುಕಿದ್ದಾಗ ಜನತೆಗೆ ಒಳ್ಳೆಯದನ್ನು ಮಾಡಿ ಸಂಘಜೀವಿಯಾಗಿ ಬದುಕಿದ್ದನೆಂದು ಭಾವಿಸುವರು. ಅಕಸ್ಮಾತ್ ಆ ಪಕ್ಷಿಗಳು ಅನ್ನವನ್ನು ಮುಟ್ಟದೆ ಹೋದರೆ ಅವನು ಒಳ್ಳೆಯವನ್ನಲ್ಲವೆಂದು ತಾನು ಬದುಕಿದ್ದಾಗ ಯಾರಿಗೂ ಸಹಾಯವನ್ನು ಮಾಡದೆ ಇದ್ದವನೆಂದು ನಂಬಿಕೆಯಿಂದ ಆ ಅನ್ನವನ್ನೆಲ್ಲಾ ಹಸಿರು ಗಿಡದ ಬುಡಕ್ಕೆ ಹಾಕುವರು. ಇದಕ್ಕೆ 'ಕೂಳು' ಹಾಕುವ ಪದ್ಧತಿಯೆಂದು ಕರೆಯುತ್ತಾರೆ. ಅಲ್ಲಿಯೇ ಯಾವುದಾದರೂ ಬಾವಿ ಇದ್ದರೆ ಕೈ ಕಾಲು ಮುಖ ತೊಳೆದು ಮನೆಗೆ ಹೋಗುವರು. ಆ ದಿನ ಆ ವ್ಯಕ್ತಿಯ ದಿವಸಕ್ಕೆಂದು ಅನ್ನವನ್ನು, ಮಜ್ಜಿಗೆ ಸಾರನ್ನು ಸಿದ್ಧಗೊಳಿಸುತ್ತಾರೆ. ಅಡಿಗೆ ತಯಾರಾದ ಮೇಲೆ ದಾಸಯ್ಯನನ್ನು ಕರೆಯಿಸಿ ಪೂಜಿಸಿ ಶಂಖ, ಜಾಗಟೆಯನ್ನು ಊದಿಸಿದ ಮೇಲೆ ಸತ್ತ ವ್ಯಕ್ತಿಯ ಬಳಗದವರು, ಅವರ

ಒಕ್ಕಲಿಗೆ ಸೇರಿದವರು ಮಾತ್ರ ಅನ್ನವನ್ನು ತಿನ್ನುವರು. ಉಳಿದವರು ಹಾಗೇ ಗುಡ್ಡೆಗೆ ಪೂಜೆಯನ್ನು ಮಾಡಿ ಅವರವರ ಮನೆಗೆ ಹಿಂದಿರುಗುವರು. ಆ ದಿವಸದ ಊಟವನ್ನು 'ಬಳಗದ' ಊಟವೆಂದು ಕರೆಯುವರು. ಇದು ಸತ್ತ ವ್ಯಕ್ತಿಗೆ ಮಾಡುವ ಅಂತಿಮ ಸಂಸ್ಕಾರವಾಗಿದೆ.

ಅನಂತರ ಸತ್ತವನ ಹೆಸರಿನಲ್ಲಿ ಒಂದು ಮಗಿ (ಮಣ್ಣಿನ ಚೆಂಬು) ಯನ್ನು ತೆಗೆದುಕೊಂಡು ಬಂದು ಅದರಲ್ಲಿ ಮೀಸಲು ಅಕ್ಕಿಯನ್ನು ಹಾಕಿ ಸತ್ತ ವ್ಯಕ್ತಿಯ ಹೆಸರಿನ ಮೇಲೆ ಆತನ ಮನೆಯ ದೇವರಿಗೆ ಕಳುಹಿಸುತ್ತಾರೆ. ಆ ಮಗಿಯನ್ನು ಸುಮಾರು ಒಂದು ವರ್ಷಗಳ ಕಾಲ ಆ ಗುಡಿಯಲ್ಲಿಟ್ಟುಕೊಂಡು ಬಳಿಕ ಅದನ್ನು ಸತ್ತ ವ್ಯಕ್ತಿಯ ಮನೆಗೆ ಕಳುಹಿಸಿಕೊಡುವರು. ಆ ಮಗಿಯನ್ನು ದೇವಸ್ಥಾನದಿಂದ ತಂದ ಬಳಿಕ ಮತ್ತೆ ಗುಡ್ಡೆಯ ಹತ್ತಿರ ತೆಗೆದುಕೊಂಡು ಹೋಗಿ ಒಂದು ಕಲ್ಲನ್ನು ಸತ್ತ ವ್ಯಕ್ತಿಯ ಸಂಕೇತವಾಗಿ ಗುಡ್ಡೆಯ ಮೇಲೆ ಇಟ್ಟು ಅದನ್ನು ಪೂಜಿಸಿ ಮಗಿಯನ್ನು ಮನೆಗೆ ತಂದು ದೇವರ ಗೂಡಿನಲ್ಲಿ ಇಟ್ಟು ಅದನ್ನು ಪವಿತ್ರವೆಂದು ಪೂಜಿಸುತ್ತಾ ಬರುವರು. ಯುಗಾದಿ ಹಬ್ಬದಲ್ಲಿ ಹೊಸಬಟ್ಟೆಯನ್ನು ತಂದು ಗುಡ್ಡೆಯ ಮೇಲೆ ಹಾಕಿ 'ಹಿರೇರ'ನ್ನು (ಪಕ್ಷ) ಮಾಡುವರು. ಹೀಗೆ ಹಿಂದಿನಿಂದ ಆಚರಿಸುತ್ತಾ ಬಂದಿರುವ ಇಲ್ಲಿಯ ಗೊಲ್ಲರ ಶವಸಂಸ್ಕಾರ ಪದ್ಧತಿಯನ್ನು ಇಂದಿಗೂ ಅವರು ಮುಂದುವರೆಸಿಕೊಂಡು ಹೋಗುತ್ತಿರುವುದು ಈ ಜಾತಿಯ ಒಂದು ವಿಶಿಷ್ಟ ಸಂಗತಿಯಾಗಿದೆ ಎನ್ನಬಹುದು.

ಈ ಜಾತಿಯಲ್ಲಿ ಒಬ್ಬ ವ್ಯಕ್ತಿಯ ಹೆಂಡತಿ ತೀರಿಕೊಂಡರೆ ಗಂಡನಾದವನು ಮೂರು ತಿಂಗಳವರೆಗೆ ವನವಾಸ ಆಚರಿಸಬೇಕೆಂಬ ನಿಯಮ ಹಿಂದೆ ಇವರಲ್ಲಿತ್ತು. ಈ ಆಚರಣೆ ಈಗಲೂ ಮುಂದುವರೆಸಿಕೊಂಡು ಬಂದಿದ್ದರೂ ಮೂರು ತಿಂಗಳ ಬದಲಾಗಿ ಮೂರು ದಿನಗಳ ವನವಾಸ ಕೈಗೊಳ್ಳುವರು. ಗಂಡನಾದವನು ಸತ್ತ ಹೆಂಡತಿಯನ್ನು ಮಣ್ಣು ಮಾಡಿದ ತಕ್ಷಣ ತನ್ನ ಊರನ್ನು ಬಿಟ್ಟು ಹೋಗುತ್ತಾನೆ. ಮಣ್ಣಿಗೆ ಬಂದವರು ಇವನ ಮೂರು ದಿನಗಳ ವನವಾಸದ ಖರ್ಚಿಗೆಂದು ಸ್ವಲ್ಪ ಹಣ ಕೊಡುತ್ತಾರೆ. ಇವನು ಊರ ಗಡಿದಾಟಿ ಬೇರೆ ಬೇರೆ ಮನೆಯವರಿಂದ ಬೇಡಿಕೊಂಡು ಉಣ್ಣುತ್ತಾ ಮೂರುದಿನಗಳವರೆಗೆ ಕಾಲ ಕಳೆಯುತ್ತಾನೆ. ಮೂರನೆಯ ದಿನ ಒಂದು ಸ್ಥಳದಲ್ಲಿ ಒಲೆ ಹಚ್ಚಿ ಹೊಸ ಮಡಿಕೆಯಲ್ಲಿ ಅನ್ನ ಮಾಡುತ್ತಾ ಅದರ ಮುಂದೆ ಕುಳಿತುಕೊಳ್ಳುತ್ತಾನೆ. ಒಲೆಯ ಮೇಲೆ ಕುದಿಯುತ್ತಿರುವ ಅನ್ನ ಉಕ್ಕು ಬಂದ ತಕ್ಷಣ ಅದನ್ನು ಕಾಲಿನಿಂದ ಒದ್ದು ಹಿಂತಿರುಗಿ ನೋಡದೆ ಊರಿಗೆ ಬಂದು ಯಾವುದಾದರೂ ಬಾವಿಯಲ್ಲಿ ಸ್ನಾನಮಾಡಿ ಊರ ದೇವರಿಗೆ ಕೈ ಮುಗಿದು ಮನೆ ಸೇರಿಕೊಳ್ಳುತ್ತಾನೆ. ಇದು ಇಲ್ಲಿಯ ಗೊಲ್ಲರಲ್ಲಿರುವ ಸೂತಕ ತೆಗೆದುಕೊಳ್ಳುವ ಮತ್ತೊಂದು ರೀತಿಯ ಆಚರಣೆಯಾಗಿದೆ.

ಭಾಷಾಂತರದಲ್ಲಿ ಭಾಷೆ ಮತ್ತು ಸಾಂಸ್ಕೃತಿಕ ಅಂಶಗಳ ಪಾತ್ರ

ಪಿ. ಎಸ್. ಪೂರ್ಣಿಮಾ

ಒಂದು ಭಾಷೆಯು ಜೀವಂತವಾಗಿರಬೇಕಾದರೆ, ಬೆಳವಣಿಗೆಯಾಗಬೇಕಾದರೆ, ಭಾಷಾಂತರದ ಪ್ರಕ್ರಿಯೆಯು ನಿರಂತರವಾಗಿರಬೇಕು. ಭಾಷಾಂತರ ಒಂದು ಅಪರೂಪದ ಕ್ರಿಯೆಯೇನಲ್ಲ, ನಮಗೆ ತಿಳಿದೋ ತಿಳಿಯದೆಯೋ ನಾವು ಸದಾ ಅದರಲ್ಲಿ ತೊಡಗಿದ್ದೇವೆ. ಭಾಷೆಯೇ ಒಂದು ಭಾಷಾಂತರ. ಹಾಗಾದರೆ ಭಾಷಾಂತರ ಎಂದರೇನು? ಎಂಬ ಪ್ರಶ್ನೆ ಹಾಕಿಕೊಂಡರೆ ನಾವು ತರ್ಜುಮೆ, ಅನುವಾದ, ಪರಿವರ್ತನೆ ಮುಂತಾದವುಗಳಾಗಿ ಹೇಳುತ್ತೇವೆ. ಇವೆಲ್ಲವನ್ನೂ ನಾವು 'ಟ್ರಾನ್ಸ್‌ಲೇಶನ್' ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಕ್ಯಾಟ್‌ಫರ್ಡ್[೧] ಅವರ ಪ್ರಕಾರ "ಮೂಲ ಭಾಷೆಯ ಪಠ್ಯ ಸಾಮಗ್ರಿಯನ್ನು ನಿರ್ದಿಷ್ಟ ಭಾಷೆಯ ಪಠ್ಯಸಾಮಗ್ರಿಯನ್ನಾಗಿ ಪರಿವರ್ತಿಸುವುದೇ ಅನುವಾದ". ನಿಜವಾದ ಅನುವಾದವೆಂದರೆ, "ಪರಕಾಯ ಪ್ರವೇಶ" ಎಂದು ವಿಲಾಮೇವಿಜ್[೨] ಹೇಳುತ್ತಾರೆ. ಒಂದು ಭಾಷೆಯ ವಿಚಾರ ಸಂಪತ್ತನ್ನೂ, ರಸಾನುಭಾವವನ್ನೂ ಇನ್ನೊಂದು ಭಾಷೆಯಲ್ಲಿ ಹೇಳಬೇಕೆಂಬುದೇ ಭಾಷಾಂತರ.

ವೈಜ್ಞಾನಿಕ ಪ್ರಗತಿ ಮತ್ತು ಸಂಪರ್ಕ ಸಾಧನಗಳ ಬೆಳವಣಿಗೆಯಿಂದ ಆಧುನಿಕ ಪ್ರಪಂಚವು ಕಿರಿದಾಗಿ, ಅದರ ಯಾವುದೇ ಒಂದು ಭಾಗದ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳು ಮತ್ತು ವೈಜ್ಞಾನಿಕ ಬೌದ್ಧಿಕ ಚಿಂತನೆಗಳು ಇತರ ಎಲ್ಲಾ ಭಾಗಗಳ ಮೇಲೂ ಪ್ರಭಾವ ಬೀರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಸುರಕ್ಷಿತ ಸಾರ್ಥಕ್ಯ ಜೀವನವನ್ನು ನಡೆಸಲು ನಮ್ಮ ನೆರೆಹೊರೆಯ ಭಾಗಗಳ ಒಂದಿಲ್ಲೊಂದು ಮಟ್ಟದ ಅರಿವು ಎಲ್ಲರಿಗೂ ಅಗತ್ಯವಾಗಿದೆ.

ಭಾಷಾಂತರದಲ್ಲಿ ನಾವು ವ್ಯವಹಾರಕ್ಕೆ ತಕ್ಕಂತೆ, ವಿಷಯಕ್ಕನುಗುಣವಾಗಿ, ಪರಿಸರ, ಆಚಾರ ವಿಚಾರಗಳಿಗನುಸಾರವಾಗಿ ವಿವಿಧ ರೀತಿಯ ಅನುವಾದ ಕಲೆಯನ್ನು ಬಳಸಿಕೊಳ್ಳುತ್ತೇವೆ.

೧ ಭಾಷಾಂತರ : ಮೂಲಕೃತಿಗೂ, ಭಾಷಾಂತರಿತವಾದ ಕೃತಿಗೂ ಇರುವ ವ್ಯತ್ಯಾಸ ಭಾಷೆ ಮಾತ್ರ.

---

೧ Catford - Linguistic Theory of Translation.

೨ Quoted in Alfred Savony - Art of Translation.

೨ ಅನುವಾದ : ಮೂಲಕೃತಿಯನ್ನು ಅನುಸರಿಸಿ, ಬೇರೆ ಭಾಷೆಯಲ್ಲಿ ಅದರ ಅರ್ಥಭಾಗವನ್ನು ರೂಪಿಸುವುದು.

೩ ಭಾವಾನುವಾದ : ಮೂಲದ ಆಶಯವನ್ನು ಭಾಷಾಂತರಕಾರನು ಅಷ್ಟೇ ಶಬ್ದಗಳಲ್ಲೋ, ಅದಕ್ಕಿಂತ ಹೆಚ್ಚು ಅಥವಾ ಕಡಿಮೆ ಶಬ್ದಗಳಲ್ಲೋ ನಿರೂಪಿಸುತ್ತಾನೆ. ಅಂದರೆ ಮೂಲದ ಕೃತಿಯ ಭಾವವನ್ನು ಮಾತ್ರ ಇಟ್ಟುಕೊಂಡು, ತನ್ನ ಉದ್ದೇಶಕ್ಕೆ ಅನುಗುಣವಾಗಿ ಮೂಲದ ವಿವೇಚನೆಯನ್ನು ಹಿಗ್ಗಿಸುವುದು ಇಲ್ಲವೆ ಕುಗ್ಗಿಸಬಹುದು.

೪ ಸಂಗ್ರಹಾನುವಾದ : ಮೂಲಕೃತಿಯ ತಾತ್ಪರ್ಯದ ಅರ್ಥವನ್ನು ಮಾತ್ರ ತಿಳಿಸುತ್ತದೆ.

೫ ರೂಪಾಂತರ : ಮೂಲಕೃತಿಗೆ ಭಾಷಾಂತರ ಹೊಂದುವ ಭಾಷೆಯನ್ನಾಡುವ ಜನರ ಸಾಮಾಜಿಕ, ಐತಿಹಾಸಿಕ ಲೇಪನವನ್ನು ಹಚ್ಚಿ ಮಾಡುವ ಅನುವಾದ.

೬ ಸೃಷ್ಟ್ಯಂತರ : ಇದೊಂದು ರೀತಿಯಲ್ಲಿ ಪ್ರತಿಸೃಷ್ಟಿ.

ಭಾಷಾಂತರದ ಪ್ರಕ್ರಿಯೆ ಮಿಷನರಿಗಳಿಂದ ಪ್ರಾರಂಭವಾದರೂ ಕ್ರಮೇಣ ನಮ್ಮವರೇ ಅನೇಕರು ಅನುವಾದ ಪ್ರಕ್ರಿಯೆಗೆ ತೊಡಗಿದರು. ಇಂಗ್ಲಿಷ್ ಸಾಹಿತ್ಯದ ನಾಟಕಕಾರ, ಷೇಕ್ಸ್‌ಪಿಯರನನ್ನು ಕನ್ನಡಕ್ಕೆ ಪರಿಚಯಿಸಲು ಅನೇಕರು ಮುಂದಾದರು. ಅವರಲ್ಲಿ ಗುಂಡೋ ಕೃಷ್ಣ ಚುರಮುರಿ, ಎಂ. ಎಸ್. ಪುಟ್ಟಣ್ಣ, ಎಂ. ವೆಂಕಟಕೃಷ್ಣಯ್ಯ, ಆರ್. ಅಣ್ಣಾಜಿರಾಯ, ಶ್ರೀಕಂಠೇಶಗೌಡ ಮೊದಲಾದವರನ್ನು ಹೆಸರಿಸಬಹುದು. ಆದರೆ ಇವರೆಲ್ಲಾ ಮಾಡಿದ್ದು ರೂಪಾಂತರವನ್ನು. ಏನೇ ಆದರೂ ಈ ಪ್ರಕ್ರಿಯೆಗಳಿಂದಲೇ ನಮ್ಮಲ್ಲಿ ಕಥೆ, ಕಾದಂಬರಿ, ಪ್ರಬಂಧಗಳು, ನಾಟಕ ಪ್ರಕಾರಗಳು ಮೂಡಿ ಬರಲು ಸಾಧ್ಯವಾಯಿತೆನ್ನಬಹುದು.

ಭಾಷಾಂತರದಲ್ಲಿ "Domestic" ಹಾಗೂ "Foreign" ಎಂಬ ಎರಡು ಪ್ರಭೇದಗಳನ್ನು ನೀಡಿದ್ದಾರೆ. Domestic ಎನ್ನುವುದು ಒಂದು ಸಂಸ್ಕೃತಿಯ ಮೂಲ ಕಥಾ ವಸ್ತುವನ್ನು ಇಟ್ಟುಕೊಂಡು, ಉದ್ದಿಷ್ಟ ಭಾಷೆಯ ಸಂಸ್ಕೃತಿಗೆ ಅಳವಡಿಸಿಕೊಳ್ಳುವ ಪ್ರಕ್ರಿಯೆ. ಅಂದರೆ ಅದರಲ್ಲಿರುವ ಪಾತ್ರಗಳು, ಸನ್ನಿವೇಶಗಳು, ಸ್ಥಳಗಳನ್ನು ಉದ್ದಿಷ್ಟ ಭಾಷೆಯ ಸಂಸ್ಕೃತಿಗನುಗುಣವಾಗಿ ಬದಲಾವಣೆ ಮಾಡುವುದು. ಎರಡನೆಯದು "Foreign" ಎಂಬುದು. ಮೂಲ ಭಾಷೆಯ ಸಂಸ್ಕೃತಿ, ಕಥಾವಸ್ತುವನ್ನು ಮೂಲ ಭಾಷೆಯಲ್ಲಿರುವಂತೆಯೇ ಬಳಸುವುದು.

ಭಾಷಾಂತರದಲ್ಲಿ ಮೂಲಭೂತವಾಗಿ ಪರಿಣಾಮ ಬೀರಬಲ್ಲ ಅಂಶಗಳು ಎರಡಿವೆ. ೧ ಭಾಷೆ ೨ ಸಂಸ್ಕೃತಿ. ಭಾಷಾಂತರದಲ್ಲಿ ಭಾಷೆಯ ಸ್ವರೂಪದ ಅರಿವು ಬಹುಮುಖ್ಯ. ಈ ಅರಿವನ್ನು ಪಡೆಯುವಾಗ ಭಾಷೆಯ ಸಾಮಾನ್ಯ ರೂಪ, ಎಲ್ಲಾ ಭಾಷೆಗಳಿಗೂ ಸಮಾನವಾಗಿರುವ ಅಂಶಗಳು ಯಾವುವು? ನಿರ್ದಿಷ್ಟ ಭಾಷೆಯೊಂದರ ವಿಶೇಷ ಗುಣಗಳೇನು? ಎಂಬುದನ್ನು ಗಮನಿಸಬೇಕು. ಭಾಷಾಂತರಕಾರನ ದೃಷ್ಟಿ ಕೇಂದ್ರೀಕೃತವಾಗಬೇಕಾದುದು ವಿಷಯದ ಗ್ರಹಣ ಮತ್ತು ಅದರ ಯಥಾವತ್ತಾದ ನಿರೂಪಣೆಯಲ್ಲಿ. ಅವನಿಗಿರಬೇಕಾದುದು ವಿವರಗಳನ್ನು

ಗಮನಿಸುವ ಸೂಕ್ಷ್ಮ ವಿವೇಚನ ಬುದ್ಧಿ ಮತ್ತು ಉಚಿತವಾದ ಪಾರಿಭಾಷಿಕ ಸಂಪತ್ತು. ಸಾಹಿತ್ಯ ಕೃತಿಗಳು ರಸಾತ್ಮಕ ಹಾಗೂ ಭೌತಪ್ರಧಾನವಾದವುಗಳು. "ಸಾಹಿತ್ಯಕ ಕೃತಿಗಳಲ್ಲಿ ಭಾಷೆಯು ಒಂದು ಬಹಿಸ್ಸಾಧನವಲ್ಲ, ಬಾಹ್ಯಾಲಂಕಾರವಲ್ಲ, ಅದು ಕೃತಿಯ ಸ್ವಾಭಾವಿಕ ಅಂಗ" ಎಂಬ ಎಸ್. ಬಾಲಸುಬ್ರಹ್ಮಣ್ಯರವರ ಮಾತಿನಂತೆ ಭಾಷಾಂತರಕಾರನ ದೃಷ್ಟಿ ವಿಷಯ ಮತ್ತು ಭಾಷೆ ಎರಡರ ಮೇಲೂ ಸಮಾನವಾಗಿ ಕೇಂದ್ರೀಕೃತವಾಗಿರಬೇಕು.

ಮೂಲ ಭಾಷೆಯ ಒಂದು ಕೃತಿ ಉದ್ದಿಷ್ಟ ಭಾಷೆಗೆ ಅನುವಾದವಾಗಬೇಕಾದಾಗ ಮೂಲದಲ್ಲಿರುವ ಒಂದು ಧ್ವನಿ, ಉದ್ದಿಷ್ಟ ಭಾಷೆಯಲ್ಲಿಲ್ಲದಾಗ ಅದನ್ನು ಉದ್ದಿಷ್ಟ ಭಾಷೆಯ ಒಂದು ಸಮೀಪವರ್ತಿ ಧ್ವನಿಗೆ ಹೊಂದಿಸಬೇಕಾಗುತ್ತದೆ. ಉದಾ :- Dozen, Coffee ಶಬ್ದಗಳಿಗೆ ನಾವು ಕನ್ನಡದಲ್ಲಿ Z, F ಬದಲಾಗಿ ಜ, ಫ ಧ್ವನಿಗಳೊಡನೆ ಹೊಂದಿಸಬೇಕಾಗುತ್ತದೆ. ಕನ್ನಡದಲ್ಲಿ ವ್ಯಾಕರಣ ವರ್ಗಗಳು ಒಂದು ರೀತಿ, ಇಂಗ್ಲಿಷ್‌ನದು ಇನ್ನೊಂದು ರೀತಿ. ಉದಾಹರಣೆಗೆ, ಇಂಗ್ಲಿಷ್‌ನಲ್ಲಿ Moon ಸ್ತ್ರೀಲಿಂಗ, Country ಸ್ತ್ರೀಲಿಂಗ. ಕನ್ನಡದಲ್ಲಿ ಇವೆರಡೂ ನಪುಂಸಕಲಿಂಗ. ಇಂಗ್ಲಿಷ್‌ನಲ್ಲಿ Masculine, Feminine, Neuter ಇದ್ದರೂ, ಅವು ಅನ್ವಯಿಸುವ ಪದಗಳು ವಿಭಿನ್ನ. ಇಂಗ್ಲಿಷ್‌ನಲ್ಲಿ Past , Present, Future ಕಾಲಗಳಿವೆ ಕನ್ನಡದಲ್ಲಿ ಸಹಜ ಮಾತಿನಲ್ಲಿ ಭೂತ, ಅಭೂತ ಎರಡೇ ಕಾಲಗಳು. ಪ್ರತಿಭಾಷೆಯ ಭಿನ್ನತೆಯೂ ಅವುಗಳ ವಾಕ್ಯರಚನೆಯಲ್ಲಿ ಕಂಡುಬರುತ್ತದೆ. ಉದಾಹರಣೆಗೆ, ಇಂಗ್ಲಿಷ್‌ನಲ್ಲಿ ಕರ್ತೃ, ಕ್ರಿಯಾ, ಕರ್ಮ ಧನಾತ್ಮಕ ರಚನಾಕ್ರಿಯೆ ಕಂಡುಬಂದರೆ, ಕನ್ನಡದಲ್ಲಿ ಕರ್ತೃ, ಕರ್ಮ, ಕ್ರಿಯಾ ವಾಕ್ಯರಚನೆಯಾಗಿದೆ. Rama Killed Ravana ಎನ್ನುವುದನ್ನು ಪದಶಃ ಅನುವಾದ ಮಾಡಿದರೆ ರಾಮ ಕೊಂದನು ರಾವಣನನ್ನು ಎಂದಾಗುತ್ತದೆ. ಅದನ್ನೇ ಕನ್ನಡದ ಕ್ರಮಕ್ಕೆ ಅನುವಾದಿಸಿದಾಗ ರಾಮ ರಾವಣನನ್ನು ಕೊಂದನು ಎಂದಾಗುತ್ತದೆ. ಹಾಗೆಯೇ ಭಾಷೆಯಲ್ಲಿ ಅರ್ಥವಲಯ, ಭಾಷಾವಲಯಗಳು ಇರುತ್ತವೆ. ಉದಾಹರಣೆಗೆ, Tiger ಶೌರ್ಯಕ್ಕೆ, Fox ಕುಟಿಲೋಪಾಯಕ್ಕೆ. ಹಾಗೆಯೇ ರೂಢನಾಮ, ಅಂಕಿತನಾಮಗಳ ಅರ್ಥವನ್ನು ಗ್ರಹಿಸಿ ಅದಕ್ಕೆ ಪರ್ಯಾಯ ಪದವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಸಂಸ್ಕೃತಿ : ಭಾಷೆ ಸಂಸ್ಕೃತಿಯ ಪ್ರತಿಬಿಂಬವಾಗಿರುವುದರಿಂದ ಅನುವಾದ ಕಾರ್ಯದಲ್ಲಿ ಸಂಸ್ಕೃತಿ, ಮಹತ್ವದ ಅಂಶವಾಗುತ್ತದೆ. ಸಂಸ್ಕೃತಿ ಭಿನ್ನತೆಯ ತೊಂದರೆಯು ಭಿನ್ನ ಅನುವಾದ ಪ್ರಕಾರವನ್ನು ಅನುಸರಿಸಿ ಭಿನ್ನವಾಗುತ್ತದೆ. ವೈಜ್ಞಾನಿಕ ಮತ್ತು ತಾಂತ್ರಿಕ ಸಾಹಿತ್ಯದ ಅನುವಾದವಾಗಿದ್ದರೆ ಸಂಸ್ಕೃತಿಯ ಸಮಸ್ಯೆ ಅಷ್ಟಾಗಿ ಬರುವುದಿಲ್ಲ. ಯಾಕೆಂದರೆ ವಿಜ್ಞಾನ ವಿಚಾರಗಳು ಸಾರ್ವತ್ರಿಕ ಅನ್ವಯವನ್ನು ಪಡೆಯುವ ಸಿದ್ಧಾಂತಗಳು, ವೈಜ್ಞಾನಿಕ ಸಿದ್ಧಾಂತಗಳಿಗೆ ನೈಸರ್ಗಿಕ ಘಟನೆ ಮೂಲವೇ ಹೊರತು ಸಂಸ್ಕೃತಿಯ ಪ್ರಭಾವವಲ್ಲ.

ಮುಖ್ಯವಾಗಿ ಸಂಸ್ಕೃತಿಯ ಸಮಸ್ಯೆ ಅನಿವಾರ್ಯವಾಗುವುದು ಸೃಜನ ಸಾಹಿತ್ಯದಲ್ಲಿ. ಸಾಹಿತ್ಯದಲ್ಲಿ ಅಭಿವ್ಯಕ್ತಿ ಪಡೆಯುವುದು ಒಂದು ಸಂಸ್ಕೃತಿಯ ಅಂಶಗಳೇ. ಹೀಗಾಗಿ ಒಂದು

ಸಂಸ್ಕೃತಿಯಲ್ಲಿದ್ದ ಕೆಲವು ಅಂಶಗಳು ಇನ್ನೊಂದು ಸಂಸ್ಕೃತಿಯಲ್ಲಿ ಇಲ್ಲದಿರಬಹುದು. ಇಂಥ ಪರಿಸ್ಥಿತಿಯಲ್ಲಿ ಸೃಜನ ಸಾಹಿತ್ಯದ ಅನುವಾದ ತುಂಬ ಕ್ಲಿಷ್ಟಕರವಾಗುತ್ತದೆ. ನಮ್ಮ ಸಂಸ್ಕೃತಿಯಲ್ಲಿಲ್ಲದ ಒಂದು ಸಾಂಸ್ಕೃತಿಕ ಅಂಶವನ್ನು ಹೇಗೆ ಅನುವಾದಿಸುವುದು? ಇನ್ನೊಂದು ಸಂಸ್ಕೃತಿಯಲ್ಲಿಲ್ಲದ ಒಂದು ಸಾಂಸ್ಕೃತಿಕ ಅಂಶವನ್ನು ಹೇಗೆ ಅನುವಾದಿಸುವುದು? ಇಂಥ ಹಲವಾರು ತೊಂದರೆಗಳ ಮೂಲಕ ಸಂಸ್ಕೃತಿ ಅನುವಾದದಲ್ಲಿ ಬಹು ಮೂಲಭೂತ ಪಾತ್ರವನ್ನಾಡುತ್ತದೆ. ಇಂಗ್ಲಿಷ್‌ನಲ್ಲಿ ಸಂಭ್ರಮದ ಸ್ವಾಗತ ನೀಡಬೇಕಾದಾಗ "Warm Welcome" ಎನ್ನುತ್ತಾರೆ, ಇದರ ಶಬ್ದಾರ್ಥ 'ಬಿಸಿ ಸ್ವಾಗತ'. ಆದರೆ ಇದು ಕನ್ನಡದಲ್ಲಿ "ಭವ್ಯ ಸ್ವಾಗತ"ವಾಗುತ್ತದೆ. ಪಾಶ್ಚಾತ್ಯ ರಾಷ್ಟ್ರಗಳು ಶೀತ ಪ್ರದೇಶಗಳು. ಆದುದರಿಂದ ಅಲ್ಲಿ ಬೆಚ್ಚಗಿದ್ದರೆ ಮನಸ್ಸಿಗೆ ಆಹ್ಲಾದ. ನಮ್ಮ ಉಷ್ಣಪ್ರದೇಶಕ್ಕೆ ತಂಪು ಆಹ್ಲಾದ. ಹಾಗಾಗಿ ಸಂಸ್ಕೃತಿಯಲ್ಲಿ ಭೌಗೋಳಿಕ ಪರಿಸರ ಬಹುಮುಖ್ಯವಾಗಿರುವುದರಿಂದ ಅದರ ಪ್ರಕಾರ ಸಂಸ್ಕೃತಿಯಲ್ಲಿ ವ್ಯತ್ಯಾಸಗಳಾಗುತ್ತವೆ.

ಹಲವು ದೇಶಗಳ ಕತೆಗಳನ್ನು, ಕಾದಂಬರಿಗಳನ್ನು ಅನುವಾದಿಸುವಾಗ ಅಲ್ಲಿನ ಆಚಾರ-ವಿಚಾರಗಳು, ಉಡುಗೆ-ತೊಡುಗೆಗಳು ಮೊದಲಾದವು ಕೆಲವೊಂದು ಸಮಸ್ಯೆಗಳನ್ನು ಒಡ್ಡಬಲ್ಲವು. ಕೇವಲ ನಿಘಂಟಷ್ಟೇ ಸಾಲದು, ಅದಕ್ಕಿಂತ ಹೆಚ್ಚಾದ ನೆರವು ಅಗತ್ಯ. ಇದನ್ನು ಸಮರ್ಥರಾದ ಅನುವಾದಕರು ಮಾತ್ರ ಮಾಡಬಲ್ಲರು. ಸೃಜನ ಸಾಹಿತ್ಯದ ಪ್ರಕಾರಗಳೆಂದರೆ, ಸಂಸ್ಕೃತಿಯ ವಿಶಿಷ್ಟ ಪ್ರತಿಬಿಂಬಗಳೇ. ಒಂದು ಸಂಸ್ಕೃತಿಯ ಕೆಲವು ಅಂಶಗಳು, ಇನ್ನೊಂದು ಸಂಸ್ಕೃತಿಯಲ್ಲಿ ಇಲ್ಲದಿರಬಹುದು. ನಂಬಿಕೆಗಳು, ಭಾವನೆಗಳು ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಭಿನ್ನವಾಗಿರುತ್ತದೆ. ಉದಾಹರಣೆಗೆ, ನಮ್ಮಲ್ಲಿ ಬಿಳಿಬಣ್ಣ ಶುಭ್ರತೆಯ ಸಂಕೇತವಾದರೆ, ಬ್ರಿಟಿಷ್ ಸಂಸ್ಕೃತಿಯಲ್ಲಿ ಅದು ಶೋಕ ಸಂಕೇತವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಭಾಷಾಂತರದ ಸಾಂಸ್ಕೃತಿಕ ಸಮಸ್ಯೆ ಎದ್ದು ಕಾಣುತ್ತದೆ. ಹಿಂದೂ ಧರ್ಮದಲ್ಲಿ ಕಂಡುಬರುವ ಯಜ್ಞ, ಬ್ರಹ್ಮ, ಹವಿಸ್ಸು, ಮಾಯೆ, ಸಮಾಧಿ ಮೊದಲಾದ ಪದಗಳಿಗೆ ಸೂಕ್ತ ಪದಗಳನ್ನು ವಿದೇಶಿ ಭಾಷೆಯಲ್ಲಿ ನೀಡುವುದು ಸುಲಭವಲ್ಲ. ಪ್ರಸಾದಕ್ಕೆ sacred remnant ಮಾಯೆಗೆ illusion ಎಂಬ ಪದನೀಡುವುದು ಸರಿಯಲ್ಲ. ಕೆಲವು ವೇಳೆ ಮೂಲದ ಭಾವನೆಗೆ ತಕ್ಕುದಾದ ಭಾವಸ್ಮರಣೆಗೊಳ್ಳುವಂತೆ ಮಾಡುವ ಕೆಲಸ ತ್ರಾಸದಾಯಕ.

ಅನುವಾದದಲ್ಲಿ ಪಾರಿಭಾಷಿಕ ಪದಗಳ ಅನುವಾದ ಬಹಳ ತ್ರಾಸದಾಯಕ, ಅದರಲ್ಲೂ ಸಾಂಸ್ಕೃತಿಕ ಅಂಶಗಳ ಪಾರಿಭಾಷಿಕ ಪದಗಳ ಅನುವಾದ ಕಠಿಣವಾಗಿರುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಬರುವ ವರ್ಣಾಶ್ರಮ ಪದ್ಧತಿಗಳು, ಸಂಸ್ಕೃತಿಗಳು, ಧಾರ್ಮಿಕ ನಂಬಿಕೆಗಳು ಇಂತಹ ವಿಷಯಗಳನ್ನೊಳಗೊಂಡ ಸಾಹಿತ್ಯವನ್ನು ಮತ್ತೊಂದು ಭಾಷೆಗೆ ಭಾಷಾಂತರಿಸಲು ಕಷ್ಟಸಾಧ್ಯವಾಗುತ್ತದೆ. ಉದಾಹರಣೆಗೆ, ನಮ್ಮ ಸಂಸ್ಕೃತಿಯಲ್ಲಿ ಬರುವಂತಹ

ಪ್ರಸಾದ, ತೌರುಮನೆ, ಗೊಜ್ಜು, ಭೀಷ್ಮ ಪ್ರತಿಜ್ಞೆ, ಮೈಲಿಗೆ, ಮಡಿಬಟ್ಟೆ ಇಂತಹ ಪದಗಳಿಗೆ ಇಂಗ್ಲಿಷ್‌ನಲ್ಲಿ ಸರಿಯಾದ ಅಥವಾ ಪರ್ಯಾಯ ಪಾರಿಭಾಷಿಕ ಪದವನ್ನು ಹುಡುಕುವುದು ಹೇಗೆ?

ಒಂದು ಸಂಸ್ಕೃತಿಯಲ್ಲಿರುವ ಭಾವನೆಗಳ ಸೂಕ್ಷ್ಮಗಳು ಮತ್ತೊಂದು ಸಂಸ್ಕೃತಿಯಲ್ಲಿ ಬರುವುದಿಲ್ಲ. ನಮ್ಮ ಸಂಸ್ಕೃತಿಯ ವೈಶಿಷ್ಟ್ಯತೆಯೆಂದರೆ, ನಾವು ಪ್ರತಿಯೊಂದರ ಬಗ್ಗೆಯೂ ಭಾವನಾತ್ಮಕ ಸಂಬಂಧವನ್ನು ಹೊಂದಿರುತ್ತೇವೆ. ಆದರೆ ಇಂಗ್ಲಿಷ್ ಸಾಹಿತ್ಯದಲ್ಲಿ ಹಾಗಿಲ್ಲ. ಅಣ್ಣ, ತಮ್ಮ, ಅಕ್ಕ, ತಂಗಿ, ಸೋದರಮಾವ - ಹೀಗೆ ಒಂದೊಂದು ಸಂಬಂಧದ ಗುರುತಿದೆ. ಅದನ್ನೇ ನಾವು ಇಂಗ್ಲಿಷ್‌ನಲ್ಲಿ ಅಣ್ಣ- ತಮ್ಮ ಎಲ್ಲರಿಗೂ brother ಎಂದು ಹೇಳುತ್ತೇವೆ ಅಥವಾ ಅಣ್ಣ elder brother, ತಮ್ಮ younger brother ಎಂದು ಗುರುತಿಸುತ್ತೇವೆ. ಹಾಗೆಯೇ ನಮ್ಮಲ್ಲಿರುವ ವಿಶಿಷ್ಟ ಸಾಂಪ್ರದಾಯಿಕ ಅಂಶಗಳು ಇನ್ನೊಂದು ಸಂಸ್ಕೃತಿಯಲ್ಲಿ ಇಲ್ಲದಿರಬಹುದು. ಉದಾಹರಣೆಗೆ, ಜುಟ್ಟು tuff ವ್ರತಕ್ಕೆ vow ಎಂದು ಬರೆಯಬೇಕು. ಮಡಿಬಟ್ಟೆ ಎಂದರೆ ಒಂದೇ washing cloth ಆಗದು, ಧಾರ್ಮಿಕ ವಿಧಿಗಳನ್ನು ಆಚರಿಸುವಾಗ ಆ ಪದಗಳನ್ನು ಹಾಗೆಯೇ ಇಟ್ಟು, ಅಡಿಟಿಪ್ಪಣಿ ಅಥವಾ ವಿವರಣೆ ಕೊಡಬೇಕು. ಇನ್ನು ನುಡಿಗಟ್ಟು-ಗಾದೆಗಳ ಅನುವಾದ ಮತ್ತೂ ಕಷ್ಟ. "ಜೀವಂತ ಭಾಷೆಯ ಶ್ರೀಮಂತಿಕೆಯ ಕುರುಹು ಈ ನುಡಿಗಟ್ಟುಗಳು" ಎಂಬ ಪ್ರೊ. ಎಸ್. ಲಕ್ಷ್ಮೀನಾರಾಯಣ ಅರೋರಾ ಅವರ ಮಾತಿನಂತೆ ಮೂಲದ ಭಾಷೆಯ ಆಡುನುಡಿಗೆ ತಕ್ಕ ಹಾಗೆ ಭಾಷಾಂತರ ಪರ್ಯಾಯ ನುಡಿಗಟ್ಟು, ಗಾದೆಗಳನ್ನು ಭಾಷಾಂತರಕಾರ ಅರಿತಿರಬೇಕು. ಉದಾಹರಣೆಗೆ, ಕಬ್ಬಿಣದ ಕಡಲೆ"ಯನ್ನು "hard nut to crack ಎಂದೂ, love in a cottage "ಬಡತನದ ಮದುವೆ" ಎಂದೂ ಅನುವಾದಿಸಬಹುದು. ಆದರೆ ಅವುಗಳ ಬಗ್ಗೆ ದೀರ್ಘವಿವೇಚನೆ ಅತ್ಯಗತ್ಯ.

ಪರಾಮರ್ಶನ ಗ್ರಂಥಗಳು

೧ ಭಾಷಾಂತರ ಸೌರಭ - ಡಾ. ಎಸ್. ಲಕ್ಷ್ಮೀನಾರಾಯಣ ಅರೋರಾ.

೨ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣೆ - ಅನುವಾದ ಕಲೆ.

೩ ಶಾಸ್ತ್ರಸಾಹಿತ್ಯ ನಿರ್ಮಾಣ ಪ್ರಕಟಣೆ - ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

ಕನ್ನಡ ಜನಪದ ತ್ರಿಪದಿಗಳಲ್ಲಿ 'ತವರು': ಒಂದು ವಿಶ್ಲೇಷಣೆ

ವಿಜಯಲಕ್ಷ್ಮಿ ಮನಾಪುರ

ಕೌಟುಂಬಿಕ ಬಾಂಧವ್ಯಗಳ ಹಿಂದೆ ಅಡಗಿರಬಹುದಾದ ಮಾನವೀಯ ಅಂತಃಕರಣವೊಂದು 'ತವರು' ಎನ್ನುವ ಅರ್ಥದಲ್ಲಿ ರೂಢಿಗೆ ಬಂದಂತಿದೆ. 'ತಾಯಿಲ್ಲದೆ ತವರಿಲ್ಲ' ಎನ್ನುವ ಮಾತಿನಲ್ಲಿ ತಾಯಿ ಮತ್ತು ತವರಿನ ನಡುವೆ ಅಂಟಿದ ನಂಟಿನ ಬಂಧುತ್ವದ ಬಳ್ಳಿಯನ್ನು, ಅದು ಬಾಂಧವ್ಯವಾಗಿ ಹಬ್ಬಿಕೊಳ್ಳುವುದನ್ನು ಜನಪದರು ಕಂಡುಕೊಂಡಿದ್ದಾರೆ. ಹುಟ್ಟಿದ ತಾಣ, ಹಡೆದವರ ಸಖ್ಯ, ಒಡಹುಟ್ಟಿನವರೊಡನೆಯ ಒಡನಾಟ, ಪರಸ್ಪರ ಹಂಚಿ ಉಂಡ ಪರಿ, ಹೆಜ್ಜೆಹಾಕಿ ಓಡಾಡಿದ ಹಟ್ಟಿಯ ಅಂಗಳ, ಮನೆಯ ಸುತ್ತಮುತ್ತಲ ಪರಿಸರ, ನೆರೆಹೊರೆಯವರೊಂದಿಗಿನ ಸ್ನೇಹಭಾವ ಈ ಎಲ್ಲವುಗಳ ದ್ಯೋತಕವಾಗಿ ತವರು ಹೆಣ್ಣಿನ ಮನದಾಳದಲ್ಲಿ ಧ್ವನಿಸಿದೆ. ಅಲ್ಲದೆ ತಾನ್ಹುಟ್ಟಿ ಬೆಳೆದ ನೆಲೆಯನ್ನು ಕುರಿತ ಹಾಡುಗಳಲ್ಲಿ ಹೆಣ್ಣುಮಗಳೊಬ್ಬಳು ತನ್ನ ತಂದೆ, ತಾಯಿ, ಒಡಹುಟ್ಟು, ಅತ್ತಿಗೆ-ನಾದಿನಿ, ಗೆಳತಿಯರು - ಹೀಗೆ ವಿವಿಧ ಮುಖಗಳಿಂದ ಹೊಂದಿರಬಹುದಾದ ಬಹುಮುಖಿ ಬಾಂಧವ್ಯವನ್ನು ಪ್ರಸ್ತುತ ಅಧ್ಯಯನಕ್ಕೆ ಅನುಗುಣವಾಗಿ ಈ ಕೆಳಗೆ ಕಾಣಿಸಿರುವಂತೆ ವಿಂಗಡಿಸಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

೧ ತವರು ಮತ್ತು ತಾಯಿ, ತಂದೆ

೨ ತವರು ಮತ್ತು ಒಡಹುಟ್ಟು

೩ ತವರು ಮತ್ತು ಅತ್ತಿಗೆ ನಾದಿನಿಯರು

೪ ತವರು ಮತ್ತು ಗೆಳತಿಯರು, ನೆರೆಹೊರೆ

೧ ತವರು ಮತ್ತು ತಾಯಿ, ತಂದೆ

ಹೆಣ್ಣಿಗೆ ತೀರ ಹತ್ತಿರದವರೆಂದರೆ ತಾಯಿ-ತಂದೆಯರು. ಆಮೇಲೆ ಅಣ್ಣ- ತಮ್ಮ, ಅಕ್ಕ-ತಂಗಿ ಮೊದಲಾದ ಬಂಧು ಬಳಗದವರು. ಹಿಂದೆಂದಿಗಿಂತಲೂ ಮದುವೆಯ ನಂತರ ಅವಳು ತಾಯಿ ಮತ್ತು ತವರಿನ ಬಗ್ಗೆ ಅತ್ಯಂತ ಒಲವು ಪ್ರೀತಿಯನ್ನು ವ್ಯಕ್ತಪಡಿಸಿದ್ದಾಳೆ. ಆಕೆ ಗಂಡನ ಕುಟುಂಬದ ಸದಸ್ಯಳಾಗಿದ್ದರೂ ಕೂಡ ತಾಯಿಯ ನೆನಪು, ತವರಿನ ಹಂಬಲ ತುಡಿಯುತ್ತಿರುತ್ತದೆ. ತಾಯಿಯನ್ನು ಎಷ್ಟು ಹೊಗಳಿದರೂ ಸಾಲದು. ತಾಯಿಯ ಮಹತ್ವ

ಪೂರ್ಣ ಪ್ರೇಮ ಸಂಬಂಧ, ಕಾಳಜಿ, ನಿಸ್ವಾರ್ಥತ್ಯಾಗ ಎಲ್ಲವೂ ಹೆಣ್ಣು ಹಾಗೆ ಆಲೋಚಿಸಲು ಸಾಧ್ಯವಾಗಿದೆ. ಇಲ್ಲಿ ತಾಯಿಯೊಬ್ಬಳು ಮಗಳಲ್ಲಿ, ಮಗಳೊಬ್ಬಳು ತಾಯಿಯಲ್ಲಿ ಪರಸ್ಪರ ಭಾವನಾತ್ಮಕವಾಗಿ ಬೆಸೆದುಕೊಳ್ಳುವ, ಹೆಣ್ಣೇ ಹೆಣ್ಣೊಂದನ್ನು ಅರ್ಥಮಾಡಿಕೊಳ್ಳುವ, ಪೋಷಿಸುವ ಬಾಂಧವ್ಯವೊಂದರ ಮಾದರಿಯನ್ನು ಕಾಣಬಹುದು. ತನ್ನೊಳಗಿನ ಯಾವುದೇ ದುಃಖ ದುಮ್ಮಾನಗಳನ್ನು ತಾಯಿಯೊಂದಿಗೆ ಹಂಚಿಕೊಳ್ಳಲು ತವಕಿಸುವ ಹೆಣ್ಣಿಗೆ 'ತವರು' ಬಹುದೊಡ್ಡ ಆಸರೆಯಾಗಿ ನಿಲ್ಲುತ್ತದೆ.

ಹೆಣ್ಣು ಮಕ್ಕಳ ದುಃಖ ಹೆತ್ತವ್ವಬಲ್ಲಳು
ಹುತ್ತದ ಒಳಗೀರೊ ಸರಪನ | ಬೇಗೆಯ
ನೆತ್ತೀ ಮೇಲಿರುವ ಶಿವಬಲ್ಲ ||

ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ
ತಾಯಿರಲಿ ನನಗೆ ತವರಿರಲಿ | ನನ್ನವ್ವ |
ಅಣ್ಣಯ್ಯರಿರಲಿ ಕರೆಸಾಕೆ ||

ತಾನು ಮತ್ತೊಂದು ಮನೆಯ ಸದಸ್ಯೆಯಾದರೂ ದೂರದ ತನ್ನ ತವರನ್ನು ಅತ್ಯಂತ ಪ್ರೀತಿ, ವಾತ್ಸಲ್ಯದಿಂದ ಪರಿಭಾವಿಸುವ ಹೆಣ್ಣಿನ ತವರಿನ ಹಂಬಲ ನಿಚ್ಚಳವಾಗಿ ಪಡಿಮೂಡಿದೆ. ತನ್ನ ಜೀವಿತಾವಧಿ ಪೂರ ತವರು ತನ್ನದಾಗಬೇಕೆನ್ನುವ ಆಶಯದ ಹಿಂದೆ ತವರು ನಿರಂತರ ಸ್ಥಾವರವಾಗಬೇಕೆನ್ನುವ ನಿಲುವು ಮೇಲ್ನೋಟಕ್ಕೆ ಗೋಚರಿಸಿದರೂ, ತಾಯಿ ಇಲ್ಲದಿದ್ದ ಸಂದರ್ಭದಲ್ಲೂ ತವರಿನ ಜೊತೆ ಬಾಂಧವ್ಯ ಚಿರವಾಗಿ ಉಳಿಯುವಂತಾಗಬೇಕಾದರೆ ಕರೆಸಿಕಳಿಸುವುದಕ್ಕೆ ಅಣ್ಣತಮ್ಮಂದಿರಿರಬೇಕೆನ್ನುವ, ಆ ಮೂಲಕ ತಾಯಿಯ ನೆನಪನ್ನು ಉಳಿಸಿಕೊಳ್ಳಬೇಕೆನ್ನುವ ಅದಮ್ಯ ಹಂಬಲವೇ ಹೆಚ್ಚಿನ ಮಟ್ಟಿಗೆ ತೆರೆದುಕೊಂಡಿದೆ. ಇಲ್ಲಿ ಮಾನವನ ಜೀವಿತಾವಧಿಯನ್ನು ಮೀರಿ ಬಾಂಧವ್ಯಗಳು ಬೆಸೆದುಕೊಳ್ಳುವ ಪರಿಯನ್ನು ಗಮನಿಸಬಹುದು. ಈ ತ್ರಿಪದಿಗಳು ತಾಯಿಗೂ, ತವರಿಗೂ ಇರಬಹುದಾದ ನಿಗೂಢ ನಂಟನ್ನು ನಿವೇದಿಸಿವೆ.

ತೊಟ್ಟೀಲ ಹೊತ್ಗೊಂಡು ತೌರುಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು | ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳೊ ||

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ | ಕುಡಿಹಂಗ
ಹಬ್ಬಲೆ ಅವರ ರಸಬಳ್ಳಿ ||

ಹೆಣ್ಣಿನ ಅಂತರಾಳದ ತವರಿನ ವ್ಯಾಮೋಹದ ಮೌನಧ್ವನಿ ಅರ್ಥಪೂರ್ಣವಾಗಿ ಮೂಡಿಬಂದಿದೆ. ಗಂಡನ ಮನೆಯಲ್ಲಿ ಏನೆಲ್ಲ ಸಿರಿಸಂಪತ್ತಿದ್ದರೂ ಆಕೆಗೆ 'ತವರು' ಎಲ್ಲವೂ

ಆಗಿರುತ್ತದೆ. ತನ್ನ ತವರಿನ ಹಾರೈಕೆ ಹಾಗೂ ಉಪಚಾರದಲ್ಲಿ ಸಾಧ್ಯಂತ ಪುನೀತಳಾಗಿ ತನ್ನವರು ತನಗಿತ್ತ ಉಡುಗೊರೆಗಳನ್ನು ಹೊತ್ತು ತವರನ್ನು ತೊರೆದು ಗಂಡನ ಮನೆಗೆ ಹೋಗುವ ಅರ್ಧದಾರಿಯಲ್ಲಿ ನಿಂತು ನಿಟ್ಟುಸಿರುಬಿಟ್ಟು, ನಿಟ್ಟಿಸಿ ನೋಡುವ ಹೆಣ್ಣಿನ ಅಂತರಂಗದ ತಳಮಳ ಇಲ್ಲಿ ಮನಮಿಡಿಯುವಂತಹದ್ದು.

ಕೌಟುಂಬಿಕವಾಗಿ ಉದ್ಭವಿಸಬಹುದಾದ ಎಲ್ಲಾ ಬಾಂಧವ್ಯಗಳಿಗೂ ತಾಯಿಯೇ ಮೂಲ ಬೇರು. ಶಿಷ್ಟ ಕನ್ನಡ ಭಾಷಾ ಬಳಕೆಗೆ ಒಳಗಾದ ತಾಯಿ, ಅಮ್ಮ ಇತ್ಯಾದಿ ಪದ ವೈವಿಧ್ಯಗಳನ್ನು ಮೀರಿನಿಂತ ಪದಪರಿಭಾಷೆ ಅವ್ವ, ಹಡೆದವ್ವ, ಹೆತ್ತವ್ವ ಇತ್ಯಾದಿ ಆಪ್ತಪದಗಳು ಜನಪದ ಸಾಹಿತ್ಯದ ಮೂಲ ಸಂಶೋಧನೆಗಳೆಂದರೆ ಅತಿಶಯೋಕ್ತಿಯಾಗಲಾರದು. ಯಾವುದೇ ಭಾಷೆಯಲ್ಲಿ ಬಳಸಿರಬಹುದಾದ ಯಾವುದೇ ಪರಿಭಾಷೆ ಜನಪದ ಸಾಹಿತ್ಯ ತುಂಬಿಕೊಟ್ಟ 'ಅವ್ವ' ಪದಪರಿಭಾಷೆಗೆ ಸರಿಸಾಟಿಯಾಗಲಾರದು. ಇದು ಅತ್ಯಂತ ಆತ್ಮೀಯ ಹಾಗೂ ನಿಕಟ ಬಾಂಧವ್ಯವನ್ನು ಕಟ್ಟಿಕೊಡುತ್ತದೆ.

ಕಾಶೀಗೆ ಹೋಗಲಿಕ ಏಸೊಂದು ದಿನ ಬೇಕ
ತಾಸೊತ್ತಿನ್ಹಾದಿ ತವರೂರು | ನಡುಮಲ್ಲಿ
ಕಾಸಿ ಕುಂತಾಳೆ ಹಡೆದವ್ವ ||

ಯಾರು ಇದ್ದರು ನನ್ನ ತಾಯವ್ನ ಹೋಲ್ಯಾರ
ಸಾವಿರ ಕೊಳ್ಳಿ ಒಲೆಯಾಗ | ಉರಿದಾರ
ಜ್ಯೋತಿ ನಿನ್ಯಾರು ಹೋಲರ ||

ಆಕಳ ಕರು ಬಂದು ಅಂಬಾ ಅಂಬಾ ಎಂದು
ತಮ್ಮವ್ವನ ಮೊಲಿಯ ನಲಿನಲಿದು | ಉಂಬಾಗ
ನಮ್ಮವ್ವನ ಧ್ಯಾನ ನನಗಾಗ ||

ಬ್ಯಾಸಗಿ ದಿವಸಕ ಬೇವಿನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ | ಹಡೆದಮ್ಮ
ನೀ ತಂಪ ನನ್ನ ತವರೀಗಿ ||

ಮೇಲಿನ ಗೀತೆಗಳು ತಾಯಿ-ಮಗಳ ಸಂಬಂಧವನ್ನು ಉದಾತ್ತೀಕರಿಸಿವೆ. ಎಲ್ಲಾ ಸಂಬಂಧಗಳಿಗಿಂತಲೂ ತಾಯಿ ಸಂಬಂಧವೇ ಹೆಚ್ಚು ಆಪ್ತ ಹಾಗೂ ಆಪ್ಯಾಯಮಾನವಾದುದು. ಹೆಣ್ಣು ಮಗಳು ಸುಖವಾಗಲಿ, ದುಃಖವಾಗಲಿ, ತಾಯಿಯನ್ನೇ ಬಯಸುವುದು ಸಹಜ. ಏಕೆಂದರೆ ತಾಯಿಗಿಂತ ಮಿಗಿಲಾದ, ತಾಯಿಪ್ರೀತಿಗಿಂತ ಹಿರಿದಾದ ವಸ್ತು ಬೇರೊಂದಿಲ್ಲ. ತಾಯಿಯ ಪ್ರೀತಿ, ಮಮತೆಯನ್ನು ಸರಿಗಟ್ಟಬಲ್ಲದ್ದು ಪ್ರಪಂಚದಲ್ಲಿ ಯಾವುದೂ ಇಲ್ಲ. ಹಾಗಾಗಿಯೇ ಏನೋ 'ತಾಯಿರೊಗಂಟ ತವರು' ಎಂಬ ಮಾತು ಈಗ ಗಾದೆ ಮಾತಾಗಿ ಬಳಕೆಯಾಗಿದೆ.

ಹೆಣ್ಣು ಗಂಡನ ಮನೆಯಲ್ಲಿದ್ದರೂ ಅಲ್ಲಿಯ ಪ್ರತಿಯೊಂದು ಕೆಲಸದಲ್ಲಿಯೂ, ವಸ್ತುವಿನಲ್ಲಿಯೂ ತಾಯಿಯನ್ನೇ ಕಾಣುತ್ತಾಳೆ. ತಾಯಿಯ ನೆನಪು ಅವಳನ್ನು ಕಿತ್ತುಕಾಡುತ್ತದೆ. ಆ ಸವಿನೆನಪಿನಲ್ಲಿಯೇ ಅವಳ ಹಂಬಲ ನೂರ್ಮಡಿಯಾಗುತ್ತದೆ.

ಹೆಣ್ಣಿಗೆ ತವರಿನವರ ಸಂಬಂಧ ಕೇವಲ ತಾಯಿಯೊಬ್ಬಳ ಬಾಂಧವ್ಯದ ಮೂಲವಾಗಿಲ್ಲದೆ; ಇಲ್ಲಿ ತಾಯಿ ನಂತರದ ಸ್ಥಾನವನ್ನು ತಂದೆ ಪಡೆದುಕೊಂಡಿದ್ದಾನೆ. ತಾಯಿಯಂತೆ ಗರತಿಯು ತನ್ನ ತಂದೆಯನ್ನೂ ನೆನೆದು ಹಂಬಲಿಸಿದ್ದಾಳೆ.

ಹೆಣ್ಣು ಮಕ್ಕಳ ಕಳುವಿ ಕಣ್ಣಿಗೆ ನೀರತಂದು
ಸಣ್ಣ ಸೆಲ್ಲದಲೆ ಮುಸುಕ್ಹಾಕಿ | ಹಡೆದಪ್ಪ
ಹೆಣ್ಣು ಸಾಕೆಂದ ಜಲುಮಾಕ ||

ತಾನು ಇದುವರೆವಿಗೂ ಸಾಕಿ ಸಲಹಿದ ತನ್ನ ಮಗಳನ್ನು ಬೇರೊಂದು ಮನೆಗೆ ಸೊಸೆಯಾಗಿ ಕಳಿಸಿಕೊಡುವಾಗ ತಂದೆಯ ಅಂತರ್ಯದಲ್ಲಿ ಮೂಡುವ ದುಗುಡ ಇಲ್ಲಿ ಮಡುಗಟ್ಟಿದೆ. ತನ್ನ ಮಗಳು ತವರು ಬಿಟ್ಟು ಹೊರಟ ಆ ಘಳಿಗೆಯಲ್ಲಿ ತಂದೆಯ ಕರುಳಬಳ್ಳಿ ಕತ್ತರಿಸಿದಂತಾಗಿ ಹೃದಯ ತುಂಬಿ ಬಂದು ಭಾವಸೆಲೆಗಳು ಭೋರ್ಗರೆದು ಕಣ್ಣನೀರಾಗಿ ಹರಿಯುವುವು. ಮಗಳ ಅಗಲಿಕೆಯ ದುಃಖವನ್ನು ತಡೆಯಲಾರದೆ ಹೆಣ್ಣು ಜೀವವೊಂದಕ್ಕೆ ಜನ್ಮಕೊಟ್ಟಿದ್ದಕ್ಕಾಗಿ ತನ್ನನ್ನು ತಾನೇ ಶಪಿಸಿಕೊಂಡು ಹಲುಬುವ ತಂದೆಯ ಮನದಾಳದ ನೋವು ಮನಮುಟ್ಟುವಂತೆ ಮೂಡಿಬಂದಿದೆ.

ಬಡವರು ಬಗ್ಗರು ಹೆಡಿಗೇರು ಬುಟ್ಟೇರು
ಹೋಗಿರಿ ನನ್ನ ತವರೀಗೆ | ನಮ್ಮಪ್ಪ
ದರುಮಾದ ಹಗೇವ ತೆಗೆದಾನು ||

ಹೆಣ್ಣು ಮಕ್ಕಳ ನ್ಯಾಯ ಉಣ್ಣೊಲ್ದೆ ಮಾಡ್ಯಾನ
ಪುಣ್ಣುಳ್ಳ ದೊರೆಯು ಹಡೆದಪ್ಪ | ನಿದಿರೀಗಿ
ಹೊನ್ನಿನ ಮಳೆಯು ಸುರಿಯಾಲಿ ||

ಹೆಣ್ಣು ಮಗಳು ತನ್ನ ತಂದೆಯನ್ನು ಕೇವಲ ಜನ್ಮದಾತ ಅಥವಾ ಆಧಾರ ಪುರುಷ ಎಂದು ಭಾವಿಸದೆ; ಆತನ ಹೃದಯ ಶ್ರೀಮಂತಿಕೆಯನ್ನು ಹಿರಿದಾಗಿ ಅರ್ಥೈಸುವ, ಆ ಮೂಲಕ ತವರಿನಲ್ಲಿ ತನ್ನ ತಂದೆಗೆ ಹೆಚ್ಚಿನ ಸ್ಥಾನಮಾನಗಳನ್ನು ನೀಡುವ ನವಿರುಭಾವ ಇಲ್ಲಿ ಅಚ್ಚೊತ್ತಿದೆ. ತನ್ನ ತಂದೆ ಮತ್ತು ತೌರು ಮನೆಯವರು ಕೊಡುಗೈದಾನಿಗಳು ಎನ್ನುವುದನ್ನು ತಂದೆಯ ಸಂಬಂಧವನ್ನು ಉಲ್ಲೇಖಿಸಿ ಅಭಿಮಾನದಿಂದ ಹೇಳಿಕೊಂಡಿದ್ದಾಳೆ.

೨ ತವರು ಮತ್ತು ಒಡಹುಟ್ಟು

ತಂದೆ, ತಾಯಿ, ಒಡಹುಟ್ಟು ಈ ಎಲ್ಲಾ ಬಾಂಧವ್ಯಗಳ ದೊಡ್ಡ ಮೊತ್ತ 'ತವರು' ಎನ್ನುವ ಉದಾತ್ತ ಭಾವ ಹೆಣ್ಣಿನ ಒಡಲೊಳಗೆ ಸದಾ ನಿನಾದಿಸುತ್ತಲೇ ಇರುತ್ತದೆ. ತವರನ್ನು ಕೇವಲ ಹಡೆದವರಿಗಷ್ಟೇ ಸೀಮಿತಗೊಳಿಸಿ ಕೃತಾರ್ಥಳಾಗುವ ಭಾವ ಹೆಣ್ಣಿನದಲ್ಲ. ಹೆತ್ತವರೊಡನೆ ತನ್ನ ಒಡಹುಟ್ಟನ್ನು ಬಾಚಿ ತಬ್ಬಿ ತವರಿಗೆ ವಿಶೇಷ ಗೌರವ ಸಲ್ಲಿಸುವ ಹೆಣ್ಣಿನ ಅಂತರಾಳದ ಅನಿಸಿಕೆ ತ್ರಿಪದಿಗಳಲ್ಲಿ ದಾಖಲಾಗಿದೆ. ಕುಟುಂಬದಲ್ಲಿ ಸಹೋದರತ್ವ ಲಿಂಗಾಧಾರಿತವಾದುದು. ಹೆಣ್ಣಿಗೆ ತನ್ನ ಅಣ್ಣ ತಮ್ಮಂದಿರ ಉಪಸ್ಥಿತಿ ಆತ್ಮಸ್ಥೈರ್ಯವನ್ನೂ ಭಾವನಾತ್ಮಕ ಬೆಂಬಲವನ್ನೂ, ಕೌಟುಂಬಿಕ ಮತ್ತು ಸಾಮಾಜಿಕ ಭದ್ರತೆಯನ್ನೂ ತಂದುಕೊಡುತ್ತದೆ.

ಹೆಣ್ಣೀನ ಜನುಮಾಕ ಅಣ್ಣಾತಮ್ಮರು ಬೇಕು
ಬೆನ್ನುಕಟ್ಟುವರು ಸಭೆಯೊಳಗೆ | ಸಾವಿರ
ಹೊನ್ನು ಕಟ್ಟುವರು ಉಡಿಯೊಳಗೆ ||

ಸದಾ ಆಸರೆಯಾಗುವ, ಒಳಿತನ್ನು ಬಯಸುವ ಸಂಕಷ್ಟದಲ್ಲಿ ಕೈಬಿಡದೆ ಸಾಕಿ ಸಲಹುವ ಸಾಮಾಜಿಕ ಜವಾಬ್ದಾರಿಯ ಅಣ್ಣ- ತಮ್ಮಂದಿರ ಬಾಂಧವ್ಯವನ್ನು ಬಯಸುವ ಪರಿ ವಿಶಾಲ ಅರ್ಥದಿಂದ ಒಡಮೂಡಿದೆ.

ಸಣ್ಣ ಶಾಂವಿಗಿ ಬಲ್ಲ ಚಿನ್ನಿ ಸಕ್ಕರಿ ಬಲ್ಲ
ಹೆಣ್ಣೆಂಬ ಶಬುದ ಬಿಡಲೊಲ್ಲ | ನನತಮ್ಮ
ಹೆಣ್ಣ ಕೊಡತೀನಿ ಉಣ್ಣೇಳೊ ||

ನನ್ನ ಹೊಟ್ಟೇಲ್ಹುಟ್ಟಿ ನನಗೆ ನಾದಿನಿಯಾಗಿ
ನನ್ನ ಹೆತ್ತಮನೆಗೆ ಸೊಸೆಯಾಗಿ | ನನಮಗಳು
ನನ್ನ ತಮ್ಮನ ಮಡದಿಯು ||

ತಾನು ಹಡೆದ ಮಗಳನ್ನು ತನ್ನ ತಮ್ಮನಿಗೆ ಮಡದಿಯಾಗಿ, ತಾಯಿಗೆ ಸೊಸಿಯಾಗಿ ಮಾಡಿ ಆ ಮೂಲಕ ತವರಿನ ಬಾಂಧವ್ಯವನ್ನು ಇನ್ನೂ ಗಟ್ಟಿಗೊಳಿಸಿಕೊಳ್ಳಬೇಕೆನ್ನುವ ಹೆಣ್ಣಿನ ಬಯಕೆ ವೇದ್ಯವಾಗಿದೆ. ತನಗೂ ತನ್ನ ತವರಿಗೂ ಮಗಳನ್ನೇ ಸೇತುವೆಯಂತೆ ಬಳಸಿಕೊಳ್ಳುವ ಹೆಣ್ಣು, ತಮ್ಮನನ್ನು ಅಳಿಯನನ್ನಾಗಿ, ತಾಯಿಯನ್ನು ಬೀಗತಿಯನ್ನಾಗಿ ಸ್ವೀಕರಿಸಿರುವ ರೀತಿಯಲ್ಲಿ ಸಂಬಂಧಗಳ ವಿವಿಧ ಮುಖಗಳನ್ನು ಪರಿಚಯಿಸಿಕೊಳ್ಳಬಹುದು. ತಾನು ಬಿಟ್ಟು ಬಂದ ಸ್ಥಾನದಲ್ಲಿ ತವರಿನ ಸ್ಥಿರ-ಚರ ಸಿರಿವಂತಿಕೆಗೂ ತನ್ನ ಮಗಳೇ ಒಡೆಯಳಾಗಬೇಕೆನ್ನುವ ಹಂಬಲ ಹೆಣ್ಣಿನದು. ಇಲ್ಲಿ ತವರಿನ ಹಕ್ಕನ್ನು ಮಗಳಿಗೆ ವರ್ಗಾಯಿಸುವುದು ಒಂದಾದರೆ, ಮಗಳ

ಸ್ಥಾನದಲ್ಲಿ ಬೇರೊಂದು ಹೆಣ್ಣು ಬಂದಲ್ಲಿ ತವರಿನವರ ಕ್ಷೇಮಕ್ಕೆ ಕುಂದುಂಟಾಗುತ್ತದೆ ಎನ್ನುವ ಮುಂದಾಲೋಚನೆಯೂ ಇದ್ದಂತಿದೆ. ಇದು ವಿಶೇಷವಾಗಿ ಜನಪದದಲ್ಲಿ ರೂಢಿಯಲ್ಲಿದ್ದ ಒಳಬಾಂಧವ್ಯದ ಪದ್ಧತಿಯಾಗಿದೆ.

ಅಣ್ಣಯ್ಯ ಅಣ್ಣಯ್ಯ ಹೆಣ್ಣೀಗೆ ನಾ ಬಂದೆ
ಹೊನ್ನೀನ ಗ್ವಾಡೆ ಏರಗೀದೆ | ಅಣ್ಣಯ್ಯ
ಆ ಹೆಣ್ಣ ನನಿಗೆ ಕೊಡುಬಾರೊ ||

ತಮ್ಮನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಡುವುದು ತವರಿನ ಹಕ್ಕೆಂದು ಭಾವಿಸಿದ ಹಾಗೆಯೇ, ಅಣ್ಣನ ಮಗಳನ್ನು ತನ್ನ ಮಗನಿಗೆ ಮಡದಿಯಾಗಿಸಿಕೊಂಡು ಸೊಸಿಯಾಗಿ ಸ್ವೀಕರಿಸುವುದು ತವರಿನ ಹಕ್ಕೆಂದೇ ಭಾವಿಸಿದ್ದಾಳೆ. ಅಣ್ಣನೇ ತವರಿನ ಉತ್ತರಾಧಿಕಾರಿ, ಒಡೆಯ. ಅವನ ಮಗಳನ್ನು ಸೊಸೆಯನ್ನಾಗಿ ಮಾಡಿಕೊಂಡಲ್ಲಿ ತವರಿನವರೊಟ್ಟಿಗಿನ ಸಂಬಂಧ ವೃದ್ಧಿಯಾಗುತ್ತದೆಯಲ್ಲದೆ, ತವರುತನ ಉಳಿದು ಬೆಳೆಯುತ್ತದೆನ್ನುವ ಅಭೀಪ್ಸೆ ಹೆಣ್ಣಿನದು.

ಕುಟುಂಬದಲ್ಲಿ ರಕ್ತ ಸಂಬಂಧಗಳ ನೈಜ ಆತ್ಮೀಯತೆ ಕಂಡುಬರುವುದು ಸೋದರರಿಗಿಂತಲೂ ಸೋದರಿಯರಲ್ಲೇ ಹೆಚ್ಚು. ಪರಸ್ಪರರ ನಡುವೆ ವಿರಸ ಮೂಡದಂತೆ ಸಾವಯುವ ಸಾಮರಸ್ಯಕ್ಕೆ ಅಕ್ಕತಂಗಿಯರಿಬ್ಬರು ತಮ್ಮನ್ನು ತಾವೇ ಸಂತೈಸಿ, ಸಮಾಧಾನಿಸಿಕೊಳ್ಳುವ, ವಿರಸದತ್ತ ಹೊರಟ ಬಾಂಧವ್ಯವನ್ನು ಸಾಮರಸ್ಯದೆಡೆಗೆ ತಂದು ಬಿಗಿಪಡಿಸಿಕೊಳ್ಳುವ ಸಂಬಂಧದ ಉತ್ಕಟತೆಯನ್ನು ಮನಗಾಣಬಹುದು.

ಆಡಿನ ಮಲಿಹಂಗ ಜೋಡಿ ನಾವಿಬ್ಬರು
ಆಡಬ್ಯಾಡ ತಂಗಿ ಕದನವ | ಜಗಳಕ |
ಜೋಡೀನ ಹಕ್ಕಿ ಅಗಲ್ಯಾವ ||

ತಾಯಿ ಮಕ್ಕಳು ಜೋಡು ತಾಳಿ ಸಾಮಾನು ಜೋಡು
ನಾನು ನಮತಂಗಿ ಸಮಜೋಡು | ಬರುವಾಗ
ಕಂಡವರು ಕರೆದು ಕೇಳ್ಯಾರ ||

ಒಂದಾದರೆ ಬಾಳುವೆವು, ಎರಡಾದರೆ ಅಳಿಯುವೆವು ಎನ್ನುವ ಜೀವನ ಸಿದ್ಧಾಂತಕ್ಕೆ ಕಟ್ಟುಬಿದ್ದ ಜನಪದರಲ್ಲಿ ಸಂಘಟನಾತ್ಮಕ ಬದುಕಿಗೆ ಹೆಣ್ಣು ಮಕ್ಕಳೇ ಹೆಚ್ಚು ಕಾರಣವಾಗುತ್ತಾರೆ. ಎಂದಾದರೂ ಒಂದು ದಿನ ತವರನ್ನು ತೊರೆದು ಹೋಗಲೇಬೇಕೆನ್ನುವ ನಗ್ನ ಸತ್ಯದ ಅರಿವಿದ್ದರೂ, ಇರುವವರೆವಿಗೆ ತವರಿನ ಮಾನಾಪಮಾನಗಳನ್ನು ಕಾಯ್ದುಕೊಳ್ಳುವ, ಗಂಡಂದಿರನ್ನು ಸೇರಿದಾಗ ಅಲ್ಲಿಯೂ ತಮ್ಮ ಸೋದರಿತನವನ್ನು ಬಿಡದೆ ಕಾಪಾಡಿಕೊಳ್ಳುವ ಅದಮ್ಯವೂ ಅನನ್ಯವೂ ಆದ ಸಹೋದರಿಯರ ಬಾಂಧವ್ಯ ಅತ್ಯಂತ ಆತ್ಮೀಯವಾದುದು.

೩ ತವರು ಮತ್ತು ಅತ್ತಿಗೆ ನಾದಿನಿಯರು

ಹೆಣ್ಣಿಗೆ ತನ್ನ ತಂದೆ, ತಾಯಿ ಒಡಹುಟ್ಟಿದವರು ಪ್ರಾಥಮಿಕ ಬಂಧುಗಳಾದರೆ, ಅತ್ತಿಗೆ ನಾದಿನಿಯರು ಬಂಧುಗಳ ಮೂಲಕ ಬಂಧುಗಳಾಗುವುದರಿಂದ ದ್ವಿತೀಯ ಬಂಧುಗಳು ಎನಿಸಿಕೊಳ್ಳುತ್ತಾರೆ.

ಅನ್ಯೋನ್ಯತೆಯಿಂದ ಸಹ್ಯವಾಗಿದ್ದ ಅಣ್ಣ- ತಮ್ಮ, ಅಕ್ಕ-ತಂಗಿ ಇತ್ಯಾದಿ ಬಾಂಧವ್ಯಗಳು ಅತ್ತಿಗೆ - ನಾದಿನಿಯರ ಆಗಮನದ ನಂತರ ಕಲುಷಿತಗೊಳ್ಳುತ್ತವೆ ಎನ್ನುವ ಭಯ ಸಾಮಾನ್ಯವಾಗಿ ಹೆಣ್ಣು ಮಕ್ಕಳಲ್ಲಿ ಮನೆಮಾಡಿರುತ್ತದೆ.

ಕಣ್ಣೀಗಿ ಮೂಗೀಗಿ ಎರಡೇನ ಅತ್ತೀಗಿ
ನಾ ನನ್ನ ಅಣ್ಣಾ ಎರಡಾದ | ಅತ್ತಿಗೆಮ್ಮ
ನಿನ್ನಿಂದ ಅಣ್ಣಾ ಎರಡಾದ ||

ಅಣ್ಣನ ಹೆಂಡತಿಯಾಗಿ ಹೊರಗಿನಿಂದ ಬಂದು; ಅತ್ತಿಗೆಯ ಸ್ಥಾನಪಡೆದುಕೊಳ್ಳುವ, ಅಪರಿಚಿತ ಹೆಣ್ಣಿನ ಆಗಮನದಿಂದ ತನ್ನ ಅಣ್ಣಾ ತನ್ನನ್ನು ಕಡೆಗಣಿಸುವ ಶಂಕೆ ತಂಗಿಯನ್ನು ಕಾಡಿದಂತಿದೆ. ಅಣ್ಣನಿಗೆ ಹೆಂಡತಿಯಾಗಿ ಬಂದವಳು ಎಷ್ಟೇ ಉತ್ತಮ ಗುಣಗಳನ್ನು ಹೊಂದಿದ್ದರೂ ಅವಳನ್ನು ಅನುಮಾನದಿಂದಲೇ ಕಾಣುವ ಹೆಣ್ಣಿನ ಮನೋಭಿಲಾಷೆಯ ಹಿಂದೆ ಆಕೆ ತನ್ನ ಅಣ್ಣನೊಂದಿಗೆ ಹೊಂದಿರುವ ರಕ್ತಸಂಬಂಧಿ ಬಾಂಧವ್ಯವೇ ಕಾರಣವಾಗುತ್ತದೆ.

ಅತ್ತೀಗಿ ಹಡೆಯಾಲಿ ಹತ್ತೆಮ್ಮೆ ಕರಿಯಾಲಿ
ಹಿತ್ತಾಲ ಬಾಳಿ ಚಿಗಿಯಾಲಿ | ಅತ್ತ್ಯೆಂದು
ಅತ್ತಿಗೆಯ ಮಗಳು ಕರಿಯಾಲಿ ||

ಹೆಣ್ಣು ಮಾತ್ಸರ್ಯದ ಮತ್ತೊಂದು ಮುಖ ಎನ್ನುವುದಕ್ಕೆ ಅತ್ತಿಗೆ ಸಾಕ್ಷಿಯಾಗಿ ನಿಲ್ಲುತ್ತಾಳೆ. ಅತ್ತಿಗೆ ನಾದಿನಿಯರು ಪರಸ್ಪರ ಹಾವು ಮುಂಗುಸಿಗಳಂತೆ ಕಂಡರೂ ತಮ್ಮ ತಮ್ಮ ಮಕ್ಕಳು ದೊಡ್ಡವರಾದ ಮೇಲೆ ಅದೇ ಮಕ್ಕಳಿಗೆ ಪರಸ್ಪರ ಕೊಟ್ಟು ಪಡೆಯುವ ವಿವಾಹ ಸಂಬಂಧದ ಸಂದರ್ಭಬಂದಾಗ ಅತ್ತಿಗೆ ನಾದಿನಿಯರು ಬೀಗತಿಯರಾಗುವ ಸಂದರ್ಭ ಒದಗಿಬರುತ್ತದೆ. ಅದು ತವರಿನ ಬಾಂಧವ್ಯದ ಬೆಸುಗೆಯ ಮತ್ತೊಂದು ರೂಪವಾಗಿ ವ್ಯಕ್ತವಾಗುತ್ತದೆ.

ಬಂಧುತ್ವವನ್ನು ಹೇಗೆಲ್ಲ ಬಿಗಿದಪ್ಪಿ ಮುನ್ನಡೆಯಲು ಹೆಣ್ಣು ಪ್ರಯತ್ನಶೀಲೆಯಾದರೂ ಇಂತಹ ಬಾಂಧವ್ಯವೊಂದು ತಮ್ಮನಿಗೆ ಹೆಂಡತಿಯಾಗಿ ಬಂದವಳ ಮೂಲಕ ಜರ್ಜರಿತಗೊಳ್ಳುತ್ತದೆ ಎನ್ನುವುದಕ್ಕೆ ಉದಾಹರಣೆ ಸಿಕ್ಕುತ್ತವೆ. ಬಹಳ ದಿನಗಳ ಬಳಿಕ ತಮ್ಮನ ಮನೆಗೆ ಮಮತೆಯಿಂದ ಓಡೋಡಿ ಬಂದ ಅಕ್ಕನನ್ನು ಪ್ರೀತಿಯಿಂದ ಎದುರುಗೊಳ್ಳಲು ತಮ್ಮ ತನ್ನ ಹೆಂಡತಿಗೆ ಆದೇಶಿಸಿದಾಗ ಅವಳು ಪ್ರತಿಯಾಗಿ 'ಅಷ್ಟು ಅಂದವ್ಳೆ ಆಡಾವ್ಳೆ ಅಂಗಾಳದಿಂದಾಚೆ

ಇರಹೇಳಿ' ಎಂದು ಅಸಡ್ಡೆಯಿಂದ ನಿರ್ಲಕ್ಷಿಸುತ್ತಾಳೆ. ಇದನ್ನರಿತ ತಮ್ಮಯ್ಯ ಬೇಸರದಿಂದ ಅಕ್ಕನಿಗೆ ಹೇಳುವ ಮಾತು -

ಪಾಪಗೇಡಿ ತಮ್ಮನ ಮನೆಗೆ ಯಾಕೆ ಬಂದೆ ಅಕ್ಕಯ್ಯ
ರಾಕಾಷಿಯವಳೆ ರವಣಿವಳೆ | ನನ್ನಕ್ಕ
ನೀಕೋಟೆ ನೋಡಿ ತಿರುಗವ್ವ ||

ಹೀಗೆ ಸಮಾಧಾನಿಸಿದ ತಮ್ಮನ ಮಾತಿಗೆ ಅಕ್ಕನಲ್ಲಿ ಕೋಪವೇ ಉಂಟಾದರೂ ಪ್ರತಿಯಾಗಿ ಹೀಗೆ ಹಾರೈಸುತ್ತಾಳೆ. "ಕ್ಯಾಟೆನೋಡಾಕೆ ಬಂದೆ ಊಟಾಕೆ ಬರಲಿಲ್ಲ ನೀ ಹೆಚ್ಚಾಳವಾಗಿ ಬದುಕಪ್ಪ". ಹೆಣ್ಣು ತನಗೆಷ್ಟೇ ನೋವಾದರೂ ತವರಿನವರನ್ನು ಶಪಿಸುವುದಿಲ್ಲ. ಇಲ್ಲಿ ಪ್ರಾಥಮಿಕ ಸಂಬಂಧಿಗಳಾದ ಅಕ್ಕ ತಮ್ಮನ ಬಾಂಧವ್ಯದೊಂದಿಗೆ ಅತ್ತಿಗೆ-ನಾದಿನಿಯರ ಬಾಂಧವ್ಯ ಎಂದೂ ಸರಿಸಾಟಿಯಾಗಿ ನಿಲ್ಲಲಾರದು. ಅಂತೆಯೇ ಒಂದು ಸಂದರ್ಭದಲ್ಲಿ ರಕ್ತಸಂಬಂಧ ಪ್ರಾಮುಖ್ಯತೆಯನ್ನು ಪಡೆದುಕೊಂಡರೆ, ಮತ್ತೊಂದು ಸಂದರ್ಭದಲ್ಲಿ ವಿವಾಹ ಸಂಬಂಧ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

೪ ತವರು ಮತ್ತು ಗೆಳತಿಯರು, ನೆರೆಹೊರೆ

ಹೆಣ್ಣಿಗೆ ಅಪ್ಪ, ಅಮ್ಮ, ಒಡಹುಟ್ಟು, ಅತ್ತಿಗೆ-ನಾದಿನಿ ಇಷ್ಟಕ್ಕೆ 'ತವರು' ಪೂರ್ಣಗೊಳ್ಳದೆ ತಾನ್ಹುಟ್ಟಿ ಬೆಳೆದ ತಾಣ, ಜನಮನ, ಊರುಕೇರಿ, ಗೆಳೆಯ ಗೆಳತಿ, ಒಡನಾಡಿಗಳು ಇತ್ಯಾದಿ ಎಲ್ಲವೂ ತವರಿನ ಹಿನ್ನೆಲೆಯಲ್ಲಿ ಅರ್ಥಕಂಡುಕೊಳ್ಳುತ್ತವೆ.

ಗೆಳೆತನ ಕೂಡಿದರ ಗೆಜ್ಜಿ ಜೋಡಿಸಿದ್ಹಾಂಗ
ಗಜರೀಯ ತುಂಬ ಕೊರೆದ್ಹಾಂಗ | ಗೆಳೆತವ್ವ |
ಗುಜ್ಜಿ ನಾವ್ಯಾಂಗ ಅಗಲೂನ ||

ಸ್ನೇಹ ಸಂಬಂಧಗಳು ಕೇವಲ ಉಡುವ, ಉಣ್ಣುವ, ಅನುಭವಿಸುವ ಪ್ರಕ್ರಿಯೆಗಷ್ಟೇ ಸೀಮಿತವಾಗಿರದೆ ತ್ಯಾಗಮನೋಭಾವನೆಯ ಗುಣವನ್ನು ಮೈಗೂಡಿಸಿಕೊಂಡಿದ್ದವು. ಸ್ನೇಹ, ಗೆಳೆತನ ಇಬ್ಬರ ನಡುವಿನ ಮೈತ್ರಿಯ ಪ್ರತೀಕ. ಇದು ಹೀಗೆಯೇ ಇರಬೇಕು, ಅದಕ್ಕೊಂದು ಸೈದ್ಧಾಂತಿಕ ನೆಲೆಗಟ್ಟಿರಬೇಕೆಂಬ ಅಂಶವನ್ನು ಜನಪದರು ಮನಗಂಡಿದ್ದರು. ಆ ಹಿನ್ನೆಲೆಯಲ್ಲಿಯೇ ಜೀವದ ಗೆಳತಿಯರ ಮಾನವೀಯತೆ, ಪ್ರೀತಿ ವಿಶ್ವಾಸ ಮತ್ತು ಸಹಬಾಳ್ವೆಯ ಬದುಕನ್ನು ಮೇಲಿನ ತ್ರಿಪದಿ ಬಿಂಬಿಸಿದೆ. ಬಹಳ ಕಾಲ ಅನ್ಯೋನ್ಯವಾಗಿದ್ದ ಗೆಳತಿಯರು ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ತಂತಮ್ಮ ತಾಯಿ, ತಂದೆಯನ್ನು ಅಗಲುವಿಕೆಗಿಂತ ಮಿಗಿಲಾಗಿ ಗೆಳತಿಯರ ಅಗಲುವಿಕೆ ನಷ್ಟವಾದಂತೆನಿಸಿ ಒಬ್ಬರಿಗೊಬ್ಬರು ಅಪ್ಪಿಕೊಂಡು ದುಃಖಿಸುತ್ತಾರೆ. ಇಲ್ಲಿ ರಕ್ತಸಂಬಂಧಕ್ಕಿಂತಲೂ ಸಾಮಾಜಿಕ ಸಂಬಂಧವೊಂದು ತನ್ನ ಮೌಲ್ಯ ಕಂಡುಕೊಂಡಿದೆ.

ಮೂಡಾಲ ಸೀಮೆಗೆ ಹೋಗಿ ಬಾ ಮಳೆರಾಯ
ಕಗ್ಗಲ್ಲ ನನ್ನ ತವರೀನ | ಮುಂದೆ
ಜಗ್ಗೀಸಿ ಹುಯ್ಯೊ ಮಳೆರಾಯ ||

ತನ್ನನ್ನು ಕೊಟ್ಟ ಮನೆಯಲ್ಲಿ ಏನೆಲ್ಲ ಸಿರಿಸಂಪತ್ತಿದ್ದರೂ ಹೆಣ್ಣಿಗೆ ಸದಾ ತನ್ನ ತವರಿನದೇ ಚಿಂತೆಯಾಗಿರುತ್ತದೆ. ತಾನಿರುವೆಡೆ ಕಂಡುಬರುವ ಸುಖ-ಸಮೃದ್ಧಿ, ಸಂತೋಷ-ನೆಮ್ಮದಿಗಳು ತನ್ನ ತವರಿಗೂ ಹರಿದು ಹೋಗಲಿ ಎನ್ನುವ ಹೆಣ್ಣಿನ ಮನದಾಳದ ಮೂಕ ವೇದನೆ ಮಾರ್ದನಿಸಿದೆ. ತನ್ನೂರಿಗೆ ಧಾರಾಕಾರವಾಗಿ ಸುರಿದ ಮಳೆಯು ತವರಿಗೂ ಬಿದ್ದರೆ ಅಲ್ಲಿ ತವರಿನವರ ಬಾಳು ಬಂಗಾರವಾದೀತು! ಎನ್ನುವ ನಿಸ್ವಾರ್ಥ ಭಾವ ಇಲ್ಲಿ ವ್ಯಕ್ತಗೊಂಡಿದೆ.

ತವರು ಮತ್ತು ಹೆಣ್ಣಿನ ಸ್ಥಾನಮಾನ

'ತವರು' ಹೆಣ್ಣಿಗೆ ಕೌಟುಂಬಿಕ ಬಾಂಧವ್ಯದ ಹಿನ್ನೆಲೆಯಲ್ಲಿ ಮಾತ್ರವೇ ಸ್ಥಾನಮಾನಗಳನ್ನು ತಂದುಕೊಡದೆ; ಅವಳ ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ಗುರುತಿಸುವಲ್ಲಿಯೂ ಪ್ರಮುಖ ಪಾತ್ರವಹಿಸುತ್ತದೆ. 'ಕುಲನೋಡಿ ಹೆಣ್ಣು ಕೊಡು ಜಲನೋಡಿ ಬಾವಿತೋಡು'...ಎನ್ನುವ ಮಾತು ಬಹುಶಃ ಕುಲ ಎನ್ನುವುದು ಕಳ್ಳುಬಳ್ಳಿಯಿಂದ ಬೆಸೆದಿರುವ 'ತವರು' ಎನ್ನುವುದರ ಮತ್ತೊಂದು ರೂಪವಿರಬಹುದೇನೋ... ಆದ್ದರಿಂದಲೇ ಸಮಾಜದಲ್ಲಿ ಹೆಣ್ಣೊಂದರ ಯಾವುದೇ ಸ್ಥಾನಮಾನಗಳು, ಸ್ಥಿತಿಗತಿಗಳು ನಿರ್ದಿಷ್ಟವಾಗಿ ರೂಪುಗೊಳ್ಳುವುದೇ ಅವಳು ಹುಟ್ಟಿ ಬೆಳೆದಿರಬಹುದಾದ ತವರಿನಿಂದ. ಅಂದರೆ ಹೆಣ್ಣಿಗೆ ಅವಳ ಹುಟ್ಟಿನಿಂದಲೇ ತವರು ಒಂದು ಸ್ಥಾನಮಾನ ಕಲ್ಪಿಸಿಕೊಟ್ಟಿರುತ್ತದೆ.

'ತವರು ಮನೆ' ಹೆಣ್ಣಿಗೆ ಒಂದು ವಿಶಿಷ್ಟ ಅವ್ಯಕ್ತ ಅನುಭವಲೋಕ. ತವರು ಮನೆಯನ್ನು ಅಗಲುವ, ಗಂಡನ ಮನೆಯನ್ನು ಸೇರುವ ಎರಡೂ ಕ್ರಿಯೆಗಳನ್ನು ಹೆಣ್ಣೇ ನಿರ್ವಹಿಸುತ್ತಾಳೆ. ಪಿತೃಪ್ರಧಾನ ವ್ಯವಸ್ಥೆಯಲ್ಲಾಗಲಿ, ಮಾತೃಪ್ರಧಾನ ವ್ಯವಸ್ಥೆಯಲ್ಲಾಗಲಿ ಸಂಬಂಧಗಳನ್ನು ಜೋಡಿಸುವವಳು, ಸಂಬಂಧಗಳನ್ನು ಸೃಷ್ಟಿಸುವವಳು ಹೆಣ್ಣೇ ಆಗಿರುತ್ತಾಳೆ. ಆದುದರಿಂದಲೇ ಅವಳನ್ನು ಸಮಾಜದ ಸಾರ್ವತ್ರಿಕ ಘಟಕ (universal unit) ಎಂದು ಕರೆಯಬಹುದು.

ಕೌಟುಂಬಿಕ ಬಾಂಧವ್ಯದ ಸೆಳೆತ, ತನ್ನೊಳಗಿನ ಆರ್ಥಿಕ ಅಭದ್ರತೆ, ದೈಹಿಕ, ಜೈವಿಕ ಪ್ರಕ್ರಿಯೆಯಿಂದ ಉಂಟಾಗುವ ಸಂದರ್ಭಗಳ ಒತ್ತಡ ಇತ್ಯಾದಿ ಕಾರಣಗಳಿಂದ ತನ್ನ ಸ್ಥಾನಮಾನಗಳನ್ನು ತವರಿನ ವ್ಯಾಪ್ತಿಯಲ್ಲಿಯೇ ಪಡೆದುಕೊಳ್ಳಲು ಹೆಣ್ಣು ಆಶಿಸುತ್ತಾಳೆ. ನಾಗರಿಕ ಸಮಾಜದಲ್ಲಿ ತನ್ನ ಮಗಳಿಗೆ ಮದುವೆಯ ಸಂದರ್ಭದಲ್ಲಿ ಕೊಡುವ ಉಡುಗೊರೆಯನ್ನು ವರದಕ್ಷಿಣೆ ಎಂದು ವ್ಯಾಖ್ಯಾನಿಸದೆ, ಅದು ನನ್ನ ಮಗಳ ಅರಿಶಿಣ -ಕುಂಕುಮಕ್ಕಾಗಿ ಎಂದು ದೃಢೀಕರಿಸಿಕೊಳ್ಳುವ ಹಡೆದವರ ಆಶಯದ ಹಿಂದೆ ತನ್ನ ಮಗಳಿಗೆ

ತವರಿನಿಂದ ನಿರ್ದಿಷ್ಟ ಸ್ಥಾನಮಾನಗಳು ಹೀಗೆಯೇ ಲಭ್ಯವಾಗಬೇಕೆನ್ನುವ ತುಡಿತವಿದೆ. ಹಾಗೆಯೇ ಕುಟುಂಬದೊಳಗೆ ತಮ್ಮನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿ ತವರಿನಲ್ಲಿ ತನ್ನ ಅಸ್ತಿತ್ವವಹಿಸಿಕೊಳ್ಳುವ ಪ್ರಯತ್ನ ಹೆಣ್ಣಿನದು. ಅದಕ್ಕೆ ಅವಳ ತಂದೆ ತಾಯಿಯರ ಬೆಂಬಲವೂ ಇರುತ್ತದೆ. ಇಲ್ಲಿ ತಂದೆ ತಾಯಿಯರು ಮೊಮ್ಮಗಳ ಮೂಲಕ ಮಗಳಿಗೆ ತವರಿನಲ್ಲಿ ಸ್ಥಾನ ಕಲ್ಪಿಸಿಕೊಡುವ ಪ್ರಯತ್ನಮಾಡುತ್ತಾರೆ.

ಬಂಜೆಯಾದ ಹೆಣ್ಣೊಬ್ಬಳನ್ನು ಗಂಡ, ಗಂಡನ ಮನೆಯವರು ಹೊರಹಾಕಿದಂತಹ ಸಂದರ್ಭದಲ್ಲಿ ಅವಳ ಬಂಜೆತನವನ್ನು ಹೊಟ್ಟೆಗಾಕಿಕೊಂಡು ಮಗಳೆನ್ನುವ ಮಮಕಾರದಿಂದ ತವರಿನಲ್ಲಿಯೇ ಸಾಕಿ ಸಲಹುತ್ತಾರೆ. ಈ ಹಿನ್ನೆಲೆಯಲ್ಲಿ 'ತವರು' ಹೆಣ್ಣಿಗೆ ನಿಜವಾದ ಸ್ಥಾನಮಾನಗಳನ್ನು ಕಲ್ಪಿಸಿಕೊಡುವ ಆಶ್ರಯದಾಣವಾಗಿರುತ್ತದೆ.

ತವರಿನ ಆಸ್ತಿಯ ಒಡೆತನ ತನಗೆ ದಕ್ಕಲೇ ಬೇಕೆನ್ನುವ, ಅದು ತನ್ನ ಹಕ್ಕು ಎಂದು ಭಾವಿಸುವ ಹೆಣ್ಣಿನ ಅಂತರಾಳದ ಅನಿಸಿಕೆಯೊಂದು ಹೀಗಿದೆ. "ಅಣ್ಣಯ್ಯ ನಾನು ನಿನ್ನಂಗೆ ಗಂಡಾಗಿ ಹುಟ್ಟಿದ್ರೆ ಎರೆಯಾ ಗದ್ದೇಲಿ ಸರಿಪಾಲು ತಕ್ಕಂಡು ದೊರೆಯಾಗಿ ನಾನು ಇರುತ್ತಿದ್ದೆ" ಎಂದು ಅಣ್ಣನಿಗೆ ತಂಗಿ ಹೇಳುವ ಮಾತಿನಲ್ಲಿ ತನ್ನ ತವರಿನ ಆಸ್ತಿಹಕ್ಕಿಗೆ ತಾನು ಬಾಧ್ಯಸ್ಥಳು ಎನ್ನುವ ಅಂಶ ಇದರಿಂದ ವೇದ್ಯವಾಗುತ್ತದೆ. ಇದಕ್ಕೆ ಉದಾಹರಣೆಯೆಂಬಂತೆ ಉತ್ತರ ಕರ್ನಾಟಕದ ಭಾಗದಲ್ಲಿ ಇಂದಿಗೂ ಸುಗ್ಗಿ ಕಾಲದಲ್ಲಿ ಕಂಡುಬರುವ ಜೋಳದ ರಾಶಿಕಣಕ್ಕೆ ಆ ಮನೆಯ ಹೆಣ್ಣುಮಗಳು ಬಂದು ಆರತಿ ಎತ್ತಿ ಪೂಜಿಸುವ ಪದ್ಧತಿ ಇದೆ. ಇದು ಸಾಧ್ಯಗೊಳ್ಳಲೇಬೇಕು. ಹಾಗೇನಾದರೂ ರಾಶಿಕಣಕ್ಕೆ ಕರೆಸದಿದ್ದರೆ ಅವಳು ಪ್ರತಿಭಟಿಸುವ ಹಕ್ಕು ಹೊಂದಿರುತ್ತಾಳೆ. ಈ ಉದಾಹರಣೆಯಿಂದ ತವರಿನ ಆಸ್ತಿಯ ಹಕ್ಕಿಗೆ ಹೆಣ್ಣು ಸಾಂಪ್ರದಾಯಿಕವಾಗಿ ಹೇಗೆ ಬಾಧ್ಯಸ್ಥಳಾಗಿದ್ದಾಳೆ ಎನ್ನುವ ಅಂಶ ಕಂಡುಬರುತ್ತದೆ.

ಆದರೂ ಮಹಿಳೆಗೆ ಆಸ್ತಿ ಹಕ್ಕಿನ ಪರಿಕಲ್ಪನೆ ತವರು ಮನೆಯಲ್ಲಿ ಭಾವನಾತ್ಮಕವಾಗಿ ಮಾತ್ರ ಇರುವುದನ್ನು ಗಮನಿಸಬಹುದು. ಅವಳಿಗೆ ಗಂಡುಮಕ್ಕಳಂತೆಯೇ ಅಪ್ಪನ ಮನೆಯಲ್ಲಿ ಆಸ್ತಿಗೆ ವಾರಸುದಾರಳಾಗಿ ಇರಬೇಕೆಂಬ ನಿರೀಕ್ಷೆಯಿದ್ದರೂ ಅಂದಿನ ವ್ಯವಸ್ಥೆ ಕಲ್ಪಿಸಿಕೊಟ್ಟಿರಲಿಲ್ಲ. ಬದಲಾಗಿ ಮದುವೆಯಾಗಿ ಹೊರಹೋಗುವಾಗ ಎತ್ತು, ಎಮ್ಮೆ, ದವಸ, ಧಾನ್ಯದ ರೂಪದಲ್ಲಿ ಕೊಡುತ್ತಿದ್ದ ಬಳುವಳಿಯೇ ಅವಳ ಪಾಲಿಗೆ ಆಸ್ತಿಯಾಗಿತ್ತು. ಪ್ರಮುಖವಾಗಿ ಬಾಂಧವ್ಯದ ಹಿನ್ನೆಲೆಯಲ್ಲಿ ವಿಚಾರಮಾಡುವುದಾದರೆ ಗಂಡುಮಕ್ಕಳ ಹಾಗೆ ಹೆಣ್ಣುಮಗಳು ಸಮಪಾಲು ತೆಗೆದುಕೊಂಡು ತವರಿನಲ್ಲಿಯೇ ಉಳಿಯುತ್ತಿದ್ದ ರೆ ಮೇಲ್ಕಾಣಿಸಿದ ಮಟ್ಟಿಗೆ ಅಣ್ಣತಮ್ಮಂದಿರ ಜೊತೆ ಸನಿಹ ಬಾಂಧವ್ಯವನ್ನು ನಿರೀಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ. ಇವತ್ತಿಗೂ ಕೂಡ ಸಂವಿಧಾನಾತ್ಮಕವಾಗಿ ತವರು ಮನೆಯಲ್ಲಿ ಹೆಣ್ಣಿಗೆ ಆಸ್ತಿಯಲ್ಲಿ ಸಮಪಾಲು ಪಡೆಯುವ ಅವಕಾಶವಿದ್ದರೂ, ಅವಳು ಚಲಾಯಿಸಿಬಿಟ್ಟರೆ ತವರು ಮನೆಯವರೊಂದಿಗಿನ ಬಾಂಧವ್ಯವನ್ನು ಕಳೆದುಕೊಂಡಂತೆಯೇ ಸರಿ. ಸುಮ್ಮನೆ ಮದುವೆಯಾಗಿ ಹೊರನಡೆದರೆ ತೀರಿತು;

ಪಾಲಿಗೆ ಕೂತರೆ ಆ ಮನೆಯವರಿಗೂ ಮನೆಮಗಳಿಗೂ ವೈಷಮ್ಯ ಉಂಟಾಗಿ ಸಂಬಂಧಗಳು ದೂರಾಗುತ್ತವೆ. ಸಮಾಜದಲ್ಲಿ ಮನು ಆಧಾರಿತ ಶ್ರೇಣೀಕೃತ ವ್ಯವಸ್ಥೆ ಜಾರಿಗೆ ಬಂದ ನಂತರ ಮಹಿಳೆ ಬಾಲ್ಯದಲ್ಲಿ ತಂದೆಯ, ಯೌವ್ವನದಲ್ಲಿ ಗಂಡನ, ಮುಪ್ಪಿನಲ್ಲಿ ಮಕ್ಕಳ ಕೈಕೆಳಗೆ ಬದುಕಬೇಕೆಂಬ ತತ್ವದಡಿಯಲ್ಲಿ ಇಂದಿಗೂ ಕುಟುಂಬದಲ್ಲಿ ಆ ವ್ಯವಸ್ಥೆ ಜಾರಿಯಲ್ಲಿರುವುದು ದುರ್ದೈವ.

ತವರಿನ ಬಗೆಗೆ ಮಗಳಿಗೂ, ಮಗಳ ಬಗೆಗೆ ತಂದೆ-ತಾಯಿಗಳಿಗೂ, ಇತರ ರಕ್ತಸಂಬಂಧಿಗಳಿಗೂ ಎಷ್ಟೆಲ್ಲಾ ಭಾವನಾತ್ಮಕ ಸಂಬಂಧವಿದ್ದರೂ ಕೂಡ ಕೆಲವು ಸಾರಿ ತವರು ಆಕೆಯ ಪಾಲಿಗೆ ನಿಷ್ಪ್ರಯೋಜಕವಾಗಿ ಕಾಣಿಸುತ್ತದೆ. ಆಕೆ ತ್ರಿಶಂಕು ಪ್ರಜ್ಞೆಯನ್ನು ಅನುಭವಿಸಬೇಕಾಗಿ ಬರುತ್ತದೆ. ಇದಕ್ಕೆ ಉದಾಹರಣೆಯೆಂಬಂತೆ ಅವಳ ಮಾತಿನಲ್ಲೇ ಹೇಳುವುದಾದರೆ "ಹೆರದಿದ್ದರೆ ಗಂಡನ ಮನೆಯದು ಹಂಗಿನ ಬಾನ, ಹೆರದೆ ತವರಿಗೆ ಬಂದರೆ ಅಲ್ಲಿಯೂ ಹಂಗಿನ ಬಾನ"... ಇಲ್ಲಿ ಕೆಟ್ಟು ಬಂದ ಹೆಣ್ಣಿಗೆ ತವರು ಯಾವುದೇ ಸ್ಥಾನಮಾನ ನೀಡಲಾರದು ಎನ್ನುವ ವಿಚಾರದ ಸುಳಿವು ಇದೆ. ಹಿಂದಿನಿಂದಲೂ ಹೆಣ್ಣಿಗೆ ಗಂಡನ ಮನೆಯೇ ಶಾಶ್ವತ, ಕೆಟ್ಟು ಅಪ್ಪನ ಮನೆಗೆ ಬರಬಾರದು ಎಂಬುದನ್ನು ವ್ಯವಸ್ಥೆ ಅವಳ ಮೇಲೆ ಒತ್ತಾಯ ಪೂರ್ವಕವಾಗಿ ಹೇರಿದೆ. ಈ ಹೇರಿಕೆ ತವರಿನ ಮೇಲೂ ಪ್ರಭಾವ ಬೀರಿರುವುದರಿಂದ ಹೆಣ್ಣು ಕೆಟ್ಟು ಬಂದರೆ ತವರಿನವರು ಧಿಕ್ಕರಿಸುತ್ತಾರೆ.

ಹೆಣ್ಣು ಒಂದು ಸಂದರ್ಭದಲ್ಲಿ ತನಗೆ ಸಂತೃಪ್ತಿಯನ್ನು ತಂದಿತ್ತ ಗಂಡನ ಮನೆಯನ್ನು ಹೊಗಳಿರುವಂತೆಯೇ ತವರನ್ನು ತೆಗಳಿರುವ ಗೀತೆಗಳು ಇಲ್ಲದಿಲ್ಲ. (ಗಂಜೀಯ ಕುಡಿದರೂ ಗಂಡನ ಮನೆ ಲೇಸು... ಹಂಗೀನ ತವರು ಮನೆ ಸಾಕು) ನೆಮ್ಮದಿಯ ಬದುಕಿಗೆ ಗಂಡನ ಮನೆಯ ಧನಕಾದಿಗಳಿಗಿಂತಲೂ ಗಂಡ, ಅತ್ತೆ-ಮಾವಂದಿರ ಪ್ರೀತಿವಾತ್ಸಲ್ಯಗಳು ದೊರಕಿದಾಗ ತುಂಬುಹೃದಯದಿಂದಲೇ ಮೆಚ್ಚಿ, ಆ ಮಮತೆಯ ಮುದದಲ್ಲಿ ತವರನ್ನೇ ಮರೆಯುತ್ತಾಳೆ. ತವರನ್ನು ಕುರಿತ ಬೇಸರದ ಮತ್ತು ಅಸಡ್ಡೆಯ ಮಾತುಗಳನ್ನು ಆಡಿರುವ ಜನಪದ ಹೆಣ್ಣಿನ ಅಂತರಾಳದ ಅಭೀಪ್ಸೆಯ ಹಿಂದೆ ಗಂಡ ಕಡುಬಡವನೇ ಆಗಿದ್ದರೂ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎನ್ನುವ ಸಾಮಾಜಿಕ ಕಟ್ಟುಪಾಡಿಗೆ ಒಳಪಟ್ಟು ಗಂಡನನ್ನು ಆಶ್ರಯಿಸುವ, ಹಾಗೇನಾದರೂ ಗಂಡನನ್ನು ತೊರೆದು ತವರನ್ನು ಸೇರಿದರೆ ಸಾಮಾಜಿಕವಾಗಿ ತನಗೆ ಸಿಗುವ ಕೀಳು ಸ್ಥಾನಮಾನದ ಭಯದ ಹಿನ್ನೆಲೆಯಲ್ಲಿ ಮೇಲಿನ ಭಾವನೆಗಳು ಮೂಡಿವೆ. ಇಲ್ಲಿ ಜನಪದರು ಕೌಟುಂಬಿಕ ಬಾಂಧವ್ಯಗಳಿಗೆ ತಾವೇ ನಿರ್ಮಿಸಿಕೊಂಡ ಚೌಕಟ್ಟುಗಳು ವಿಭಿನ್ನವಾಗಿ ಕಂಡುಬಂದಿವೆ. ಹೀಗೆ ತವರು ಹೆಣ್ಣಿಗೆ ಭದ್ರತೆ ಮತ್ತು ಅಭದ್ರತೆಯ ಎರಡೂ ಮುಖಗಳನ್ನೂ ಬಿಂಬಿಸುತ್ತದೆ. ಕೆಲವೊಮ್ಮೆ ತವರು ವಿಶೇಷ ಸ್ಥಾನಮಾನ ಒದಗಿಸಿಕೊಟ್ಟರೆ, ಮತ್ತೊಮ್ಮೆ ತವರು ಸ್ಥಾನಮಾನಗಳನ್ನು ಕಸಿದುಕೊಳ್ಳುವ ಪರಿಸ್ಥಿತಿಗೆ ತಂದಿಡುತ್ತದೆ. ಇದರ ಬಗೆಗೆ ವಿದ್ವಾಂಸರ ವಲಯದಲ್ಲಿ ಹೆಚ್ಚು ಚರ್ಚೆ ನಡೆಯಬೇಕಾಗಿದೆ.

ಆಧುನಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ 'ತವರು'

ವೈಚಾರಿಕತೆ ಮತ್ತು ವೈಜ್ಞಾನಿಕತೆಯ ತಳಹದಿಯ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಆಧುನಿಕ ಸಮಾಜದಲ್ಲಿ ಸಂಸ್ಕೃತಿಯೂ ಬದಲಾಗುತ್ತಿರುವುದನ್ನು ಕಾಣಬಹುದು. ದೇಶೀಯ ಸಂಸ್ಕೃತಿ ವಿದೇಶೀಯ ಸಂಸ್ಕೃತಿಯೊಂದಿಗೆ ಸಮ್ಮಿಳಿತಗೊಂಡು ಕಲುಷಿತಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಶಾಸ್ತ್ರೀಯ, ಸಾಂಪ್ರದಾಯಿಕ ಹಿನ್ನೆಲೆಯ ಬಾಂಧವ್ಯಗಳು ಬರಿದಾಗುತ್ತಿವೆ ಎನ್ನಲಡ್ಡಿಯಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ಜನಪದರು ರೂಪಿಸಿದ ಬಾಂಧವ್ಯದ ಪರಿಕಲ್ಪನೆ ದಟ್ಟವಾಗಿ ಜನಮನದಲ್ಲಿ ಉಳಿದಿಲ್ಲ. ಮಾನವ ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢಗೊಳ್ಳುತ್ತಾ ಹೋದಂತೆ ಅವನೀಗ ನನ್ನವರು, ತನ್ನವರು ಎನ್ನುವುದನ್ನು ಮರೆತು ತಾನು, ತನಗಷ್ಟೇ ಎನ್ನುವ ಸಂಕೀರ್ಣ ಬದುಕಿಗೆ ಒಗ್ಗಿ ಹೋಗಿದ್ದಾನೆ. ಕೌಟುಂಬಿಕ ಬಾಂಧವ್ಯಗಳು ಹೊರಬಾಂಧವ್ಯಗಳಾಗಿ ಪಲ್ಲವಿಸಿವೆ. ರೂಢಿ ಸಂಪ್ರದಾಯಗಳು ಪ್ರತಿಷ್ಠೆಯ ಅಂಶಗಳಾಗಿವೆ. ವ್ಯಾವಹಾರಿಕವಾದ ಆಧುನಿಕ ಸಂಸ್ಕೃತಿಯಲ್ಲಿ ಮಾನವೀಯ ಸಂಬಂಧಗಳು ಮಸುಕಾಗಿ ಹೋಗುತ್ತಿರುವುದು ಮಾನವನ ಶ್ರೇಯಸ್ಸಿನ ದೃಷ್ಟಿಯಿಂದ ಉತ್ತಮ ಅಂಶವಲ್ಲ ಎನ್ನಬಹುದು.

ಆದರೂ ಇಷ್ಟೆಲ್ಲಾ ಆಧುನಿಕ ಸಂಸ್ಕೃತಿಯ ಅಬ್ಬರದಲ್ಲೂ ಜನಪದ ಬಾಂಧವ್ಯ, ತವರಿನ ಹಂಬಲ ಜನಮನದಿಂದ ದೂರವಾಗಿಲ್ಲ ಎಂದು ದೃಢೀಕರಿಸಲು ಹಲವು ಅಂಶಗಳು ನಮಗೆ ಉದಾಹರಣೆಯಾಗಿ ನಿಲ್ಲುತ್ತವೆ. ಅತ್ಯಂತ ಮುಂದುವರಿದ ನವಸಮಾಜದ ಕುಟುಂಬಗಳಲ್ಲಿಯೂ ಇಂದಿಗೂ ಮಗಳ ಮೊದಲ ಹೆರಿಗೆ ತವರು ಮನೆಯಲ್ಲಿಯೇ ಆಗಬೇಕು. ಹಾಗೆಯೇ ಆಷಾಢಮಾಸದಲ್ಲಿ ಮಗಳು ತವರು ಮನೆಯಲ್ಲಿಯೇ ಇರಬೇಕು ಎನ್ನುವ ನಂಬಿಕೆಗಳನ್ನು ಇಂದಿಗೂ ಪಾಲಿಸುತ್ತಿರುವುದನ್ನು ಗಮನಿಸಿದರೆ ಬಾಂಧವ್ಯ, ತವರು ಈ ಪರಿಕಲ್ಪನೆಗಳಿಗೆ ತನ್ನದೇ ಆದ ಮೌಲ್ಯವಿದೆ ಎನ್ನಬಹುದು. ಹಾಗೆಯೇ ಒಂದು ವರ್ಷ ತುಂಬುವುದರೊಳಗೆ ತವರಿಗೆ ಹೋಗಿ ಬರಬೇಕು ಅನ್ನುವುದು ಶಿವಮೊಗ್ಗ ಜಿಲ್ಲೆಯ ಭಾಗದಲ್ಲಿರುವಂತಹ ಹೆಣ್ಣುಮಕ್ಕಳ ನಂಬಿಕೆ. ಆ ಮೂಲಕ ತವರಿನ ಬಾಂಧವ್ಯವನ್ನು ಗಟ್ಟಿಗೊಳಿಸುವಂತಹದ್ದು, ಬೆಳೆಸುವಂತಹದ್ದು. 'ಹೊಯ್ತ ಬರ್ತಾ ಇದ್ರೆ ನಂಟು' ಎಂಬ ಮಾತೇ ಇದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

ಹೊಯ್ಸಳರ ರಾಜ್ಯಾಡಳಿತದಲ್ಲಿ ಪಟ್ಟಣಸ್ವಾಮಿಯ ಸ್ಥಾನ ಮತ್ತು ಕಾರ್ಯಗಳು

ಡಾ. ಕೆ. ಎಂ. ಮಹದೇವಸ್ವಾಮಿ

ಮಧ್ಯಕಾಲೀನ ಕರ್ನಾಟಕದಲ್ಲಿ ಹಲವು ಪಟ್ಟಣಗಳು ಇದ್ದವು. ಪ್ರಮುಖ ಪಟ್ಟಣಗಳಲ್ಲಿ ಸಾಮಾನ್ಯವಾಗಿ ಪಟ್ಟಣಸ್ವಾಮಿ ಇರುತ್ತಿದ್ದನು. ಇವನು ಶೆಟ್ಟಿ, ಪಟ್ಟಣಸ್ವಾಮಿ, ವಡ್ಡವ್ಯವಹಾರಿ, ಪೃಥ್ವಿಶೆಟ್ಟಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದನು. ಇವನು ಪಟ್ಟಣದ ಮುಖ್ಯ ಅಧಿಕಾರಿಯಾಗಿದ್ದನು. ಇವನು ಪಟ್ಟಣದ ಪಾಲಕನಾಗಿದ್ದು ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಪಟ್ಟಣಸ್ವಾಮಿಯು ಗೌರವಾನ್ವಿತನಾಗಿದ್ದು ಹಲವಾರು ವಿಶೇಷ ಹಕ್ಕುಗಳನ್ನು ಹೊಂದಿದ್ದನು. ಇವನು ಪಟ್ಟಣದಲ್ಲಿ ನಡೆಯುವ ಸಂತೆಗಳನ್ನು ಮತ್ತು ಇತರ ವಾಣಿಜ್ಯ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದನು.

ಪಟ್ಟಣಸ್ವಾಮಿ ಹುದ್ದೆಯ ನೇಮಕ

ಪಟ್ಟಣಸ್ವಾಮಿಯ ಹುದ್ದೆಯು ವಂಶಪಾರಂಪರ್ಯವಾಗಿತ್ತು ಹಾಗೂ ಐಚ್ಛಿಕವಾಗಿಯೂ ಇತ್ತು. ಸಾಮಾನ್ಯವಾದ ಪದ್ಧತಿಯೆಂದರೆ ಈ ಹುದ್ದೆಯನ್ನು ಸಮಾಜದ ಹಿರಿಯ ವರ್ತಕರು ಹಾಗೂ ನಾಯಕರು ಒಬ್ಬ ಯೋಗ್ಯ ವ್ಯಕ್ತಿಗೆ ನೀಡುತ್ತಿದ್ದರು. ಕೆಲವೊಮ್ಮೆ ಸರ್ಕಾರಿ ಅಧಿಕಾರಿಯು ಪಟ್ಟಣದ ಒಬ್ಬ ಪ್ರಮುಖ ವರ್ತಕನಿಗೆ ಈ ಪದವಿಯನ್ನು ನೀಡುತ್ತಿದ್ದನು. ಈ ಪದವಿಯನ್ನು ಊರಿನ ಜನತೆ ಅಥವಾ ಪ್ರತಿನಿಧಿಗಳು ಕೂಡ ನೀಡಬಹುದಾಗಿತ್ತು.

ಪಟ್ಟಣಸ್ವಾಮಿಯನ್ನು ನೇಮಕ ಮಾಡುವಾಗ ಜನಪ್ರಿಯ ಅಭಿಪ್ರಾಯವನ್ನು ಪರಿಗಣಿಸಲಾಗುತ್ತಿತ್ತು. ಆಗ ನಾಡಿನ ಸಮಸ್ತ ಗೌಡ ಪ್ರಜೆಗಳು, ನಾನಾ ದೇಶಗಳು ಮತ್ತು ೧೮ ಜಾತಿಯವರು ಭಾಗವಹಿಸುತ್ತಿದ್ದರೆಂದು ತಿಳಿದುಬರುತ್ತದೆ.

ಭತ್ಯೆ

ಪಟ್ಟಣಸ್ವಾಮಿಗಳು ನೀಡುತ್ತಿದ್ದ ಸೇವೆಗಾಗಿ ಪರಿಹಾರ ದೊರೆಯುತ್ತಿತ್ತು. ಅವರಿಗೆ ಮಾನ್ಯ ಎಂಬ ಭೂಮಿಯನ್ನು ನೀಡಲಾಗುತ್ತಿದ್ದು, ಇದು ಅವರ ಆದಾಯದ ಪ್ರಮುಖ ಮೂಲವಾಗಿತ್ತು ಹಾಗೂ ತೆರಿಗೆಗಳಿಂದ ಅವರನ್ನು ಮುಕ್ತಗೊಳಿಸಲಾಗಿತ್ತು. ಒಂದು ಸಣ್ಣ

ಪ್ರಮಾಣದ ತೆರಿಗೆಯೂ ಕೂಡ ಅವರ ಆದಾಯದ ಇನ್ನೊಂದು ಮೂಲವಾಗಿತ್ತು. ಅವರಿಗೆ ಹಲವು ಬಗೆಯ ದಾನದತ್ತಿಗಳನ್ನು ನೀಡಲಾಗುತ್ತಿತ್ತು. ಅಧಿಕಾರ ಹಾಗೂ ದಾನದತ್ತಿಗಳ ಜೊತೆಗೆ ಪಟ್ಟಣಸ್ವಾಮಿಯನ್ನು ಅನೇಕ ಬಿರುದುಬಾವಲಿಗಳಿಂದ ಗೌರವಿಸಲಾಗುತ್ತಿತ್ತು.

ಪಟ್ಟಣಸ್ವಾಮಿಯ ಕಾರ್ಯಗಳು

ನಾವು ಹೊಯ್ಸಳರ ಕಾಲದ ಕೆಲವು ಶಾಸನಗಳಿಂದ ಪಟ್ಟಣಸ್ವಾಮಿಯ ಕಾರ್ಯಗಳನ್ನು ತಿಳಿಯಬಹುದಾಗಿದೆ. ಪಟ್ಟಣದ ಸ್ಥಾಪನೆ ಮತ್ತು ಅದರ ಆಡಳಿತದಲ್ಲಿ ಅವನ ಪಾತ್ರ ಬಹಳ ಪ್ರಮುಖವಾದದ್ದು. ಅವನು ದೇವಸ್ಥಾನಗಳನ್ನು ನಿರ್ಮಿಸುವ, ಜಾತ್ರೆ ಮತ್ತು ಸಂತೆಗಳನ್ನು ನಡೆಸುವ ಕಾರ್ಯವನ್ನು ನೋಡಿಕೊಳ್ಳುತ್ತಿದ್ದನು. ಹೊಯ್ಸಳರ ಕಾಲದಲ್ಲಿ ಪಟ್ಟಣಸ್ವಾಮಿಯ ಸ್ಥಾನ, ಕಾರ್ಯ ಮತ್ತು ಇತರ ಪಾತ್ರಗಳನ್ನು ಕುರಿತು ಅಧ್ಯಯನಮಾಡಲು ಇಲ್ಲಿ ಪ್ರಯತ್ನಪಡಲಾಗಿದೆ.

೧ ಸಾಮಾನ್ಯವಾಗಿ ಒಂದು ಪಟ್ಟಣಕ್ಕೆ ಒಬ್ಬ ಪಟ್ಟಣಸ್ವಾಮಿ ಇರುತ್ತಿದ್ದನು. ಆದರೆ ಪಟ್ಟಣ ದೊಡ್ಡದಾಗಿದ್ದರೆ ಒಬ್ಬರಿಗಿಂತ ಹೆಚ್ಚು ಪಟ್ಟಣಸ್ವಾಮಿಗಳು ಇರುತ್ತಿದ್ದರು. ಅಂದರೆ ಪಟ್ಟಣಸ್ವಾಮಿಗಳ ಸಂಖ್ಯೆಯು ಆ ಪಟ್ಟಣದ ವಿಸ್ತಾರವನ್ನು ಅವಲಂಬಿಸಿತ್ತು. ಕ್ರಿ. ಶ. ೧೧೪೨ರ ಶಾಸನದ ಪ್ರಕಾರ ಹಳೇಬೀಡಿನಲ್ಲಿ ಇಬ್ಬರು ಪಟ್ಟಣಸ್ವಾಮಿಗಳಿದ್ದರು.

೨ ಪಟ್ಟಣಕ್ಕೆ ಹಿರಿಯ ವರ್ತಕ ಮತ್ತು ಶ್ರೀಮಂತನಾದ ಪಟ್ಟಣಸ್ವಾಮಿಗೆ ಆಡಳಿತಕ್ಕೋಸ್ಕರ ಕಛೇರಿ ವ್ಯವಸ್ಥೆಯನ್ನು ಮಾಡಿಕೊಡಲಾಗಿತ್ತು. ಮಲಪರಾಜನು ಇಂತಹ ಕೆಲವೇ ಜನ ಶೆಟ್ಟಿಗಳಿಗೆ ಒಂದು ಕಛೇರಿಯನ್ನು ಕೂಡಮಾಡಿದನು ಎಂದು ಕ್ರಿ. ಶ. ೧೨೦೫ರ ಶಾಸನದಲ್ಲಿ ತಿಳಿಸಲಾಗಿದೆ.[೧]

೩ ಪಟ್ಟಣಸ್ವಾಮಿಯು ಸರ್ಕಾರ, ಜನಸಾಮಾನ್ಯರ ಮತ್ತು ವರ್ತಕರಿಂದ ವಿಶ್ವಾಸವನ್ನು ಗಳಿಸಿಕೊಂಡಿದ್ದನು. ಈ ಕೆಳಕಂಡ ಉದಾಹರಣೆಯಿಂದ ಸರ್ಕಾರದೊಂದಿಗೆ ಇದ್ದ ಅವನ ಸಂಬಂಧವು ತಿಳಿದುಬರುತ್ತದೆ. ಕ್ರಿ. ಶ. ೧೧೨೫ರ ಮಾಹಿತಿಯ ಪ್ರಕಾರ (ಹೊಸ ಹೊಳಲು ಗ್ರಾಮ ಕೆ. ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ) ಪಟ್ಟಣಸ್ವಾಮಿ ಹೊಯ್ಸಳ ಶೆಟ್ಟಿಯನ್ನು ನೋಳಭಿಸೆಟ್ಟಿಯೆಂತಲೂ ಸಹ ಕರೆಯಲಾಗುತ್ತಿತ್ತು. ಇವನು ರಾಜ ವಿಷ್ಣುವರ್ಧನನ ಅಧೀನದಲ್ಲಿ ವಾಸಿಸುತ್ತಿದ್ದನು.[೨]

೪ ಕ್ರಿ. ಶ. ೧೧೭೮ರ ಮತ್ತೊಂದು ದಾಖಲೆಯ ಪ್ರಕಾರ ಪಟ್ಟಣ, ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಪಟ್ಟಣಸ್ವಾಮಿ ಸೋವಿಶೆಟ್ಟಿಯು ರಾಜ ಸಾವಂತ ನರಸಿಂಗರಾಯ ನಾಯಕನ ಕೈಕೆಳಗೆ ಕೆಲಸಮಾಡುತ್ತಿದ್ದನೆಂದು ವಿವರಿಸಲಾಗಿದೆ.[೩]

೫ ಕ್ರಿ. ಶ. ೧೧೯೫ರ ಶ್ರವಣಬೆಳಗೊಳದ ಇನ್ನೊಂದು ದಾಖಲೆಯ ಪ್ರಕಾರ ನಾಗದೇವನು ರಾಜ ಎರಡನೇ ವೀರಬಲ್ಲಾಳನ ಆಳ್ವಿಕೆಯಲ್ಲಿ[೪] ಪಟ್ಟಣಸ್ವಾಮಿಯಾಗಿದ್ದನು. ಕ್ರಿ. ಶ. ೧೨೧೮ರ ಕುಂಡವ ಗ್ರಾಮ, ದಾವಣಗೆರೆ ತಾಲ್ಲೂಕು ಶಾಸನದ ಪ್ರಕಾರ ಪ್ರತೀ ಬುಧವಾರ ಸಂತೆಗಳನ್ನು ಕಟ್ಟಲು ಪಟ್ಟಣಸ್ವಾಮಿ ಸಂಗಶೆಟ್ಟಿಯು ರಾಣಿ ಅಭಿನವ ಕೇತಲ ದೇವಿಯಿಂದ ನಿರ್ದೇಶನವನ್ನು ಪಡೆದುಕೊಂಡಿದ್ದನು.[೫]

೬ ಪಟ್ಟಣಸ್ವಾಮಿಯು ರಾಣಿಯ ಆದೇಶವನ್ನು ಮನ್ನಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಿದ್ದನು. ಪಟ್ಟಣಸ್ವಾಮಿಯು ಅನೇಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಸಂತೆಗಳನ್ನು ಕಟ್ಟುವುದು ಮತ್ತು ಅವುಗಳನ್ನು ನಿಯೋಜಿಸುವುದು ಮತ್ತು ಸಂಯೋಜಿಸುವುದು ಹಾಗೂ ಪಟ್ಟಣಕ್ಕೆ ಹಿರಿಯನಾಗಿ ತೀರ್ಮಾನಗಳನ್ನು ಕೈಗೊಳ್ಳುವುದು ಇವೇ ಅವನ ಪ್ರಧಾನ ಕರ್ತವ್ಯಗಳಾಗಿದ್ದವು. ಅವನು ಪಟ್ಟಣದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳ ನಾಯಕತ್ವವಹಿಸುತ್ತಿದ್ದನು. ಕೆಲವು ವೇಳೆ ಪಟ್ಟಣಸ್ವಾಮಿಯು ಪಟ್ಟಣದ ಸ್ಥಾಪಕನೂ ಆಗಿದ್ದನು. ಉದಾಹರಣೆಗೆ ಕ್ರಿ. ಶ. ೧೩೨೮ರ ಶಾಸನದಿಂದ (ಮದ್ದೂರು ಗ್ರಾಮ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ) ಪಟ್ಟಣವನ್ನು ಕಟ್ಟುವುದ ಕ್ಕೋಸ್ಕರ ಉಪ್ಪೇಂದ್ರಪುರ ಮಹಾಜನರಿಂದ ಆರುಬಾಡಿಗೆರಹಿತ ಮನೆಗಳನ್ನು ಉಚಿತವಾಗಿ ಪಟ್ಟಣಸ್ವಾಮಿಗೆ ಕೊಡಮಾಡಲಾಗಿತ್ತು.[೬]

೭ ಪಟ್ಟಣಸ್ವಾಮಿಯು ಬಹಳ ಆಸಕ್ತಿವಹಿಸಿ ಸಂತೆಗಳನ್ನು ಕಟ್ಟುತ್ತಿದ್ದನು. ಕ್ರಿ. ಶ. ೧೨೭೮ರ ನಂಜನಗೂಡು ಹೋಬಳಿ ಉಪ್ಪಿನಹಳ್ಳಿ ದಾಖಲೆಯಿಂದ ಸುಂಕಶೆಟ್ಟಿಯೆಂಬ ಪಟ್ಟಣಸ್ವಾಮಿಯು ಮನಾಲಿ ಎಂಬಲ್ಲಿ ಸಂತೆಗಳನ್ನು ಕಟ್ಟುತ್ತಿದ್ದನು ಎಂದು ತಿಳಿದು ಬರುತ್ತದೆ. ಪಟ್ಟಣಸ್ವಾಮಿಯು ಹಿರಿಯನಾಡಿನ ಮಹಾಪ್ರಭು ಮತ್ತು ದಂಡನಾಯಕ ಮಾಚಣ್ಣರ ಜೊತೆಗೂಡಿ ಸಂತೆಗಳನ್ನು ಕಟ್ಟುತ್ತಿದ್ದನು.[೭]

೮ ಕ್ರಿ. ಶ. ೧೩೩೨ರ ಬೆಂಗಳೂರು ತಾಲ್ಲೂಕಿನ ಇನ್ನೊಂದು ಶಾಸನದ ದಾಖಲೆಯ ಪ್ರಕಾರ ಚಿಕ್ಕಹುಂಡಿ[೮] ಎಂಬಲ್ಲಿ ಮುಕ್ತಿ ಶೆಟ್ಟಿ ಎಂಬ ಪಟ್ಟಣಸ್ವಾಮಿಯಿಂದ ಸಂತೆ ನಿಯೋಜಿಸಲ್ಪಡುತ್ತಿತ್ತು ಎಂದು ತಿಳಿದುಬರುತ್ತದೆ.

೯ ೧೨ನೇ ಶತಮಾನದ ಪ್ರಕಾರ ಶ್ರವಣಬೆಳಗೊಳದಲ್ಲಿ ಮೊಸಳಯೆಸಂತೆ ಎಂಬಲ್ಲಿ ನೇಮಿಶೆಟ್ಟಿ ಎಂಬುವವನು ಪಟ್ಟಣಸ್ವಾಮಿಯಾಗಿದ್ದನು. ಯಾವಸ್ಥಳದಲ್ಲಿ ಸಂತೆ ಜರುಗುತ್ತದೋ ಅಲ್ಲಿಗೆ ಪಟ್ಟಣಸ್ವಾಮಿಯನ್ನು ಕರೆಸಿಕೊಳ್ಳಲಾಗುತ್ತಿತ್ತು.[೯]

೧೦ ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಹಾರದಲ್ಲಿ ವಿಧಿಸಿದ ಕೆಲವು ತೆರಿಗೆಗಳನ್ನು ವರ್ತಕರಿಂದ ಸಂಗ್ರಹಿಸಿ ಅವುಗಳನ್ನು ಸಂತೆಗಳನ್ನು ಕಟ್ಟಲು ಉಪಯೋಗಿಸಲಾಗುತ್ತಿತ್ತು. ಪಟ್ಟಣದಲ್ಲಿ ಪಟ್ಟಣಸ್ವಾಮಿಯು ಸಂತೆಗಳ ಕಟ್ಟುವ ಕಾರ್ಯ ನಿರ್ವಹಿಸುತ್ತಿದ್ದರು ಎಂದು

ಈ ಮೇಲಿನ ದಾಖಲೆಗಳಿಂದ ತಿಳಿದುಬರುತ್ತದೆ. ಹೀಗೆ ಅಂದಿನ ದಿನಗಳಲ್ಲಿ ನೀರಿನ ಟ್ಯಾಂಕು ಮತ್ತು ದೇವಸ್ಥಾನಗಳು ನಿರ್ಮಾಣಗೊಂಡಿರುವುದಕ್ಕೆ ಅಂದು ಪಟ್ಟಣಸ್ವಾಮಿಯು ಮಾಡಿದ ಜನಪರ ಕೆಲಸ ಕಾರ್ಯಗಳಿಂದ ಎಂದು ಹೇಳಬಹುದಾಗಿದೆ. ಪಟ್ಟಣದಲ್ಲಿ ಕಟ್ಟುವ ಸಂತೆಗಳು ವ್ಯಾಪಾರ ಕೇಂದ್ರಗಳು ಬೆಳೆಯಲು ತುಂಬಾಮಹತ್ವವಾದ ಕೊಡುಗೆಯನ್ನು ನೀಡಿದೆ ಹಾಗೂ ಆಂತರಿಕ ವ್ಯವಹಾರಕ್ಕೆ ಅದರ ಅಭಿವೃದ್ಧಿಗೆ ತುಂಬಾ ಸಹಾಯಕಾರಿಯಾಗಿತ್ತು. ಪಟ್ಟಣಸ್ವಾಮಿಗೆ ಸಂತೆಗಳನ್ನು ಕಟ್ಟಲು ತಗಲುವ ವೆಚ್ಚಗಳಿಗೆ ರೈತರು, ವರ್ತಕರು ಮತ್ತು ಇತರ ವ್ಯಕ್ತಿಗಳು ಒಟ್ಟಾಗಿ ಸೇರಿ ಭೂಮಿ ಮತ್ತು ತೆರಿಗೆಗಳನ್ನು ಕೊಡುತ್ತಿದ್ದರು.[೧೦]

೧೧ ಭೂ ಅನುದಾನ ಅಥವಾ ಮಾನ್ಯ ಪಟ್ಟಣಸ್ವಾಮಿಗೆ ಆದಾಯದ ಪ್ರಮುಖ ಮೂಲವಾಗಿತ್ತು. ಸಂತೆಗಳನ್ನು ನಡೆಸಲು ಸಣ್ಣ-ಸಣ್ಣ ತೆರಿಗೆಗಳಿಂದ ಸಂಗ್ರಹಿಸಿದ ಆದಾಯವನ್ನು ಬಳಸಿಕೊಳ್ಳಲಾಗುತ್ತಿತ್ತು. ಇದು ಪಟ್ಟಣಸ್ವಾಮಿಗೆ ಮತ್ತೊಂದು ರೀತಿಯ ಆದಾಯ ವಾಗಿರುತ್ತದೆ. ಪಟ್ಟಣಸ್ವಾಮಿಯು ಅನೇಕ ಕೊಡುಗೆ ಮತ್ತು ಅನುದಾನಗಳನ್ನು ನೀಡುತ್ತಿದ್ದನು.

ಈ ಕೆಳಕಂಡ ದಾಖಲೆಗಳಿಂದ ಹೊಯ್ಸಳರ ಕಾಲದಲ್ಲಿ ಅನುದಾನ ಹೇಗಿತ್ತು ಎಂದು ನಾವು ಊಹಿಸಿಕೊಳ್ಳಬಹುದಾಗಿತ್ತು. ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಕ್ರಿ. ಶ. ೧೩೧೮ರ ಶಾಸನದಿಂದ ತಿಳಿದುಬರುವುದೇನೆಂದರೆ ಮಾಚಯ್ಯ ನಾಯಕ ಮತ್ತು ಹೊನ್ನಳ್ಳಿಗೆ ನಾಡು ರೈತರು ಸೇರಿ ಕೂಡಿಗೆ ಎಂಬ ಭೂಪ್ರದೇಶಗಳನ್ನು ಚೊಕ್ಕಶೆಟ್ಟಿ ಎಂಬ ಪಟ್ಟಣಸ್ವಾಮಿಗೆ ಅನುದಾನವಾಗಿ ನೀಡಲಾಗುತ್ತಿತ್ತು. ಚೊಕ್ಕ ನಾಡುವಿನ ಗಲಿಹಾಲು ಎಂಬಲ್ಲಿ ಸಂತೆಗಳನ್ನು ಸಂಯೋಜಿಸಲಾಗುತ್ತಿತ್ತು.[೧೧]

೧೨ ಕ್ರಿ. ಶ. ೧೩೩೨ರ ದಾಖಲೆಯ ಪ್ರಕಾರ ಬೆಂಗಳೂರು ತಾಲ್ಲೂಕಿನ ಒಬ್ಬ ಮುಕ್ತಿಶೆಟ್ಟಿ ಎಂಬ ಪಟ್ಟಣಸ್ವಾಮಿ ಇದ್ದನು. ಇವನಿಗೆ ಸಂತೆಗಳನ್ನು ಚಿಕ್ಕಹುಂಡಿ ಎಂಬಲ್ಲಿ ಕಟ್ಟಲು ಕೋಡಗಿ ಎಂಬಲ್ಲಿ ಭೂಪ್ರದೇಶ, ಸುಂಕದ ಕಟ್ಟೆಗಳು ಮತ್ತು ಇತರ ತೆರಿಗೆಗಳನ್ನು ನೀಡಲಾಗಿದ್ದಿತು.[೧೨]

೧೩ ತಲಕಾಡಿನ ನಾಗರತ್ತರ್ ಎಂಬುವವನಿಂದ ಕನ್ನಡ್ವೆ ಎಂಬ ಪಟ್ಟಣಸ್ವಾಮಿಗೆ ಖುಷ್ಕಿ ಭೂಮಿಯನ್ನು ಕೊಡವಾಡಲಾಗಿತ್ತು ಎಂದು ಕ್ರಿ. ಶ. ಹದಿಮೂರು ಮತ್ತು ಹದಿನಾಲ್ಕನೇ ಶತಮಾನದ ತಿ. ನರಸೀಪುರ ತಾಲ್ಲೂಕಿನ ಬೆಟ್ಟಹಳ್ಳಿ ಎಂಬಲ್ಲಿ ಮೂರನೇ ಬಲ್ಲಾಳನ ಕಾಲದಲ್ಲಿ ಉಲ್ಲೇಖಗೊಂಡಿತು ಎಂದು ಮತ್ತೊಂದು ಅಂಶದಿಂದ ತಿಳಿದುಬರುತ್ತದೆ.[೧೩]

೧೪ ಮುಂದೆ ಕ್ರಿ. ಶ ೧೨೫೩ರ (ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ) ಕುಂಬಾರ ಮತ್ತು ದೇವಗೆರೆಗಳಲ್ಲಿ ಭೂಮಿಯನ್ನು ದೇವಮಾನ್ಯವಾಗಿ ಗುಂಡಗೆರೆಯ ಪಟ್ಟಣಸ್ವಾಮಿಗಳಾದ

ತಿವಾದಿಶೆಟ್ಟಿ, ಬುಕಿಶೆಟ್ಟಿ ಮತ್ತು ಕೆಟಿಶೆಟ್ಟಿ ಇವರುಗಳು ಪಡೆದುಕೊಂಡಿದ್ದರು. ಈ ಭೂ ಅನುದಾನವನ್ನು ಕಳಲೇಶ್ವರದೇವಾಲಯಕ್ಕೆ ಬಳಸಿಕೊಳ್ಳಲಾಗುತ್ತಿತ್ತು. ದೇವಾಲಯದ ಪರವಾಗಿ ಪಟ್ಟಣಸ್ವಾಮಿಯು ಅನುದಾನವನ್ನು ಸ್ವೀಕರಿಸುತ್ತಿದ್ದನು.[೧೪]

೧೫ ಅಲ್ಲದೆ ಪಟ್ಟಣಸ್ವಾಮಿಗಳು ಭೂದೇಣಿಗೆಗಳು, ಮನೆಗಳನ್ನು, ನಿವೇಶನಗಳನ್ನು ಕೆಲವು ವೇಳೆ ಎತ್ತಿನಗಾಡಿಗಳನ್ನು ಕೊಡುಗೆ ರೂಪದಲ್ಲಿ ಪಡೆದುಕೊಂಡಿದ್ದನು. ಉದಾಹರಣೆಗೆ ಕ್ರಿ. ಶ. ೧೩೨೮ರ ಮೈಸೂರು ಜಿಲ್ಲೆ ಯಳಂದೂರು ತಾಲ್ಲೂಕು ಶಾಸನದ ಪ್ರಕಾರ ದೊಡ್ಡ ಅಳತೆಗಳನ್ನೊಳಗೊಂಡ ಆರು ಮನೆಗಳನ್ನು (೧೨ ಕ್ಯೂಬಿಟ್ಸ್ x ೩೦ ಕ್ಯೂಬಿಟ್ಸ್) ಮಾನ್ಯದ ರೂಪದಲ್ಲಿ ಪಟ್ಟಣಸ್ವಾಮಿಗೆ ಕೊಡಲಾಗಿತ್ತು.

೧೬ ಕ್ರಿ. ಶ. ೧೩೩೧ರ ಇನ್ನೊಂದು ಶಾಸನದ ದಾಖಲೆಗಳ ಪ್ರಕಾರ ಗುಬ್ಬಿ ತಾಲ್ಲೂಕಿನಲ್ಲಿ ವೀರಬಲ್ಲಾಳ ತ್ರೈಲೋಕ್ಯಪಟ್ಟಣಸ್ವಾಮಿ ಕಾಳಿಶೆಟ್ಟಿಯಮಗ ಸಿಂಗಶೆಟ್ಟಿಯು ಸಂಪಿಗೆ ಎಂಬ ನಿವೇಶನವನ್ನು ಕೊಡುಗೆರೂಪದಲ್ಲಿ ಕೊಟ್ಟಿದ್ದನು. ಈ ನಿವೇಶನಕ್ಕೆ ಯಾವುದೇ ತೆರಿಗೆ ಇರಲಿಲ್ಲ. ತೆರಿಗೆ ರಿಯಾಯಿತಿ ಇದ್ದಿತು.[೧೫]

೧೭ ಎತ್ತಿನಗಾಡಿಗಳ ಕೊಡುಗೆಗೆ ಸಂಬಂಧಿಸಿದಂತೆ ಹೇಳುವುದಾದರೆ ಶಿವಮೊಗ್ಗ ತಾಲ್ಲೂಕಿನ ೧೨೦೩ರ ಶಾಸನದ ದಾಖಲೆಗಳ ಪ್ರಕಾರ ಪಟ್ಟಣಸ್ವಾಮಿ ಗಯಿಶೆಟ್ಟಿಯು ಒಟ್ಟು ೧೦೦ ಎತ್ತಿನ ಗಾಡಿಗಳನ್ನು ಹೊಂದಿದ್ದನು. ೨೦ ಎತ್ತಿನಗಾಡಿಗಳನ್ನು ಚಿಕ್ಕೇಶ್ವರ ದೇವಾಲಯಕ್ಕೆ ಕೊಟ್ಟಿದ್ದನು.

೧೮ ಸಾಮಾನ್ಯವಾಗಿ ಪಟ್ಟಣಸ್ವಾಮಿಯು ಆ ಪಟ್ಟಣಕ್ಕೆ ಶ್ರೀಮಂತವರ್ತಕನಾಗಿದ್ದನೆಂದು ಇದರಿಂದ ತಿಳಿದುಬರುತ್ತದೆ ಹಾಗೂ ಇದಕ್ಕಾಗಿ ಅವನು ಯಾವುದೇ ಅಪೇಕ್ಷೆಯನ್ನು ಬಯಸುತ್ತಿರಲಿಲ್ಲ. ಇದಕ್ಕಾಗಿ ಅವನನ್ನು ಗೌರವಿಸಲಾಗುತ್ತಿತ್ತು. ರಾಜ್ಯದ ಇತರ ಅಧಿಕಾರಿಗಳ ವರ್ಗದಲ್ಲಿ ಪಟ್ಟಣಸ್ವಾಮಿಯು ಸೇವಾಕಾರ್ಯಗಳಿಗಾಗಿ ಬಹಳ ಹೆಸರು ವಾಸಿಯಾಗಿದ್ದನು. ದೇವಾಲಯಗಳ ನಿರ್ಮಾಣದಲ್ಲಿ ಉದಾರದೇಣಿಗೆಗಳಲ್ಲಿ ಅವನು ಪ್ರಾಮುಖ್ಯತೆ ಪಡೆದುಕೊಂಡಿದ್ದನೆಂದು ಈ ಕೆಳಕಂಡ ನಿದರ್ಶನಗಳಿಂದ ನಾವು ತಿಳಿದುಕೊಳ್ಳಬಹುದಾಗಿದೆ.

೧೯ ಶ್ರವಣಬೆಳಗೊಳದಲ್ಲಿ ಕ್ರಿ. ಶ. ೧೧೯೫ರ ಶಾಸನದ ಪ್ರಕಾರ ರಾಜ ಎರಡನೆಯ ಬಲ್ಲಾಳನ ಪಟ್ಟಣಸ್ವಾಮಿ ನಾಗದೇವನು ಜೈನಗುರು ನಯಕೀರ್ತಿಯ ಸ್ಮರಣಾರ್ಥವಾಗಿ ನಾಗರಜಿನಾಲಯುವನ್ನು ಕಟ್ಟಿಸಿದ್ದನು ಹಾಗೂ ಶಿಲಾನ್ಯಾಸಮಾಡಿಸಿದ್ದನು ಮತ್ತು ಶ್ರವಣಬೆಳಗೊಳದಲ್ಲಿ ಕಾಮತಪಾರ್ಶ್ವಬಸ್ತಿಯ ಮುಂಭಾಗದಲ್ಲಿ ನೃತ್ಯಸಭೆಯನ್ನು ಸಹ ಸ್ಥಾಪಿಸಿದ್ದನು.[೧೬]

೨೦ ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಹಟ್ಟನ ಗ್ರಾಮದಲ್ಲಿ ಕ್ರಿ. ಶ. ೧೧೭೮ರ ಇನ್ನೊಂದು ಶಾಸನದ ಪ್ರಕಾರ ರಾಜಸಾವಂತನರಸಿಂಗನಾಯಕನ ಅಧೀನದಲ್ಲಿದ್ದ

ಸೋವಿಶೆಟ್ಟಿ ಎಂಬ ಪಟ್ಟಣಸ್ವಾಮಿಯು ಮೂರು ನೀರಿನ ತೊಂಬೆಗಳನ್ನು ಹಾಗೂ ಪಾರ್ಶ್ವಜಿನಾಲಯವನ್ನು ನಿರ್ಮಿಸಿದ್ದನು.

೨೧ ಕಡೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಅಭಿನವ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿದ್ದನು.

೨೨ ಗುಬ್ಬಿತಾಲ್ಲೂಕಿನಲ್ಲಿ ಕ್ರಿ. ಶ. ೧೨೩೮ರ ಮತ್ತೊಂದು ಶಾಸನದ ಪ್ರಕಾರ ನಿಟ್ಟೂರಿನ ಪಟ್ಟಣಸ್ವಾಮಿಯು ಸಂಪಿಗೆಯ ಮಲ್ಲಿಕಾರ್ಜುನ ದೇವರಿಗಾಗಿ ಹಿರಿಯ ಕೆರೆಯಲ್ಲಿ ಬಹುದೊಡ್ಡ ಟ್ಯಾಂಕನ್ನು ಕಟ್ಟಿಸಿದ್ದನು.[೧೭]

೨೩ ತಿಪಟೂರು ತಾಲ್ಲೂಕಿನಲ್ಲಿ ಕ್ರಿ. ಶ. ೧೨೧೪ರ ಇನ್ನೊಂದು ಶಾಸನದಲ್ಲಿ ಪಟ್ಟಣಸ್ವಾಮಿ ಮಹದೇವ ಶೆಟ್ಟಿಯು ಚನ್ನಕೇಶವದೇವರಿಗಾಗಿ ಸಂತೆಗಳಿಂದ ಸಂಗ್ರಹಿಸಿದ ಸುಂಕಗಳನ್ನು ದೇಣಿಗೆಯ ರೂಪದಲ್ಲಿ ನೀಡಿದ್ದನು.

೨೪ ಮತ್ತೊಂದು ಕ್ರಿ. ಶ. ೧೧೯೮ರ ಶಿವಮೊಗ್ಗ ಜಿಲ್ಲೆಯ ಸೊರಬತಾಲ್ಲೂಕಿನ ಉದ್ರಿ ಎಂಬಲ್ಲಿ ದಾಖಲೆಯ ಪ್ರಕಾರ ಶಾಂತಿನಾಥ ದೇವಾಲಯಕ್ಕೆ ದೊಡ್ಡ ಸೌಟು ಮತ್ತು ದೀಪಬೆಳಗುವುದಕ್ಕಾಗಿ ಎಣ್ಣೆಯನ್ನು ದೇಣಿಗೆಯಾಗಿ ನೀಡಿದ್ದನು.

೨೫ ಮುಂದೆ ಅರಸೀಕೆರೆ ತಾಲ್ಲೂಕಿನಲ್ಲಿ ಕ್ರಿ. ಶ. ೧೨೨೦ರ ಶಾಸನದ ಪ್ರಕಾರ ಕಳ್ಳಶೆಟ್ಟಿ ಎಂಬ ಪಟ್ಟಣಸ್ವಾಮಿಯು ಶಾಂತಿನಾಥದೇವರ ಪೂಜೆಗಾಗಿ ಒಂದು ಮಳಿಗೆ ಹಾಗೂ ಎರಡು ಗದ್ಯಾಣಗಳನ್ನು ಒದಗಿಸಿದ್ದನು.[೧೮]

೨೬ ಮತ್ತೊಂದು ದಾಖಲೆ ಕ್ರಿ. ಶ. ೧೨೬೩ರ ಅದೇ ತಾಲ್ಲೂಕಿನಲ್ಲಿ ಬೇಲೂರು ತಾಲ್ಲೂಕಿನ ಹೊರಗಡೆಯಿಂದ ಬರುವ ಬಡಬ್ರಾಹ್ಮಣರ ಭೋಜನಕ್ಕಾಗಿ ನಗದನ್ನು ಶಂಕರನೆಂಬ ಪಟ್ಟಣಸ್ವಾಮಿಯು ದೇಣಿಗೆಯ ರೂಪದಲ್ಲಿ ನೀಡಿದ್ದನು.

ಈ ಮೇಲೆ ತಿಳಿಸಿದ ಹಲವು ಬಗೆಯ ಸೇವಾಕಾರ್ಯಗಳನ್ನು ಮಾಡಿದ್ದೇ ಅಲ್ಲದೆ ಪಟ್ಟಣದ ಪಟ್ಟಣಸ್ವಾಮಿಗಳು ಗ್ರಾಮಕ್ಕೆ ಹೊರಗಡೆಯಿಂದ ಬರುವ ಶತ್ರುಗಳನ್ನು ತಡೆಯುವುದರಲ್ಲೂ ಸಹ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಉದಾಹರಣೆಗೆ, ಮಂಡ್ಯಜಿಲ್ಲೆಯ ಕೆ. ಆರ್. ಪೇಟೆ ತಾಲ್ಲೂಕಿನ ಅಗ್ರಹಾರ ಬಾಚಹಳ್ಳಿ ಆಕ್ರಮಣಕಾರ್ಯದಲ್ಲಿ ಮಲೇಯಾ ಎಂಬ ಒಬ್ಬ ಪಟ್ಟಣಸ್ವಾಮಿಯು ಕಣ್ಣಾಯ ಎಂಬ ಶತ್ರುವಿನ ವಿರುದ್ಧ ಹೋರಾಡಿ ಮಡಿದಿದ್ದನು. ಮುಂದೆ ಪಟ್ಟಣಸ್ವಾಮಿಯು ದೇಣಿಗೆಗಳಿಂದ ಒಪ್ಪಿಗೆಗಳನ್ನು ನೀಡುತ್ತಿದ್ದನು. ಉದಾಹರಣೆಗೆ, ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಮೂಗೂರು ಎಂಬಲ್ಲಿ ಕ್ರಿ. ಶ. ೧೨೬೬ರ ದಾಖಲೆಯ ಪ್ರಕಾರ ಪಟ್ಟಣಸ್ವಾಮಿ ದಾಸಶೆಟ್ಟಿ ಎಂಬುವವನು. ದೇಣಿಗೆಗಳನ್ನು ಮಾನ್ಯಮಾಡುತ್ತಿದ್ದನು.

ಈ ರೀತಿಯಾಗಿ ಹೊಯ್ಸಳರ ಕಾಲದಲ್ಲಿ ಪಟ್ಟಣಸ್ವಾಮಿಯ ಪಟ್ಟಣದ ಆಡಳಿತ ಮತ್ತು ಆರ್ಥಿಕತೆಯಲ್ಲಿ ಮುಖ್ಯ ಪಾತ್ರವಹಿಸಿದ್ದನೆಂದು ಮೇಲಿನ ವಿಶ್ಲೇಷಣೆಯ ಅಂಶಗಳಿಂದ ತಿಳಿದುಬರುತ್ತದೆ. ಪಟ್ಟಣದ ಸ್ಥಳೀಯ ವರ್ತಕ ಸಂಘಕ್ಕೆ ನಾಯಕನಾಗಿದ್ದನು. ಅವನು ಪಟ್ಟಣದಲ್ಲಿ ಸಂತೆಗಳನ್ನು ಸಂಯೋಜಿಸಿ ತ್ವರಿತಗತಿಯಲ್ಲಿ ವಾಣಿಜ್ಯವ್ಯಾಪಾರಗಳು ಅಭಿವೃದ್ಧಿಹೊಂದಲು ಪ್ರಮುಖ ಪಾತ್ರ ವಹಿಸಿದ್ದನು. ಸಾರ್ವಜನಿಕರ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ಪಟ್ಟಣಸ್ವಾಮಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದನು. ದತ್ತಿ ಸಂಸ್ಥೆಗಳ ಸ್ಥಾಪನಕಾರ್ಯ, ವ್ಯಾಪಾರವಹಿವಾಟು, ರಸ್ತೆ ನಿರ್ಮಾಣ ಹಾಗೂ ಇತರ ಸಾರ್ವಜನಿಕರಿಗೆ ಅತ್ಯಗತ್ಯ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದನು.

ಅಡಿ ಟಿಪ್ಪಣಿಗಳು

೧ ದೀಕ್ಷಿತ್ ಜಿ. ಎನ್. ಮಧ್ಯಕಾಲೀನ ಕರ್ನಾಟಕದಲ್ಲಿ ಸ್ಥಳೀಯ ಸರ್ಕಾರ ಪು. ೩೦
೨ ಓಲ್ಡ್ ಎ. ಕ. ಸಂ ಹೊಸ ಹೊಳಲು ಕೆ. ಆರ್. ಪೇಟೆ ತಾ. ನಂ. ೩ ಪು ೧೧೮
೩ ಎ. ಕ. ಸಂ. VII ನಾಗಮಂಗಲ ತಾ. ಪು. ೧೧೮
೪ ಎ. ಕ. ಸಂ. ೨೧೧ SBINS ನಂ. ೪೫೭ ಪು. ೨೭೮
೫ ಎ. ಕ. ಸಂ XI ದಾವಣಗೆರೆ ತಾ. ಪು. ೧೭೩
೬ ಎ. ಕ. ಸಂ. IV ಮದ್ದೂರು ಗ್ರಾಮ ಯಳಂದೂರು ತಾ. ಚಾಮರಾಜನಗರ ಜಿಲ್ಲೆ ಪು. ೭೪೪
೭ ಎ. ಕ. ಸಂ. III ಉಪ್ಪಿನ ಹಳ್ಳಿ ನಂಜನಗೂಡು ತಾ. ಪು. ೪೦೬
೮ ಎ.ಕ. ಸಂ. IX ಪು. ೧೩
೯ ಎ. ಕ. ಸಂ. ಪು ೧೬೮
೧೦ Half yearly Mysore University Journal Vol, II July 1928. p. 224.
೧೧ ಎ. ಕ. ಸಂ. IX ಪು. ೩೧
೧೨ ಎ. ಕ. ಸಂ. IX ಪು. ೧೩
೧೩ ಎ. ಕ. ಸಂ. V ಪು. ೪೭೨
೧೪ ಎ. ಕ. ಸಂ. VII ಪು. ೩೬೦
೧೫ ಎ. ಕ. ಸಂ. XII ಪು. ೬೯
೧೬ ಎ. ಕ. ಸಂ. II ಪು. ೨೭೮
೧೭ ಎ. ಕ ಸಂ. XII ಪು. ೨೩
೧೮ ಎ. ಕ. ಸಂ. V ಪು. ೧೦೦.

ನರಸಿಂಹಯ್ಯನ ಪ್ರತಿಭೀತಿಗಳು (Phobias)

ಪ್ರೊ. ಪಿ. ನಟರಾಜ್

ಒಂದು ಸಂಜೆ ನನ್ನ ಸಹೋದ್ಯೋಗಿಯೊಬ್ಬರು ಮನೆಗೆ ಬಂದು, ನಿಮ್ಮಿಂದ ಒಂದು ಸಹಾಯವಾಗಬೇಕು. ನಮ್ಮ ದೂರದ ಬಂಧು ಒಬ್ಬರಿಗೆ ಕೆಲವು ಮಾನಸಿಕ ಸಮಸ್ಯೆಗಳಿವೆ, ನಿಮ್ಮಲ್ಲಿಗೆ ಕಳುಹಿಸಿ ಕೊಡುತ್ತೇನೆ ದಯವಿಟ್ಟು ಸಹಾಯಮಾಡಿ ಎಂದು ಕೇಳಿಕೊಂಡರು. ಶನಿವಾರ ಸಂಜೆ ಐದು ಘಂಟೆಗೆ ನನ್ನನ್ನು ಭೇಟಿಯಾಗುವಂತೆ ಹೇಳಿ ಆಶ್ವಾಸನೆ ಇತ್ತು ಕಳುಹಿಸಿಕೊಟ್ಟೆ.

ಭೇಟಿಯ ದಿನ, ವೇಳೆಗೆ ಸರಿಯಾಗಿ ಒಬ್ಬ ದೃಢಕಾಯ ವ್ಯಕ್ತಿ ನನ್ನನ್ನು ಭೇಟಿಯಾಗಿ ತಮ್ಮ ಪರಿಚಯವನ್ನು ಮಾಡಿಕೊಂಡರು. ನರಸಿಂಹಯ್ಯನವರು ಹಿರಿಯ ಉನ್ನತ ಪೊಲೀಸ್ ಅಧಿಕಾರಿ ಸುಮಾರು ಐವತ್ತು ವರ್ಷ ವಯಸ್ಸು. ಇಬ್ಬರು ಮಕ್ಕಳ ತಂದೆ. ಪತ್ನಿ ಮತ್ತು ಮಕ್ಕಳನ್ನು ಎಂದೂ ಬಿಟ್ಟಿದ್ದವರಲ್ಲ. ತುಂಬಾ ಧೈರ್ಯವಂತರಂತೆ ಕಂಡುಬಂದರೂ ಆತಂಕ ಮತ್ತು ಕೆಲವು ಪ್ರತಿಭೀತಿಗಳು ಹಲವಾರು ವರ್ಷಗಳಿಂದ ಕಾಡುತ್ತಿದ್ದವು. ಯಾರಲ್ಲೂ ಹೇಳಿಕೊಂಡಿರಲಿಲ್ಲ. ಆದುದರಿಂದ ಅವು ಯಾರಿಗೂ ತಿಳಿದಿರಲಿಲ್ಲ. ಆದರೆ ಅನೇಕ ಸಂದರ್ಭಗಳಲ್ಲಿ ಅವರ ಚಟುವಟಿಕೆಗಳಿಗೆ ಮತ್ತು ಕಾರ್ಯ ನಿರ್ವಹಣೆಗೆ ಅಡ್ಡಿಯುಂಟು ಮಾಡುತ್ತಿದ್ದವು. ಸರ್ಕಾರಿ ಉದ್ಯೋಗದಲ್ಲಿ ವರ್ಗಾವಣೆ ಸರ್ವೇಸಾಮಾನ್ಯ. ಕೆಲವೊಮ್ಮೆ ತಮ್ಮ ವರ್ಗಾವಣೆಯನ್ನು ತಮ್ಮ ಪ್ರಭಾವದಿಂದ ರದ್ದು ಮಾಡಿಸಿಕೊಂಡಿದ್ದರು. ಒಮ್ಮೆ ವರ್ಗವಾದಾಗ ಏನೆಲ್ಲಾ ಪ್ರಯತ್ನಪಟ್ಟರೂ ರದ್ದಾಗದೆ, ಹೋಗಲೇಬೇಕಾಗಿ ಬಂದಾಗ, ಹಲವಾರು ರಾತ್ರಿ ನಿದ್ರೆಯಿಲ್ಲದೆ, ಚಿಂತೆಯಿಂದ ನರಕವನ್ನು ಅನುಭವಿಸಿದ್ದರು. ಒಮ್ಮೆಯಂತೂ ವಿಧಿಯಿಲ್ಲದೆ ಹೊರಟಾಗ ಪ್ರಯಾಣದುದ್ದಕ್ಕೂ ಚಿಂತೆ, ಆತಂಕ, ಪ್ರತಿಭೀತಿಗಳಿಂದ ನರಳಿ ನರಳಿ ಸಾಕಾಗಿ, ಬೆಳಿಗ್ಗೆ ರಿಪೋರ್ಟ್ ಮಾಡಿಕೊಂಡು ತಕ್ಷಣ ಖಾಯಿಲೆಯ ನೆಪ ಹೇಳಿ ಊರಿಗೆ ಹಿಂತಿರುಗಿ ಬಂದು ಕೆಲವು ದಿನಗಳ ಕಾಲ ರಜಾ ಮೇಲಿದ್ದರು. ಆಗಲೇ ನನ್ನನ್ನು ಭೇಟಿಯಾದುದು.

ಸ್ವಲ್ಪ ಕಾಲ ಮಾತನಾಡಿದ ನಂತರ, ತಮ್ಮ ಗುಟ್ಟು ರಟ್ಟಾಗುವುದಿಲ್ಲ ಎಂಬುದನ್ನು ಖಚಿತ ಮಾಡಿಕೊಂಡನಂತರ ತಮ್ಮೆಲ್ಲಾ ಸಮಸ್ಯೆಗಳನ್ನೂ ಬಿಚ್ಚು ಮನಸ್ಸಿನಿಂದ ಹೇಳಿಕೊಂಡು, ತಮ್ಮ ಸಮಸ್ಯೆಗಳಿಗೆ ಪರಿಹಾರವಿದೆಯೇ ಎಂದು ತಮ್ಮ ಸಂದೇಹವನ್ನು ವ್ಯಕ್ತಪಡಿಸಿದರು. ಆಶ್ವಾಸನೆಯನ್ನಿತ್ತಾಗ ಅವರಿಗೆ ಎಲ್ಲಿಲ್ಲದ ನೆಮ್ಮದಿಯುಂಟಾಯ್ತು ಎಂದು ನಿಟ್ಟುಸಿರು ಬಿಟ್ಟರು.

ಅವರ ಮಾನಸಿಕ ಸಮಸ್ಯೆಗಳೆಂದರೆ - ೧ ಪೊಲೀಸ್ ಉನ್ನತ ಅಧಿಕಾರಿಯಾದುದರಿಂದ ಅನೇಕ ಸಂದರ್ಭಗಳಲ್ಲಿ ಕಾರ್ಯಾರ್ಥವಾಗಿ ಇತರ ಅಧಿಕಾರಿಗಳನ್ನು ಭೇಟಿಯಾಗಲು ಹೋಗಲೇಬೇಕು. ಅವರು ಕಛೇರಿಯ ಮೇಲಿನ ಅಂತಸ್ತಿನಲ್ಲಿದ್ದಾರೆ. ಲಿಫ್ಟ್ (lift) ನಲ್ಲೇ ಮೇಲೇರಬೇಕು. ಹಾಗೆ ಮಾಡಲು ಎಲ್ಲಿಲ್ಲದ ಅತಿ ಭಯ. ಅದು ಎಲ್ಲಿ ಮಧ್ಯದಲ್ಲೇ ನಿಂತು ಹೋಗುವುದೋ ಎಂಬ ಭೀತಿ. ಈ ಭಯದ ಕಾರಣದಿಂದಾಗಿ ಭೇಟಿಯನ್ನು ಮುಂದೂಡುತ್ತಿದ್ದುದೂ ಉಂಟು. ೨ ಹೊಟೇಲ್ ಕೊಠಡಿಯಲ್ಲಿ ಅಥವಾ ಕಛೇರಿಯ ಕೊಠಡಿಯಲ್ಲಿ ಬಾಗಿಲು ಮುಚ್ಚಿ ಒಬ್ಬನೇ ಇರಲು ತುಂಬಾ ಭಯ. ಇದರಿಂದಾಗಿ ಯಾರಾದರೂ ಮತ್ತೊಬ್ಬ ವ್ಯಕ್ತಿಯನ್ನು ಜೊತೆಯಲ್ಲಿ ಕರೆದೊಯ್ದು ಹೊರಕುಳ್ಳಿರಿಸಿ, ಅಧಿಕಾರಿಯನ್ನು ಭೇಟಿಯಾಗುತ್ತಿದ್ದರು. ಆ ಅಧಿಕಾರಿ ಅಲ್ಲಿಲ್ಲದಿದ್ದರೆ, ಒಂಟಿಯಾಗಿ ಕಾದುಕುಳಿತುಕೊಳ್ಳದೆ ಹೊರಬಂದು ಜೊತೆಯ ವ್ಯಕ್ತಿಯೊಡನೆ ಕಾಯುತ್ತಿದ್ದರು. ೩ ಅಪರಿಚಿತ ಸ್ಥಳದಲ್ಲಿ ಕಿರಿದಾದ ಕೊಠಡಿಯಲ್ಲಿ ಏಕಾಂಗಿಯಾಗಿರಲು ಭಯ. ೪ ಮನೆಯಾಗಲಿ, ಹೊಟೇಲ್ ಆಗಲಿ ಅಥವಾ ಕಛೇರಿಯಲ್ಲಾಗಲಿ ಶೌಚಕ್ರಿಯೆಗಾಗಿ, ಶೌಚಾಲಯದಲ್ಲಿ ಒಬ್ಬರೇ ಕುಳಿತುಕೊಳ್ಳಲು ಭಯ. ಶೌಚಾಲಯದಲ್ಲಿ ಯಾರನ್ನು ತಾನೇ ಜೊತೆಯಲ್ಲಿ ಕೂರುವಂತೆ ಹೇಳಲು ಸಾಧ್ಯ. ಎಂತಹ ನಾಚಿಕೆಕೇಡಿನ ಸ್ಥಿತಿ ಅದು. ೫ ಕುಟುಂಬದಿಂದ (ಹೆಂಡತಿ ಮಕ್ಕಳಿಂದ) ಸ್ವಲ್ಪಕಾಲವೂ ದೂರವಿರಲು ಸಾಧ್ಯವಿಲ್ಲ. ಎಲ್ಲಿ ಅವರನ್ನು ಕಳೆದುಕೊಂಡೇನೋ ಎಂಬ ಭಯ ಅವರನ್ನು ಕಾಡುತ್ತಿತ್ತು. ಆದುದರಿಂದಲೇ ವರ್ಗವಾಗಿ ರಿಪೋರ್ಟ್ ಮಾಡಿಕೊಳ್ಳಲು ಹೋದಾಗ, ಭೀತಿಯಿಂದ ಮಾರನೆ ದಿನವೇ ಹಿಂತಿರುಗಿ ಬಂದುದು.

ಅವರಿತ್ತ ಎಲ್ಲಾ ವಿವರಣೆಗಳಿಂದ, ಅವರ ಪ್ರತಿಭೀತಿ ಪ್ರಾರಂಭವಾದುದು ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ. ಅವರು ವ್ಯಾಸಂಗಕ್ಕಾಗಿ ಬೇರೆ ಊರಿನ ವಿದ್ಯಾರ್ಥಿನಿಲಯದಲ್ಲಿ ಎರಡನೇ ಮಹಡಿಯ ಒಂದು ಕೊಠಡಿಯಲ್ಲಿ ಬೇರೊಬ್ಬ ವಿದ್ಯಾರ್ಥಿಯೊಡನೆ ಇದ್ದರಂತೆ. ಒಂದು ದಿನ ಇವರಿಗೆ ತುಂಬಾ ಜ್ವರವಿದ್ದುದರಿಂದ ಕಾಲೇಜಿಗೆ ಹೋಗಿರಲಿಲ್ಲ. ಹಾಸ್ಟಲ್‌ನಲ್ಲೇ ಉಳಿದಿದ್ದರು. ಸಹ ವಿದ್ಯಾರ್ಥಿಯೂ ಇವರನ್ನು ನೋಡಿಕೊಳ್ಳಲು ಜೊತೆಯಲ್ಲೇ ಇದ್ದನಂತೆ. ಬೇರೆಲ್ಲರೂ ಕಾಲೇಜಿಗೆ ಹೋಗಿದ್ದರಂತೆ. ಇವರು ನಿದ್ದೆ ಮಾಡುತ್ತಿದ್ದಾಗ, ಇವರ ಕೊಠಡಿಯ ಸಹ ವಿದ್ಯಾರ್ಥಿ ಸುಮಾರು ೧೨.೩೦ ಘಂಟೆ ಇರಬಹುದು, ಆತ ಊಟಕ್ಕಾಗಿಯೋ ಅಥವಾ ಮತ್ತಾವುದೋ ಕೆಲಸಕ್ಕಾಗಿಯೋ ಕೊಠಡಿ ಅಗಳಿ ಹಾಕಿಕೊಂಡು ಹೋಗಿದ್ದನಂತೆ. ಇವರು ಏನೋ ಬೆಚ್ಚು ಬಿದ್ದು ಎದ್ದು ನೋಡಿದರೆ ಕೊಠಡಿಯಲ್ಲಿ ಯಾರೂ ಇಲ್ಲ. ಹೊರಗಿನಿಂದ ಬಾಗಿಲು ಹಾಕಿಕೊಂಡಿದ್ದಾರೆ. ಜ್ವರ ಹೆಚ್ಚಾಗಿ ನಡುಕ ಬಂದಿದೆ. ಭಯದಿಂದ ಕೂಗಿಕೊಂಡರೆ ಯಾರಿಂದಲೂ ಉತ್ತರವಿಲ್ಲ. ಬಾಗಿಲು ತೆರೆದು ಹೊರ ಬರಲು ಅಗಳಿ ಹಾಕಿದೆ. ತಾನು ಸತ್ತು ಹೋದರೇನು ಗತಿ ಎಂಬ ಭೀತಿಯಿಂದ ಕಿರುಚಿಕೊಂಡರಂತೆ. ಇವರ ಕಿರುಚಾಟವನ್ನು ಕೇಳಿ ಹೊರಗಿನವರಾರೋ ಬಂದು ಅಗಳಿ ತೆಗೆದರಂತೆ. ಆ ವೇಳೆಗಾಗಲೇ ಭಯದಿಂದ ಮೈ ಎಲ್ಲಾ ಬೆವತು ಹೋಗಿತ್ತಂತೆ. ಅಂದಿನಿಂದಲೇ ಕೊಠಡಿಯಲ್ಲಿ ಒಂಟಿಯಾಗಿರಲು ಅತಿ ಭೀತಿ

ಕಾಣಿಸಿಕೊಂಡುದು ಎಂದು ಹೇಳಿದರು. ಅನಂತರ ಅದು ವ್ಯಾಪಕವಾಗಿ ಇತರ ಭೀತಿಗಳು ಕಾಣಿಸಿಕೊಂಡು ತನ್ನನ್ನು ಅಸಹಾಯಕನನ್ನಾಗಿ ಮಾಡಿವೆ. ಅನೇಕ ಸಂದರ್ಭಗಳಲ್ಲಿ ನಾಚಿಕೊಳ್ಳುವಂತೆಯೂ ಮಾಡಿವೆ ಎಂದು ತಿಳಿಸಿದರು. ಏನಾದರೂ ಮಾಡಿ ನಾನು ಎಷ್ಟು ದಿನಗಳಾದರೂ ನಿಮ್ಮಲ್ಲಿಗೆ ಬರುತ್ತೇನೆ, ದಯವಿಟ್ಟು ಇವುಗಳಿಂದ ಮುಕ್ತನನ್ನಾಗಿ ಮಾಡಿ ಎಂದು ಬೇಡಿಕೊಂಡರು.

ಅವರ ಎಲ್ಲಾ ವಿಧವಾದ ಭೀತಿಗಳನ್ನೂ ಕ್ರಮಬದ್ಧ ನಿಶ್ಚೋದನಾ ಚಿಕಿತ್ಸೆಯಿಂದ ಪರಿಹರಿಸಿ, ಸಾಕ್ಷಪಡಿಸಲಾಯ್ತು. ಲಿಫ್ಟ್‌ಅನ್ನು ಧೈರ್ಯವಾಗಿ ಏರಿಬಂದರು. ಕೊಠಡಿಯಲ್ಲಿ ಏಕಾಂಗಿಯಾಗಿ ಬಾಗಿಲು ಮುಚ್ಚಿ ಒಳಗದ್ದಿ ಬಂದರು. ಶೌಚಗೃಹದಲ್ಲಿ ಒಂಟಿಯಾಗಿ ಕುಳಿತು ಬಂದರು, ಒಬ್ಬರೇ ಕುಟುಂಬದವರಾರೂ ಇಲ್ಲದೆ ಟ್ರೈನಲ್ಲಿ ಊರಿಗೆ ಹಿಂತಿರುಗಿದರು. ಈಗ ನನಗೆ ಯಾವ ಭೀತಿಯೂ ಕಾಡುತ್ತಿಲ್ಲ ಎಂದು ಫೋನ್ ಮಾಡಿ ತಿಳಿಸಿದರು.

ಈ ಸಂಚಿಕೆಯ ಬರಹಗಾರರು

೧. ಡಾ. ಬಿ. ಷಿ. ನೀಲಕಂಠ
ಪ್ರಾಧ್ಯಾಪಕರು ಮತ್ತು ನಿರ್ದೇಶಕರು
ಅರ್ಥಶಾಸ್ತ್ರ ವಿಭಾಗ
ಜೆ. ಎಸ್. ಎಸ್. ಮಹಿಳಾ ಕಾಲೇಜು, ಸ್ನಾತಕೋತ್ತರ ಕೇಂದ್ರ
ಸರಸ್ವತಿಪುರಂ, ಮೈಸೂರು-೫೭೦ ೦೦೯

೨. ಜಿ. ಆರ್. ಪರಮೇಶ
ಯೋಜನಾ ಸಹಾಯಕ
ಯುಕ್ತ ಗ್ರಾಮೀಣ ತಂತ್ರಜ್ಞಾನ ಕೇಂದ್ರ (ಕಾರ್ಟ್)
ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್ ಐ ಇ)
ಮಾನಂದವಾಡಿ ರಸ್ತೆ, ಮೈಸೂರು-೫೭೦ ೦೦೮

೩. ಪ್ರೊ. ಅಂಬಳಿಕೆ ಹಿರಿಯಣ್ಣ
ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೪. ಡಾ. ಆರ್. ರಾಮಕೃಷ್ಣ
ಪ್ರವಾಚಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೫. ಪರ್ವೀನ್ ಸಲೀಂ ಮಂಗಳೂರು
ವೈ/ಆ ಅನಾರ್ಕಲಿ ಸಲೀಂ
ಮೇಲಿನ ಮಹಡಿ, ಅಂಚೆಕೇರಿ ಬೀದಿ
ಶ್ರೀರಂಗಪಟ್ಟಣ, ಮಂಡ್ಯ-೫೭೧ ೪೩೮

೬. ವಿ.ಪ್ರಸನ್ನಕುಮಾರ್
೨೦೬೯, ಏಕ್ತಾಹೌಸ್
೧೧ನೆಯ ಅಡ್ಡರಸ್ತೆ, ಜನತಾನಗರ
ತೊಣಚಿಕೊಪ್ಪಲು ಲೇಔಟ್, ಮೈಸೂರು-೫೭೦ ೦೨೦

೭. **ಡಾ. ಎಲ್. ಮಂಜುಳಾಕ್ಷಿ**
ಸಂಶೋಧನಾ ಸಹಯೋಜಕಿ, ಭಾಷಾವಿಜ್ಞಾನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೮. **ವಿ. ವಿಜಯಮ್ಮ**
ಸಂಶೋಧನಾ ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೯. **ಪಿ. ಎಸ್. ಪೂರ್ಣಿಮಾ**
ಅತಿಥಿ ಉಪನ್ಯಾಸಕಿ, ಭಾಷಾಂತರ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೧೦. **ವಿಜಯಲಕ್ಷ್ಮಿ ಮಣಾಪುರ**
ಸಂಶೋಧನಾ ವಿದ್ಯಾರ್ಥಿನಿ, ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೧೧. **ಡಾ. ಕೆ. ಎಂ. ಮಹದೇವಸ್ವಾಮಿ**
ಉಪನ್ಯಾಸಕರು, ಇತಿಹಾಸ ವಿಭಾಗ
ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜು
ಟಿ. ನರಸೀಪುರ, ಮೈಸೂರು ಜಿಲ್ಲೆ

೧೨. **ಪ್ರೊ. ಪಿ. ನಟರಾಜ್**
ನಿವೃತ್ತ ಪ್ರಾಧ್ಯಾಪಕರು, ಮನೋವಿಜ್ಞಾನ ವಿಭಾಗ
೧೩ನೇ ಕ್ರಾಸ್, ವಿ.ವಿ. ಮೊಹಲ್ಲಾ,
ಮೈಸೂರು - ೫೭೦ ೦೦೨

ಕೆ.ಸಂ. 8105 - ಎಂಯುಪಿಎಂ - 300 ಪ್ರತಿಗಳು - 14-7-2004